بِسْمِ اللهِ الرَّحْمٰنِ الرَّحِيْمِ　نَحْمَدُهٗ وَنُصَلِّى عَلٰى رَسُوْلِهِ الْكَرِيْمِ　وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ

# ಬದರ್

ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 35

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**10 ಸೆಪ್ಟೆಂಬರ್ 2020, 10 ತಬೂಕ್ 1399 ಹಿಜರಿ ಶಮ್ಸಿ,**
**21 ಮುಹರ್ರಮ್ 1442 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

اِنَّ اللّٰهَ لَا يَغْفِرُ اَنْ يُّشْرَكَ بِهٖ وَيَغْفِرُ مَا
دُوْنَ ذٰلِكَ لِمَنْ يَّشَآءُ ۚ وَمَنْ يُّشْرِكْ بِاللّٰهِ
فَقَدِ افْتَرٰٓى اِثْمًا عَظِيْمًا (النساء:49)

(ಅನ್ನಿಸಾಅ್:*49*)

ಅಂದರೆ: ಅವನೊಂದಿಗೆ ಸಹಭಾಗಿತ್ವ ಕಲ್ಪಿಸುವುದನ್ನು - ಶಿರ್ಕನ್ನು - ಖಚಿಡಿತವಾಗಿಯೂ ಅಲ್ಲಾಹನು ಕ್ಷಮಿಸಲಾರ. ಅದರ ಹೊರತಿರುವುದನ್ನು ತಾನಿಚ್ಛಿಸುವವರಿಗೆ ಅವನು ಕ್ಷಮಿಸುವನು.ಯಾವನಾದರೂ ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸಿದರೆ ಖಂಡಿತವಾಗಿಯೂ ಅವನು ಘೋರ ಪಾಪಕರವಾದ ಮಿಥ್ಯಾರೋಪವನ್ನು ಮಾಡುತ್ತಾನೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

* ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು. ಈ ಇಮಾಮರು ನಿಮ್ಮ ನಮಾಝಿನ ನೇತೃತ್ವ ವಹಿಸಿಕೊಂಡಿರುವವರು. ಅವರು ಸರಿಯಾಗಿ ನಮಾಝ್ ನಿರ್ವಹಿಸಿದರೆ ನಿಮಗೆ ಪುಣ್ಯ ದೊರೆಯುವುದು, ತಪ್ಪು ಮಾಡಿದರೂ ನಿಮಗೆ ಪುಣ್ಯ ದೊರೆಯುವುದು. ಆದರ ಹೊಣೆ ಇವಾಮರದಾಗುವುದು. (ಸಹೀಹ್ ಬುಖಾರಿ, ಸಂಪುಟ-2, ಕಿತಾಬುಲ್ ಅಝಾನ್)

* ಹಝ್ರತ್ ವಜಾಬಿರ್ ಬಿನ್ ಅಬ್ದುಲ್ಲ(ರ) ವರದಿ ವಾಡುತ್ತಾರೆ. ಹಝ್ರತ್ ಮುಆದ್ದ್ ಬಿನ್ ಜಬಲ್ ನಬಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರ ಜೊತೆಯಲ್ಲಿ ನಮಾಝ್ ಮಾಡುತ್ತಿದ್ದರು. ಮತ್ತು ಹಿಂದಿರುಗಿ ಹೋಗಿ ತಮ್ಮ ಸಮುದಾಯದ ನೇತೃತ್ವ ವಹಿಸಿಕೊಳ್ಳುತ್ತಿದ್ದರು. (ಸಹೀಹ್ ಬುಖಾರಿ, ಸಂಪುಟ-2, ಕಿತಾಬುಲ್ ಅಝಾನ್).

* ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು. ನಿಮ್ಮಲ್ಲಿ ಯಾರಾದರೂ ನಮಾಝ್ ಮಾಡಿಸ ಬಯಸುವವರಾದರೆ ಅವರು ಲಘುವಾಗಿ ನಮಾಝ್ ಮಾಡಿಸಬೇಕು. ಏಕೆಂದರೆ ಅವರಲ್ಲಿ ದುರ್ಬಲರು, ಅಸ್ವಸ್ಥರು ಮತ್ತು ವೃದ್ಧರು ಇರಬಹುದು. ನೀವು ಒಬ್ಬಂಟಿಯಾಗಿ ನಮಾಝ್ ನಿರ್ವಹಿಸುವಾಗ ಬೇಕಾದಷ್ಟು ದೀರ್ಘ ಸಮಯ ಮಾಡಬಹುದು. (ಸಹೀಹ್ ಬುಖಾರಿ, ಸಂಪುಟ-2, ಕಿತಾಬುಲ್ ಅಝಾನ್).

## ನೀವು ನನ್ನನ್ನು ಅನುಸರಿಸಿದರೆ ನಿಮ್ಮೊಳಗಿನ ವಿಗ್ರಹಗಳನ್ನು ಮುರಿದು ಹಾಕಲು ಅರ್ಹರಾಗುವಿರಿ.

**ಮನುಷ್ಯನ ಎದೆಗೂಡು ಪ್ರಕಾಶಗಳ ಕೇಂದ್ರವಾಗಿದೆ. ಅದೇ ಕಾರಣದಿಂದ ಅದು ಬೈತುಲ್ಲಾಹ್ ಎಂದು ಕರೆಯಲ್ಪಡುತ್ತದೆ. ಅದರಲ್ಲಿ ಇರುವ ವಿಗ್ರಹಗಳನ್ನು ಒಡೆದು ಹಾಕುವುದೇ ಮಹತ್ಕಾರ್ಯವಾಗಿದೆ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನನ್ನ ಅನುಯಾಯಿಯಾಗಿರಿ, ನನ್ನನ್ನು ಹಿಂಬಾಲಿಸಿರಿ. ಈ ಖಾನ ಕೆಅ್‌ಬ (ಎದೆಗೂಡು) ವಿಗ್ರಹಗಳಿಂದ ಪವಿತ್ರಗೊಳಿಸಲು ಒಂದು ಜಿಹಾದಿನ (ಹೋರಾಟದ) ಅವಶ್ಯಕತೆ ಇದೆ. ಆ ಜಿಹಾದಿನ ಮಾರ್ಗ ನಾನು ನಿಮಗೆ ತೋರಿಸುತ್ತೇನೆ. ಮತ್ತು ನಿಮಗೆ ಭರವಸೆ ನೀಡುತ್ತೇನೆ, ನೀವು ಅದರಂತೆ ನಡೆದುಕೊಂಡರೆ ಆ ವಿಗ್ರಹಗಳನ್ನು ಒಡೆದು ಹಾಕುವಿರಿ. ಅಂತೆಯೇ ಈ ಮಾರ್ಗ ನನ್ನ ಕಪೋಲ ಕಲ್ಪಿತವಾದುದಲ್ಲ. ಬದಲು ಅದಕ್ಕಾಗಿ ಅಲ್ಲಾಹನು ನನ್ನನ್ನು ನಿಯುಕ್ತಿಗೊಳಿಸಿದ್ದಾನೆ. ಆ ಮಾರ್ಗ ಯಾವುದು? ನನ್ನ ಅನುಯಾಯಿಯಾಗಿರಿ. ಮತ್ತು ನನ್ನನ್ನು ಹಿಂಬಾಲಿಸಿರಿ. ಈ ಧ್ವನಿ ಹೊಸದಾದ ಧ್ವನಿ ಅಲ್ಲ. ಮಕ್ಕ ನಗರವನ್ನು ವಿಗ್ರಹಗಳಿಂದ ಪವಿತ್ರಗೊಳಿಸಲು ರಸುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರು ಸಹ ಹೇಳಿದ್ದರು. **ಖುಲ್ ಇನ್‌ಕುನ್‌ತುಮ್ ತುಹಿಬ್ಬುನಲ್ಲಾಹ್ ಫತ್ತ ಬಿಊನಿ ಯುಹಿಬ್‌ಕುಮುಲ್ಲಾಹ್** (ಆಲಿ ಇಮ್ರಾನ್-32) ಅದೇ ರೀತಿ ನೀವು ನನ್ನನ್ನು ಅನುಸರಿಸಿದರೆ ನೀವು ತಮ್ಮೊಳಗಿನ ವಿಗ್ರಹಗಳನ್ನು ಮುರಿದು ಹಾಕಲು ಅರ್ಹರಾಗುವಿರಿ, ಅದೇ ರೀತಿ ಎದೆಗೂಡು ಅದು ವಿಭಿನ್ನ ರೀತಿಯ ವಿಗ್ರಹಗಳಿಂದ ತುಂಬಿ ಹೋಗಿದೆ, ಪವಿತ್ರಗೊಳಿಸಲು ಅರ್ಹರಾಗುವಿರಿ, ಆತ್ಮ ಪರಿಶುದ್ಧಿಗೋಸ್ಕರ ಚಿಲ್ಲಾಕಶಿ (ನಲವತ್ತು ದಿನಗಳ ಜಪ) ಮಾಡುವ ಅವಶ್ಯಕತೆ ಇಲ್ಲ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರ ಸಹಾಬರು ಚಿಲ್ಲಾಕಶಿ (ನಲವತ್ತು ದಿನಗಳ ಜಪ) ಮಾಡಿರಲಿಲ್ಲ. ಯಾವುದೇ ಆಗು ಹೋಗು, ಸಾಂಪ್ರದಾಯಿಕ ಚಳುವಳಿಯಾಗಿ ಬಂದಂತಹ 'ವಝೀಫ' ಮಾಡಿರಲಿಲ್ಲ. ಬದಲು, ಒಂದು ಬೇರೆಯೇ ವಸ್ತುವಿತ್ತು. ಅವರು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರ ಅನುಸರಣೆಯಲ್ಲಿ ಮುಳುಗಿ ಹೋಗಿದ್ದರು. ಅವರಲ್ಲಿ ಏನು ಪ್ರಕಾಶವಿತ್ತೊ ಅದು ಅವರ ಅನುಸರಣೆಯ ನಳಿಕೆಯಿಂದ ಬಂದು ಸಹಾಬರ ಹೃದಯಗಳ ಮೇಲೆ ಬೀಳುತ್ತಿತ್ತು. ಅದು ಅಲ್ಲಾಹನ ಹೊರತಾದ ಭಾವನೆಗಳನ್ನು ಒಡೆದು ಹಾಕುತಿತ್ತು. ಅಂಧಕಾರದ ಬದಲಾಗಿ ಅವರ ಎದೆಗೂಡುಗಳಲ್ಲಿ ಪ್ರಕಾಶ ತುಂಬುತಿತ್ತು. ನೆನಪಿಡಿರಿ. ಆ ಸಮಯವು ಇಂತಹುದೇ ಪರಿಸ್ಥಿತಿಗಳಿದ್ದವು. ಎಲ್ಲಿಯವರೆಗೆ ಆ ಪ್ರಕಾಶ ಅಲ್ಲಾಹನ ಮುಖಾಂತರ ಬಂದು ನಿಮ್ಮ ಹೃದಯಗಳ ಮೇಲೆ ಬೀಳುವುದಿಲ್ಲವೋ ಅಲ್ಲಿಯತನಕ ಆತ್ಮಶುದ್ಧಿಯಾಗಲು ಸಾಧ್ಯವಿಲ್ಲ. ಮನುಷ್ಯನ ಎದೆಗೂಡು ಪ್ರಕಾಶಗಳ ಕೇಂದ್ರವಾಗಿದೆ. ಅದೇ ಕಾರಣದಿಂದ ಅದು ಬೈತುಲ್ಲಾಹ್ ಎಂದು ಕರೆಯಲ್ಪಡುತ್ತದೆ. ಅದರಲ್ಲಿರುವ ವಿಗ್ರಹಗಳನ್ನು ಒಡೆದು ಹಾಕುವುದೇ ಮಹತ್ಕಾರ್ಯವಾಗಿದೆ. ಕೇವಲ ಅಲ್ಲಾಹನೇ ಉಳಿದಿರಬೇಕು. ಹದೀಸಿನಲ್ಲಿ ಬರುತ್ತದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು. **ಅಲ್ಲಾಹು ಅಲ್ಲಾಹು ಫೀ ಅಸ್‌ಹಾಬಿ.** ನನ್ನ ಸಹಾಬರ ಹೃದಯಗಳಲ್ಲಿ ಅಲ್ಲಾಹನೇ ಇದ್ದಾನೆ. ಅದರ ಅರ್ಥ ಏಕ ಅಸ್ತಿತ್ವದ ಸಮಸ್ಯೆಯ ಮೇಲೆ ನಡೆಯುವುದು ಅಲ್ಲ. ನೌಝುಬಿಲಾಹ್ ಎಲ್ಲಾ ನಾಯಿ ಕತ್ತೆಯನ್ನು ಸಹ ದೇವನು ಎಂದು ಹೇಳುವುದು ಅಲ್ಲ ಖಂಡಿತವಾಗಿಯು ಹಾಗಲ್ಲ. ಅದರ ಮುಖ್ಯ ಉದ್ದೇಶವೆಂದರೆ ಮನುಷ್ಯನ ಎಲ್ಲ ಕಾರ್ಯಗಳು ದೇವನ (ಅಲ್ಲಾಹನ) ಸಂಪ್ರೀತಿಗೋಸ್ಕರ ಆಗಿರಬೇಕಲ್ಲದೆ ಬೇರೇನೂ ಆಗಿರಬಾರದು. ಈ ಸ್ಥಾನವು ಅಲ್ಲಾಹನ ಅನುಗ್ರಹವಿಲ್ಲದೇ ಪಡೆಯುವುದು ಸಾಧ್ಯವಿಲ್ಲ.

**(ಮಲ್ಫೂಝೂತ್ ಸಂಪುಟ 1, ಪುಟ 173 ಮುದ್ರಣ ಖಾದಿಯಾನ್ 2018)**

**ಯಾರಾದರು ಹಿಂದೂ ಸಿಖ್ ಅಥವಾ ಕ್ರೈಸ್ತನು ಮುಸ್ಲಿಮರ ಮಸೀದಿಯಲ್ಲಿ ಬಂದು ತಮ್ಮದೇ ರೀತಿಯಲಿ ದೈವಾರಾಧನೆ ಮಾಡಬಯಸಿದರೆ ಯಾವ ಮುಸಲ್ಮಾನನಿಗೂ ಅವನನ್ನು ತಡೆಯುವ ಹಕ್ಕಿಲ್ಲ.**

ಪವಿತ್ರ ವಚನ: **ವಮನ್ ಅಝ್‌ಲಮು ಮಿಮ್ಮನ್ ಮನಅ ಮುಸಾಜಿದಲ್ಲಾಹಿ ಅಂಯ್ಯುಝ್ಕರ ಫೀಹಿ ಇಸ್ಮುಹೂ,** ಅದರ ವ್ಯಾಖ್ಯಾನದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಅಲ್ಲಾಹನು ಹೇಳುತ್ತಾನೆ ಯಾವ ವ್ಯಕ್ತಿ ಅಲ್ಲಾಹನ ಹೆಸರು ಹೇಳುವುದರಿಂದ ತಡೆಯುತ್ತಾನೋ, ಅವನ ಆರಾಧನೆ ಮಾಡುವುದರಿಂದ ತಡೆಯುತ್ತಾನೋ ಹೀಗೆ ಅವುಗಳನ್ನು ತಡೆ ಮಾಡಬಯಸುತ್ತಾನೋ ಅವನು

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಹ್ಮದಿಯಾ ಜಮಾಅತಿನ ಮೇಲೆ 2019–2020ರ ಸಾಲಿನಲ್ಲಿ ಹೊಂದಿರುವ ಪ್ರಗತಿಯ ಬಗ್ಗೆ ಸಂಕ್ಷಿಪ್ತ ಪ್ರಸ್ತಾವನೆ.**

**ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನ ಪ್ರಗತಿಯ ಹೆಜ್ಜೆ ಮುಂದೆಯೇ ಸಾಗಿದೆ.**

**ಅಲ್ಲಾಹನ ಅನುಗ್ರಹದಿಂದ ಈ ವರ್ಷ ಲೋಕದೆಲ್ಲಡೆ, ಪಾಕಿಸ್ತಾನವನ್ನು ಹೊರತುಪಡಿಸಿ, ಸ್ಥಾಪಿತವಾದ ಹೊಸ ಜಮಾಅತುಗಳ ಸಂಖ್ಯೆ 288 ಆಗಿದೆ *ಈ ಹೊಸ ಜಮಾಅತುಗಳಲ್ಲದೆ ಹೊಸದಾಗಿ 1040 ಸ್ಥಳಗಳಲ್ಲಿ ಮೊದಲ ಬಾರಿಗೆ ಅಹ್ಮದಿಯ್ಯತಿನ ಗಿಡ ನೆಡಲಾಯಿತು *ಅಲ್ಲಿ 1040 ಹೊಸ ಜಮಾಅತುಗಳು ಸ್ಥಾಪಿತವಾಗಿವೆ *217 ಹೊಸ ಮಸೀದಿಗಳ ಮಸೀದಿಗಳ ನಿರ್ಮಾಣವಾಯಿತು ಮತ್ತು ನಿರ್ಮಾಣಗೊಂಡ 93 ಮಸೀದಿಗಳು ನಮಗೆ ಲಭಿಸಿವೆ *ಈ ವರ್ಷ 97 ಮಿಶನ್ ಹೌಸುಗಳ ವರ್ಧನೆ ಉಂಟಾಗಿದೆ *114 ದೇಶಗಳಲ್ಲಿ ಒಟ್ಟು ನಲ್ವತ್ತೊಂದು ಸಾವಿರದ ನೂರ ಹನ್ನೊಂದು ವಖಾರೆ ಅಮಲ್ ಮಾಡಲಾಯಿತು. ಹೀಗೆ 52 ಲಕ್ಷ 13 ಸಾವಿರ ಯು.ಎಸ್. ಡಾಲರ್‌ಗಳ ಉಳಿತಾಯವಾಯಿತು *ಕೇಂದ್ರ ಪ್ರತಿನಿಧಿಗಳ ಪರ್ಯಟನೆಗಳು ಹಲವು ದೇಶಗಳಲ್ಲಿ ನಡೆದಿದೆ *ರಖೀಮ್ ಪ್ರೆಸ್ಸಿನ ಮೂಲಕವೂ ಕೆಲಸಗಳು ನಡೆಯುತ್ತಿವೆ *ಖಾಇದ ಯಸ್ಸರ್‌ನಲ್ ಖುರ್‌ಆನಿನ ಮಾದರಿಯಲ್ಲಿ ಪವಿತ್ರ ಖುರ್‌ಆನ್ ಸಹ ಈ ವರ್ಷ ಪ್ರಕಟಿಸಲಾಯಿತು *ವಕಾಲತ್ ಇಶಾಅತಿನ ಪ್ರಕಾಶನದ ಕೆಲಸಗಳ ಬಗ್ಗೆ 93 ದೇಶಗಳಿಂದ ಲಭಿಸಿದ ರಿಪೋರ್ಟ್‌ಗಳ ಪ್ರಕಾರ 407 ವಿವಿಧ ಪಂಫ್ಲೆಟ್ಸ್, ಫೋಲ್ಡರ್ಸ್ ಇತ್ಯಾದಿಗಳನ್ನು 42 ಭಾಷೆಗಳಲ್ಲಿ 42 ಲಕ್ಷ 56 ಸಾವಿರ 659ರ ಸಂಖ್ಯೆಯಲ್ಲಿ ಮುದ್ರಿಸಲಾಗಿದೆ *29 ಭಾಷೆಗಳಲ್ಲಿ 94 ತಅ್‌ಲೀಮ್, ತರ್‌ಬಿಯತ್ ಮತ್ತು ಜ್ಞಾನಪರವಾದ ಲೇಖನಗಳನ್ನೊಳಗೊಂಡ ಪತ್ರಿಕೆ, ನಿಯತಕಾಲಿಕಗಳು ಪ್ರಕಟವಾಗುತ್ತಿವೆ *ಇಲ್ಲಿಂದ 24 ಭಾಷೆಗಳ ಒಂದು ಲಕ್ಷ ತೊಂಬತ್ತು ಸಾವಿರಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಲೋಕದ ಹಲವು ದೇಶಗಳಿಗೆ ಕಳುಹಿಸಲಾಯಿತು. ಇವಲ್ಲದೆ ಹಲವು ದೇಶಗಳಲ್ಲಿ 709 ವಿವಿಧ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು, ಫೋಲ್ಡರ್‌ಗಳನ್ನು ಮತ್ತು ಪಂಪ್ಲೇಟ್‌ಗಳನ್ನು 63 ಲಕ್ಷ 87 ಸಾವಿರದಷ್ಟು ಸಂಖ್ಯೆಯಲ್ಲಿ ಉಚಿತವಾಗಿ ವಿತರಿಸಲಾಯಿತು. ಇವುಗಳ ಮೂಲಕ ಲೋಕದೆಲ್ಲಡೆ ಲಕ್ಷಾಂತರ ಜನರಿಗೆ ಸಂದೇಶ ತಲುಪಿತು.**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಸ್ಲಾಮಿನ ಬಗ್ಗೆ ಇದ್ದ ತಪ್ಪಾದ ಭಾವನೆ ಮತ್ತು ಕಲ್ಪನೆಯನ್ನು ದೂರಮಾಡಿದರು ಹಾಗು ಜಮಾಅತಿನ ಸುಧಾರಣೆ ಬಗ್ಗೆ ಗಮನಹರಿಸಿದ್ದರು**

**ಅಹ್ಮದಿಯಾ ಜಮಾಅತ್ ಇಸ್ಲಾಮಿನ ಸುಂದರವಾದ ಪಾಠದಿಂದ ಅದರ ಯಥಾರ್ಥ ಸ್ವರೂಪವನ್ನು ತೋರಿಸಿ ಶತ್ರುಗಳನ್ನು ಸಹ ತಮ್ಮ ತಪ್ಪನ್ನು ಒಪ್ಪುವಂತೆ ಮಾಡುತ್ತದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಅವರ ಜೀವನಶೈಲಿಯ ಸರಿಯಾದ ಅರಿವು ಕೊಡುತ್ತಿದೆ. ಈ ನಾಮಧಾರಿಗಳಾದ ಉಲೇಮಾಗಳು ತಮ್ಮನ್ನು ತಾವೇ ಇಸ್ಲಾಮಿನ ಗುತ್ತೆದಾರರಂದು ಭಾವಿಸಿ ಇತರ ಜನರನ್ನು ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನೊಡನೆ ಹಗೆಯುಂಟು ಮಾಡುತ್ತಾರೆ. ಹೀಗೆಲ್ಲ ಮಾಡಿ ನಮ್ಮ ವಿರುದ್ಧವೇ ಮಾತನಾಡುತ್ತಾರೆ**

**ಇನ್‌ಶಾ ಅಲ್ಲಾಹ್. ಈ ವಿರೋಧಿಗಳ ಪ್ರಯತ್ನಗಳು ಒಂದು ದಿನ ಧೂಳೀಪಟವಾಗುವುದು ಎಂದು ಪ್ರತೀಕ್ಷಿಸುತ್ತೇವೆ. ಅಲ್ಲಾಹನ ನೆರವು ನಮ್ಮೊಡನೆ ಇರುವುದು. ಇನ್‌ಶಾ ಅಲ್ಲಾಹ್. ಈಗಲೂ ಇದೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–08–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

يُرِيْدُوْنَ لِيُطْفِـُٔوْا نُوْرَ اللّٰهِ بِاَفْوَاهِهِمْ وَاللّٰهُ مُتِمُّ نُوْرِهٖ وَلَوْ كَرِهَ الْكٰفِرُوْنَ○ هُوَ الَّذِيْٓ اَرْسَلَ رَسُوْلَهٗ بِالْهُدٰى وَدِيْنِ الْحَقِّ لِيُظْهِرَهٗ عَلَى الدِّيْنِ كُلِّهٖ وَلَوْ كَرِهَ الْمُشْرِكُوْنَ○

**ಯುರೀದೂನ ಲಿಯುತ್‌ಫಿಉ ನೂರಲ್ಲಾಹಿ ಬಿಅಫ್‌ವಾಹಿಹಿಮ್ ವಲ್ಲಾಹು ಮುತಿಮ್ಮು ನೂರಿಹೀ ವಲೌ ಕರಿಹಲ್ ಕಾಫಿರೂನ್. ಹುವಲ್ಲಧೀ ಅರ್‌ಸಲ ರಸೂಲಹೂ ಬಿಲ್‌ಹುದಾ ವದೀನಿಲ್‌ಹಖ್ಖಿ ಲಿಯುಝ್‌ಹಿರಹೂ ಅಲದ್ದೀನಿ ಕುಲ್ಲಿಹೀ ವಲೌ ಕರಿಹಲ್ ಮುಶ್ರಿಕೂನ್. (ಅಸ್ಸಫ್: 09–10)**

ಪವಿತ್ರ ಖುರ್‌ಆನಿನ ಈ ಆಯತುಗಳ ಅನುವಾದವು ಹೀಗಿದೆ: ತಮ್ಮ ಬಾಯಿಗಳಿಂದ ಊದಿ ಅಲ್ಲಾಹನ ಪ್ರಕಾಶವನ್ನು ನಂದಿಸಲು ಅವರು ಬಯಸುತ್ತಾರೆ. ಆದರೆ ಅವಿಶ್ವಾಸಿಗಳಿಗೆ ಅದೆಷ್ಟು ಅಪ್ರಿಯವಾದರೂ ಅಲ್ಲಾಹನು ತನ್ನ ಪ್ರಕಾಶವನ್ನು ಪರಿಪೂರ್ಣಗೊಳಿಸುವನು. ಎಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಲಿಕ್ಕಾಗಿ ಅವನು ತನ್ನ ಸಂದೇಶವಾಹಕನನ್ನು ಸತ್ಪಥದರ್ಶನ ಮತ್ತು ಸತ್ಯಧರ್ಮದೊಂದಿಗೆ ನಿಯೋಜಿಸಿದ್ದಾನೆ. ಬಹುದೇವಾರಾಧಕರು ಅದನ್ನು ಇಷ್ಟಪಡದಿದ್ದರೂ ಸರಿ.

ಇಂದು ಆಗಸ್ಟ್ 7. ಈ ದಿನಾಂಕದಂದು ಅಹ್ಮದಿಯಾ ಜಮಾಅತ್ ಯು.ಕೆ.ಯ ಕ್ಯಾಲೆಂಡರ್ ಪ್ರಕಾರ ಜಲ್ಸ ಸಾಲಾನದ ಮೊದಲ ದಿನವಾಗಿದೆ. ಆದರೆ ಲೋಕದೆಲ್ಲಡೆ ಹರಡಿರುವ ಈ ಸಾಂಕ್ರಾಮಿಕ ರೋಗದ ಕಾರಣ ಈ ವರ್ಷ ಜಲಸ ಸಾಲಾನ ಜರುಗಿಸಲಾಗಲಿಲ್ಲ. ಅಲ್ಲಾಹನು ಬೇಗನೆ ಸ್ಥಿತಿಗತಿಗಳನ್ನು ಸಹಜಗೊಳಿಸಲಿ. ನಾವು ಯಾವಾಗಲು ನಡೆಸುತ್ತಿದ್ದ ರೀತಿಯಲ್ಲೇ ಜಲ್ಸ ನಡೆಸುವಂತಾಗಲಿ. ಹಿಂದಿನಂತೆ ಪರಸ್ಪರ ಭೇಟಿಯಾಗಿ ಪ್ರೀತಿ ಮತು ಸಹೋದರತೆಯನ್ನು ವರ್ಧಿಸುವಂತಾಗಲಿ, ಜಲ್ಸ ಸಾಲಾನದ ಕಾರ್ಯಕ್ರಮಗಳನ್ನು ಕೇಳಿ ಜ್ಞಾನ ಮತ್ತು ಆಧ್ಯಾತ್ಮಿಕ ಮಟ್ಟಗಳನ್ನು ಉತ್ತಮಗೊಳಿಸುವಂತಾಗಲಿ. ಹೇಗಿದ್ದರೂ ಸ್ವಲ್ಪ ಮಟ್ಟಿಗಾದರೂ ಈ ಕೊರತೆಯನ್ನು ನೀಗಿಸಲು ಎಂ.ಟಿ.ಎ.

ಶ್ರಮಿಸಿದೆ. ಕಳೆದ ವರ್ಷ ಹಲವು ದೇಶಗಳ ವಾರ್ಷಿಕ ಜಲಸಗಳ ಭಾಷಣಗಳ ಪುನಃ ಪ್ರಸಾರ ಮಾಡಲಾಗುವುದು, ಕೆಲವು ನೇರಪ್ರಸಾರ ಕಾರ್ಯಕ್ರಮಗಳನ್ನು ಸಹ ನಡೆಸಲಾಗುವುದು. ಜಮಾಅತಿನ ಜನರ ದೀನೀ ಮತ್ತು ಜ್ಞಾನಪರವಾದ ದಾಹವನ್ನು ತಣಿಸಲು ಇವು ಸಹಾಯಕವಾಗುವುದು ಎಂದು ನಿರೀಕ್ಷಿಸುತ್ತೇನೆ ಇನ್‌ಶಾ ಅಲ್ಲಾಹ್. ಆದ್ದರಿಂದ ಮನೆಗಳಲ್ಲಿ ಇದ್ದುಕೊಂಡು ಈ ಮೂರು ದಿನಗಳ ಕಾರ್ಯಕ್ರಮಗಳನ್ನು ವಿಶೇಷವಾಗಿ ನೋಡಿರಿ. ಅದರೊಂದಿಗೆ ಜಮಾಅತಿನ ಮೇಲೆ ಉಂಟಾಗುವ ಅಲ್ಲಾಹನ ಅನುಗ್ರಹಗಳ ಕುರಿತು ಕಳೆದ ವರ್ಷದ ರಿಪೋರ್ಟ್ ಬದಲಾಗಿ ಈ ವರ್ಷದ ತಾಜಾ ರಿಪೋರ್ಟ್ ನೀಡುವುದರಿಂದ ಅದು ಜಮಾಅತಿನ ಸಹೋದರರ ವಿಶ್ವಾಸ ವರ್ಧನೆಗೆ ಕಾರಣವಾಗುವುದು ಎಂದು ನಾನು ಯೋಚಿಸಿದೆ. ಕಳೆದ ಆರೇಳು ತಿಂಗಳುಗಳಿಂದ ಇರುವ ಈಗಿನ ಸ್ಥಿತಿಗತಿಗಳಲ್ಲಿ ಹೊರಗೆ ಹೋಗಿ ಉತ್ತಮವಾಗಿ ಮಾಡಲು ಸಾಧ್ಯವಿರುವ ಕೆಲಸಗಳು ನಡೆದಿಲ್ಲವಾದರೂ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನ ಪ್ರಗತಿಯ ಹೆಜ್ಜೆ ಮುಂದೆಯೇ ಸಾಗಿದೆ. ವಿಶೇಷವಾಗಿ ತರಬೇತಿ ಮತ್ತು ಜಮಾಅತಿನೊಂದಿಗೆ ಸಂಬಂಧಗಳಲ್ಲಿ ವಿಶೇಷವಾದ ಬದಲಾವಣೆಗಳು ಉಂಟಾಗಿವೆ ಎಂದು ನನಗೆ ಹಲವರು ಪತ್ರ ಬರೆದು ತಿಳಿಸಿರುವರು. ಅವರಲ್ಲಿ ಮತ್ತು ಅವರ ಮಕ್ಕಳಲ್ಲಿ ಜಮಾಅತಿನೊಂದಿಗೆ ಸಂಬಂಧದಲ್ಲಿ ವರ್ಧನೆ ಉಂಟಾಗಿದೆ ಎಂದು ನನಗೆ ಬರೆದಿರುವರು. ಹೇಗಿದ್ದರೂ ರಿಪೋರ್ಟ್ ಸಮರ್ಪಿಸುವುದರ ಬಗ್ಗೆ ನಾನು ಹೇಳಿದ್ದೆ. ಹಿಂದಿನ ವರ್ಷಗಳಲ್ಲಿ ಜಲಸದ ಎರಡನೇ ದಿವಸ ನೀಡಲಾಗುವ ರಿಪೋರ್ಟಿನ ಹೆಚ್ಚಿನಾಂಶ ಸಮಯದ ಕೊರತೆಯ ಕಾರಣ ಬಾಕಿಯುಳಿಯುತ್ತಿತ್ತು. ಸಂಪೂರ್ಣವಾಗಿ ನೀಡಲು ಸಾಧ್ಯವಾಗುತ್ತಿರಲಿಲ್ಲ. ಈ ಸಲ ಸ್ವಲ್ಪ ಸಮಯ ಸಿಕ್ಕಿರುವ ಕಾರಣ ಈ ರಿಪೋರ್ಟಿನ ಕೆಲವು ಭಾಗಗಳನ್ನು ಇಂದಿನ ಜುಮಾ ಖುತ್‌ಬದಲ್ಲಿ ಮತ್ತು ಉಳಿದ ಭಾಗಗಳನ್ನು ರವಿವಾರ ಸಂಜೆ ಇಲ್ಲಿನ ಹಾಲಿನಲ್ಲಿ ನೇರಪ್ರಸಾರ ಕಾರ್ಯಕ್ರಮದಲ್ಲಿ ಸಮರ್ಪಿಸಬೇಕೆಂದು ತೀರ್ಮಾನಿಸಿದ್ದೇನೆ. ಇಂದಿನ ಖುತ್‌ಬ ಮತ್ತು ನಾಳಿದ್ದು ಸಂಜೆಯ ಕಾರ್ಯಕ್ರಮದಲ್ಲಿ ಇದರ ಸಂಪೂರ್ಣ ರಿಪೋರ್ಟ್ ಬಹುಶಃ ನೀಡಲು ಸಾಧ್ಯವಿಲ್ಲವಾದರೂ ಕೆಲವು ವಿಶ್ವಾಸವರ್ಧಕ ಘಟನೆಗಳನ್ನು ಮುಂದಿರಿಸಲಾಗುವುದು – ಇನ್‌ಶಾ ಅಲ್ಲಾಹ್.

ಈ ರಿಪೋರ್ಟಿನ ಮುಖ್ಯಾಂಶಗಳನ್ನು ನೀಡುವುದಕ್ಕೆ ಮುಂಚಿತವಾಗಿ ನಾನು ಮೇಲೆ ಓದಿದ ಆಯತ್‌ಗಳನ್ನು ವಿಶದಪಡಿಸುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉಲ್ಲೇಖವನ್ನು ನಿಮ್ಮ ಮುಂದಿರಿಸುತ್ತೇನೆ. ಇಸ್ಲಾಮಿನ ಪುನರುಜ್ಜೀವನದ ಈ ಕಾಲಘಟ್ಟದಲ್ಲಿ ಈಗ ಇಸ್ಲಾಮಿನ ತಬ್ಲೀಗ್ ಮಸೀಹರ ಮೂಲಕವೇ ನಡೆಯುವುದು ಎಂಬ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ಪಷ್ಟವಾದ ಘೋಷಣೆ ಸಹ ನಮ್ಮ ಮುಂದಿದೆ. ಎಂತಹ ವಿರೋಧವಿದ್ದರೂ ಅವರ ಜಮಾಅತ್ ಬೆಳೆಯುವುದು, ಪುಷ್ಪಿಸುವುದು ಮತ್ತು ಹರಡುವುದು. ಇದು ಅಲ್ಲಾಹನ ವಾಗ್ದಾನವಾಗಿದೆ. ಅವರ ವಾದ ಕೇವಲ ವಾದವಾಗಿರಲಿಲ್ಲ, ಬದಲಾಗಿ ಅಲ್ಲಾಹನ ಸಹಾಯ ಮತ್ತು ನೆರವು ಅವರೊಂದಿಗೆ ಮತ್ತು ಅವರ ಜಮಾಅತಿನೊಂದಿಗೆ ಇದೆ ಎಂದು ನಾನೀಗ ಇರಿಸುವ ರಿಪೋರ್ಟ್ ಮತ್ತು ಘಟನೆಗಳಿಂದ ಸ್ವತಃ ಸಾಬೀತಾಗುವುದು. ಈ ಅಭಿವೃದ್ಧಿಯನ್ನು ತಡೆಯಲು ಲೋಕದ ಯಾವುದೇ ಶಕ್ತಿಗೆ ಸಾಧ್ಯವಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಸುಮಾರು ಇಪ್ಪತ್ತು ವರ್ಷಗಳ ಮುಂಚೆ ನನಗೆ ಈ ಖುರ್‌ಆನಿನ ಆಯತಿನ ಇಲ್‌ಹಾಮ್ ಉಂಟಾಯಿತು: **ಹುವಲ್ಲಧೀ ಅರ್‌ಸಲ ರಸೂಲಹೂ ಬಿಲ್‌ಹುದಾ ವದೀನಿಲ್‌ಹಖ್ಖಿ ಲಿಯುಝ್‌ಹಿರಹೂ ಅಲದ್ದೀನಿ ಕುಲ್ಲಿಹೀ** ಲೋಕದೆಲ್ಲೆಡೆ ವಿಜಯ ಸಾಧಿಸಲಿಕ್ಕಾಗಿ ಅವನು ತನ್ನ ಸಂದೇಶವಾಹಕನನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ನಿಯೋಜಿಸಿದ್ದಾನೆ. ನನ್ನ ಕೈಗಳಿಂದ ಇಸ್ಲಾಮಿಗೆ ಎಲ್ಲ ಧರ್ಮಗಳ ಮೇಲೆ ಮೇಲುಗೈ ಉಂಟಾಗುವಂತೆ ಮಾಡಲು ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ ಎಂಬುದು ಈ ಇಲ್‌ಹಾಮಿನ ಅರ್ಥವೆಂದು ನನಗೆ ತಿಳಿಸಲಾಯಿತು. ಇದು ಪವಿತ್ರ ಖುರ್‌ಆನಿನ ಒಂದು ಮಹತ್ತಾದ ಭವಿಷ್ಯವಾಣಿ ಆಗಿದೆ ಎಂದು ಈ ಸಂದರ್ಭದಲ್ಲಿ ನೆನಪಿಡಬೇಕಾಗಿದೆ. ಅದು ವಾಗ್ದತ್ತ ಮಸೀಹರ ಕೈಯಲ್ಲಿ ಈಡೇರುವುದು ಎಂದು ಶೋಧಕರಾದ ಪಂಡಿತರು ಒಮ್ಮತಾಭಿಪ್ರಾಯ ಹೊಂದಿರುವರು. ನನಗಿಂತ ಮುಂಚೆ ಬಂದಿದ್ದ ಸಜ್ಜನರು ಮತು ಸಂತರಲ್ಲಿ ಯಾರೂ ಈ ಭವಿಷ್ಯವಾಣಿಯ ಸಾಕ್ಷಾತ್ಕಾರ ತಾವೆಂದು ಹೇಳಿಲ್ಲ ಮತ್ತು ಈ ಆಯತ್ ತಮಗಾಗಿ ಇಲ್‌ಹಾಮಾಗಿದೆ ಎಂದು ಯಾರೂ ವಾದಿಸಿರಲಿಲ್ಲ. ಆದರೆ ನನ್ನ ಸಮಯ ಬಂದಾಗ ಈ ಆಯತಿನ ಸಾಕ್ಷಾತ್ಕಾರ ನಾನಾಗಿದ್ದೇನೆ ಮತ್ತು ನನ್ನ ಕೈಗಳಿಂದಲೇ ನನ್ನ ಕಾಲದಲ್ಲೇ ಇಸ್ಲಾಮ್ ಧರ್ಮದ ಶ್ರೇಷ್ಠತೆ ಇತರ ಧರ್ಮಗಳ ಮೇಲೆ ಸಾಬೀತಾಗುವುದು ಎಂದು ನನಗೆ ತಿಳಿಸಲಾಯಿತು." (ತಿರ್‌ಯಾಖುಲ್ ಖುಲೂಬ್, ರೂಹಾನಿ ಖಝಾಯೀನ್, ಸಂಪುಟ–15, ಪುಟ–231–232 ಅಡಿಟಿಪ್ಪಣಿದೊಂದಿಗೆ)

"ಜೀವಂತ ಧರ್ಮ ಇಸ್ಲಾಮ್ ಮಾತ್ರವಾಗಿದೆ. ಇದರ ವಸಂತಕಾಲ ಯಾವಾಗಲೂ ಬರುತ್ತಾ ಇರುತ್ತದೆ. ಇದರ ಮರ ಯಾವಾಗಲೂ ಹಚ್ಚಹಸುರಾಗಿರುತ್ತದೆ ಮತ್ತದು ಸಿಹಿ ಹಾಗೂ ಸ್ವಾದಿಷ್ಟ ಹಣ್ಣುಗಳನ್ನು ನೀಡುತ್ತದೆ. ಬೇರೆ ಯಾವುದೆ ಧರ್ಮಕ್ಕೆ ಈ ವೈಶಿಷ್ಟ್ಯವಿಲ್ಲ. ಇದರಿಂದ ಈ ವಿಶೇಷತೆಯನ್ನು ತೆಗೆದುಹಾಕಿದರೆ ಇದು ಕೂಡ ಜೀವವಿಲ್ಲದ್ದಾಗುವುದು. ಆದರೆ ಇದು ಜೀವಂತ ಧರ್ಮವಾಗಿದೆ. ಅಲ್ಲಾಹನು ಎಲ್ಲ ಕಾಲದಲ್ಲೂ ಇದರ ಜೀವಂತಿಕೆಯ ಪುರಾವೆ ನೀಡಿದ್ದಾನೆ. ಅವನು ಈ ಕಾಲದಲ್ಲೂ ಅವನು ತನ್ನ ಕೃಪೆಯಿಂದ ಈ ಜಮಾಅತನ್ನು ಈ ಉದ್ದೇಶದಿಂದಲೇ ಮಾಡಿದ್ದಾನೆ. ಇಸ್ಲಾಮ್ ಜೀವಂತ ಧರ್ಮವಾಗಿದೆ ಎಂಬುವುದಕ್ಕೆ ಸಾಕ್ಷಿಯಾಗಲು, ಅಲ್ಲಾಹನ ಬಗ್ಗೆ ಅರಿವು ಉಂಟಾಗಲು ಮತ್ತು ಪಾಪ ಹಾಗು ಕೊಳಕನ್ನು ಭಸ್ಮ ಮಾಡಲು, ಅದೇ ರೀತಿಯಲ್ಲಿ ಒಳಿತು ಮತ್ತು ಪರಿಶುದ್ಧತೆಯನ್ನು ಹರಡಲು ಈ ಜಮಾಅತನ್ನು ಸ್ಥಾಪಿಸಿದ್ದಾನೆ." (ಮಲ್‌ಫೂಝಾತ್, ಸಂಪುಟ–9, ಪುಟ–154–155, 1984 ಮುದ್ರಣ)

ಈ ಉದ್ಧರಣೆಯ ನಂತರ ನಾನೀಗ ರಿಪೋರ್ಟಿನ ಕೆಲವು ಭಾಗಗಳನ್ನು ನಿಮ್ಮ ಮುಂದಿರಿಸುತ್ತೇನೆ.

ಅಲ್ಲಾಹನ ಅನುಗ್ರಹದಿಂದ ಈ ವರ್ಷ ಲೋಕದೆಲ್ಲೆಡೆ, ಪಾಕಿಸ್ತಾನವನ್ನು ಹೊರತುಪಡಿಸಿ, ಸ್ಥಾಪಿತವಾದ ಹೊಸ ಜಮಾಅತುಗಳ ಸಂಖ್ಯೆ 288 ಆಗಿದೆ. ಈ ಹೊಸ ಜಮಾಅತುಗಳಲ್ಲದೆ ಹೊಸದಾಗಿ 1040 ಸ್ಥಳಗಳಲ್ಲಿ ಮೊದಲ ಬಾರಿಗೆ ಅಹ್ಮದಿಯ್ಯತಿನ ಗಿಡ ನೆಡಲಾಯಿತು. ಈ ಹೊಸ ಸ್ಥಳಗಳಲ್ಲಿ ಜಮಾಅತಿನ ಪ್ರವೇಶ ಮತ್ತು ಜಮಾಅತಿನ ಸ್ಥಾಪನೆಯಲ್ಲಿ ಸಿರಾಲಿಯೋನ್ ಮುಂದಿದೆ. ಅಲ್ಲಿ 40 ಹೊಸ ಜವಾಅತುಗಳು ಸ್ಥಾಪಿತವಾಗಿವೆ. ಅದಲ್ಲದೆ ಕೋಂಗೋಕನ್ಸಾಶಾದಲ್ಲಿ 31 ಜಮಾಅತುಗಳು ಸ್ಥಾಪಿತವಾಗಿವೆ. ಮೂರನೆಯದಾಗಿ ಘಾನ. ಇಲ್ಲಿ 23 ಹೊಸ ಜಮಾಅತುಗಳು ಉಂಟಾಗಿವೆ. ಇದಲ್ಲದೆ ಹಲವು ಇತರ ದೇಶಗಳಿವೆ. ಅಲ್ಲೆಲ್ಲ ಹನ್ನೆರಡು, ಹತ್ತು, ಎಂಟು, ಒಂಬತ್ತು, ಮೂರು, ಎರಡು ಜಮಾಅತುಗಳು ಸ್ಥಾಪಿತವಾಗಿದೆ. ಅದರಲ್ಲಿ ಗ್ಯಾಂಬಿಯ, ಲೈಬೀರಿಯಾ, ಬೆನಿನ್, ಐವರಿಕೋಸ್ಟ್, ನೈಜೀರಿಯಾ, ಸಿಂಗಾಲ್, ಗನಿಬಸಾವ್, ತಂಜ಼ಾನಿಯ, ಗಿನಿಕನಾಕುರಿ ನೈಜೀರಿಯಾ ಟೋಗೋ ಸೌತೋಮೆ, ಕೇಮರೂನ್, ತುರ್ಕಿ, ಕೊಂಗೋಬ್ರಾಜ಼್‌ವೆಲ್, ಯುಗಾಂಡ ಹಾಗೂ ಹಲವು ಜಮಾಅತುಗಳಿವೆ.

ಕೋಂಗೋಕನ್ಸಾಶಾದ ನಮ್ಮ ಲೋಕಲ್ ಮುಅಲ್ಲಿಮ್ ಹಮೀದ್ ಅಹ್ಮದ್ ಸಾಹಿಬರು ಹೇಳುತ್ತಾರೆ: ಲೋಕಿಚಾಗೋ ಎಂಬ ಗ್ರಾಮದ ಸುನ್ನಿ ಇಮಾಮರು ರೇಡಿಯೋ ಎಫೆಮ್‌ನಲ್ಲಿ ನಮ್ಮ ತಬ್ಲೀಗ್ ಕಾರ್ಯಕ್ರಮ ಕೇಳಿದ ನಂತರ ನಮ್ಮ ಮಸೀದಿಗೆ ಬಂದರು. ಹಲವು ಸವಾಲುಗಳನ್ನು ಕೇಳುತ್ತಾ ಹೋದರು. ಅವರ ಎಲ್ಲ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರಗಳನ್ನು ನೀಡಲಾಯಿತು. ಅವರಿಗೆ ಜಮಾಅತಿನ ಸ್ವಾಹೀಲಿ ಭಾಷೆಯ ಪವಿತ್ರ ಖುರ್‌ಆನ್ ತರ್ಜುಮೆ ಮತ್ತು ಇತರ ಪುಸ್ತಕಗಳನ್ನು ಸಹ ನೀಡಲಾಯಿತು. ಈ ಪುಸ್ತಕಗಳನ್ನು ಓದಿದ ನಂತರ ಅಲ್ಲಾಹನ ಅನುಗ್ರಹದಿಂದ ಅವರು ಬೈಅತ್ ಮಾಡಿದರು. ಮಾತ್ರವಲ್ಲ ತಮ್ಮ ಗ್ರಾಮಕ್ಕೆ ಮರಳಿ ಜಮಾಅತಿನ ಸಂದೇಶ ತಲುಪಿಸುವೆನು ಎಂದು ವಾಗ್ದಾನ ಮಾಡಿದರು. ಅಲ್ಲಾಹನ ಅನುಗ್ರಹದಿಂದ ಅವರ ತಬ್ಲೀಗ್ ಮೂಲಕ ಇಪ್ಪತ್ತು ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ಹೊಸ ನಿಷ್ಠಾವಂತ ಜಮಾಅತ್ ಅಲ್ಲಿ ಸ್ಥಾಪನೆಯಾಗಿದೆ.

ಗ್ಯಾಂಬಿಯಾದ ಅಮೀರ್ ಸಾಹಿಬರು ಬರೆಯುತ್ತಾರೆ: ರಮಝಾನ್ ಮಾಸದಲ್ಲಿ ಅಲ್ಲಿಯ ಒಂದು ಪ್ರದೇಶದಲ್ಲಿ ಒಂದು ತಬ್ಲೀಗ್ ಪ್ರೋಗ್ರಾಮ್ ಮಾಡಲಾಗಿತ್ತು. ಇದಕ್ಕಾಗಿ ಅಲ್ಲಿಯ ಮುಅಲ್ಲಿಮ್ ಸಾಹಿಬರು ಅಲ್ಲಿಯ ಒಂದು ಹಳ್ಳಿಗೆ ಹೋದರು. ಅಲ್ಲಿನ ತಬ್ಲೀಗ್ ಪ್ರೋಗ್ರಾಮ್ ನಂತರ ಅಲ್ಲಿಯ ಒಬ್ಬ ಹಿರಿಯ ವ್ಯಕ್ತಿ ಹೇಳಿದರು: "ನಾನು ನಿಮ್ಮ ಬರುವಿಕೆಯಿಂದ ತುಂಬ ಸಂತೋಷಗೊಂಡಿದ್ದೇನೆ. ಏಕೆಂದರೆ ನೀವು ಮಾಡುತ್ತಿರುವ ತಬ್ಲೀಗ್ ಕೆಲಸಗಳು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುನ್ನತ್ ಪ್ರಕಾರವಾಗಿದೆ. ನೀವು ಆ ಚರ್ಯೆಯನ್ನು ಅನುಸರಿಸುತ್ತಿದ್ದೀರಿ. ಇಸ್ಲಾಮ್ ಹರಡಬೇಕೆಂಬ ಉದ್ದೇಶದಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಿಂದ ಮದೀನಕ್ಕೆ ವಲಸೆ ಹೋಗಿದ್ದರು. ನೀವು ಸಹ ಅದೇ ರೀತಿಯಲ್ಲಿ ಹೊರಗೆ ಬಂದಿದ್ದೀರಿ ಮತ್ತು ಎಲ್ಲ ಸ್ಥಳಗಳಲ್ಲಿ ಇಸ್ಲಾಮಿನ ತಬ್ಲೀಗ್ ಮಾಡುತ್ತಿದ್ದೀರಿ. ಉದಾಹರಣೆಗಳೊಂದಿಗೆ ಮಾತನಾಡುವ ತಮ್ಮದಾದ ಒಂದು ರೀತಿ ಆಫ್ರಿಕನರಿಗಿದೆ. ಮತ್ತೆ ಮುಂದುವರಿಸುತ್ತಾ ಹೇಳುತ್ತಾರೆ: ಇದೇ ಸುನ್ನತಾಗಿದೆ. ಇಸ್ಲಾಮಿನ ತಬ್ಲೀಗ್ ಮಾಡಲು ಇದೇ ಸರಿಯಾದ ರೀತಿಯಾಗಿದೆ. ನಾವು ನಿಮ್ಮನ್ನು ಸ್ವಾಗತಿಸುತ್ತೇವೆ. ನೀವು ಹೇಳಿದ ಇಮಾಮ್ ಮಹ್‌ದಿಯ ಅಧ್ಯಾಪನೆಗಳೇ ನಿಜವಾದ ಇಸ್ಲಾಮ್ ಆಗಿದೆ. ನಾವೆಲ್ಲರೂ ವಿಶ್ವಾಸ ಹೊಂದುತ್ತೇವೆ ಮತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಹಝ್ರತ್

ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದ ಇಮಾಮ್ ಮಹ್‌ದಿ ಎಂದು ನಂಬುತ್ತೇವೆ." ಇಲ್ಲಿ ಅಲ್ಲಾಹನ ಅನುಗ್ರಹದಿಂದ ಎರಡು ಕುಟುಂಬಗಳ 19 ವ್ಯಕ್ತಿಗಳು ಬೈಅತ್ ಮಾಡಿ ಅಹ್ಮದಿಯ್ಯತಿಗೆ ಪ್ರವೇಶಿಸಿದ್ದಾರೆ.

ಲೈಬೀರಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ನಮ್ಮ ಮಿಶನರಿಯವರು ಜುಮಾ ಖುತ್‌ಬದಲ್ಲಿ ತಹ್ರೀಕ್ ಜದೀದಿಗೆ ಸಂಬಂಧಿಸಿ ಧನತ್ಯಾಗಗಳ ಪ್ರಾಮುಖ್ಯವನ್ನು ವಿವರಿಸಿದ ಸಂದರ್ಭದಲ್ಲಿ ಕೆಲವು ಅಹ್ಮದಿಯೇತರ ಸಹೋದರರು ಅಲ್ಲಿ ನಮಾಝ್ ಮಾಡಲು ಬಂದಿದ್ದರು. ಅಹ್ಮದಿಯರು ತಮ್ಮ ಹೆಸರು ಬರೆಸುತ್ತಿದ್ದಾಗ ಒಬ್ಬ ಅಹ್ಮದಿಯೇತರ ವ್ಯಕ್ತಿ ಐವತ್ತು ಲೈಬೀರಿಯನ್ ಡಾಲರ್ ನೀಡಿ ಏನೂ ಹೇಳದೇ ಹೊರಟು ಬಿಟ್ಟರಿ. ಅವರ ಬಗ್ಗೆ ಅನ್ವೇಷಣೆ ಮಾಡಿದಾಗ ಅವರು ಸಮೀಪ ಗ್ರಾಮದ ವ್ಯಕ್ತಿಯೆಂದು ತಿಳಿದುಬಂತು. ಅವರು ಖುತ್ಬದಲ್ಲಿ ತ್ಯಾಗದ ಘಟನೆಗಳು ಮತ್ತು ಅದರ ಪ್ರಾಮುಖ್ಯತೆ ಬಗ್ಗೆ ಕೇಳಿದಾಗ ಪ್ರಭಾವಿತಕೊಂಡು ಚಂದಾ ನೀಡಿದರು. ನಮ್ಮ ಮುಅಲ್ಲಿಮ್ ಅವರ ಬಳಿಗೆ ಕೃತಜ್ಞತೆ ಅರ್ಪಿಸಲು ಹೋದಾಗ ಗ್ರಾಮದ ಇತರ ಜನರು ಸಹ ಒಟ್ಟುಗೂಡಿದರು. ಮುಅಲ್ಲಿಮ್ ಸಾಹಿಬರ ಮಾತುಗಳನ್ನು ಕೇಳಿದಾಗ ಅಲ್ಲಿಯ ಜನರು ಪ್ರಭಾವಿತಗೊಂಡರು. ಅಲ್ಲಿಯ ಇಮಾಮ್ ಸಹ ಪ್ರಭಾವಿತಗೊಂಡರು. ಇಮಾಮ್ ಸಾಹಿಬ್ ಹೇಳಿದರು: ನೀವು ಕೆಲವು ದಿನಗಳ ನಂತರ ಪುನಃ ಬನ್ನಿರಿ, ನಾನು ಎರಡು ಮೂರು ಗ್ರಾಮದ ಜನರನ್ನು ಒಟ್ಟುಸೇರಿಸುವೆನು. ಆವಾಗ ಬಂದು ನೀವು ಇಲ್ಲಿ ತಬ್ಲೀಗ್ ಮಾಡಿರಿ. ನಿಶ್ಚಿತ ದಿನ ನಮ್ಮ ತಬ್ಲೀಗ್ ಸಂಘ ಅಲ್ಲಿಗೆ ತಲುಪಿತು. ಮೂರು ಗ್ರಾಮಗಳ ಜನರು ಅಲ್ಲಿ ಒಟ್ಟುಸೇರಿದರು. ಜಮಾಅತಿನ ವಿಶ್ವಾಸಗಳನ್ನು, ಅದರ ಸ್ಥಾಪನೆಯ ಉದ್ದೇಶವನ್ನು ವಿಸ್ತಾರವಾಗಿ ಹೇಳಲಾಯಿತು. ಅದರ ನಂತರ ಸವಾಲು ಜವಾಬಿನ ಒಂದು ದೀರ್ಘವಾದ ಪರಂಪರೆ ಶುರುವಾಗಿ ಪೂರ್ತಿ ದಿನ ಜಾರಿಯಲ್ಲಿತ್ತು. ಎಲ್ಲ ತರದಲ್ಲಿ ತೃಪ್ತಿಯಾದಾಗ ಮೂರು ಗ್ರಾಮದ ಇಮಾಮರೂ ತಮ್ಮ ಎಲ್ಲ ಜನರ ಸಮೇತ ಅಹ್ಮದಿಯ್ಯತಿಗೆ ಪ್ರವೇಶಿಸುವುದಾಗಿ ಘೋಷಿಸಿದರು. ಅಲ್ಲಾಹನ ಅನುಗ್ರಹದಿಂದ ಈ ಮೂರು ಗ್ರಾಮಗಳಲ್ಲೂ ಜಮಾಅತ್ ಸ್ಥಾಪಿತವಾಯಿತು.

ಲೈಬೀರಿಯಾದ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ಕಾಲಾನಗೂರ್ ಎಂಬ ಗ್ರಾಮಕ್ಕೆ ಜುಮಾ ದಿವಸ ತಬ್ಲೀಗ್ ಮಾಡಲು ಹೋದೆನು. ನಾನು ಜುಮಾ ನಮಾಝಿಗೆ ಎರಡು ಗಂಟೆ ಮುಂಚಿತವಾಗಿ ಅಲ್ಲಿಗೆ ತಲುಪಿದೆ. ಅಲ್ಲಿಯ ಜನರು ತಮ್ಮ ಮಸೀದಿಯಲ್ಲಿ ಜುಮಾ ನಮಾಝ್ ನಿರ್ವಹಿಸುತ್ತಿಲ್ಲ ಎಂದು ಆರಂಭದ ಮಾತುಕತೆಗಳಿಂದಲೇ ತಿಳಿದುಬಂತು. ಬದಲಿಗೆ ಸಮೀಪದ ದೊಡ್ಡ ಗ್ರಾಮದಲ್ಲಿ ಜುಮಾ ನಡೆಯುತ್ತಿತ್ತು.ಅಲ್ಲಿಗೆ ಎರಡು ಮೂರು ವ್ಯಕ್ತಿಗಳು ಇಲ್ಲಿಂದ ಹೋಗುತ್ತಿದ್ದರು. ಗ್ರಾಮದ ಉಳಿದ ಎಲ್ಲ ಜನರು ಮುಸ್ಲಿಮರಾಗಿದ್ದೂ ಜುಮಾದ ಅನುಗ್ರಹದಿಂದ ವಂಚಿತರಾಗಿದ್ದರು. ಇದರ ಕಾರಣವೇನೆಂದು ಕೇಳಲಾದಾಗ ಮಸೀದಿಯಲ್ಲಿ ಜುಮಾ ಆರಂಭಿಸುವುದಕ್ಕೆ ಮುಂಚೆ ಮೂರು ಆಡುಗಳನ್ನು ಬಲಿಕೊಡಬೇಕಾದದ್ದು ಆವಶ್ಯ ದೊಡ್ಡ ಇಮಾಮ್ ಸಾಹಿಬರು ಹೇಳಿದ್ದಾರೆ ಎಂದು ಗ್ರಾಮದ ಜನರು ಹೇಳಿದರು. ಎಂದರೆ ಆಡುಗಳನ್ನು ಕೊಯ್ದು ಅದರ ಮಾಂಸ ಇಮಾಮ್ ಸಾಹಿಬರಿಗೆ ಕಳುಹಿಸಬೇಕು. ಅನಂತರ ಗ್ರಾಮದ ಯಾರನ್ನಾದರೂ ಅವರು ಇಮಾಮಾಗಿ ನಿಶ್ಚಯಿಸುವರು. ಇದು ತಪ್ಪು, ಇಸ್ಲಾಮಿನಲ್ಲಿ ಹೀಗೆ ಯಾವ ಶರತ್ತಿಲ್ಲ ಎಂದು ಅಲ್ಲಿಯ ಜನರನ್ನು ಮನವರಿಕೆ ಮಾಡಿಸಲು ತುಂಬ ಪ್ರಯತ್ನಿಸಲಾಯಿತು. ಜುಮಾ ನಮಾಝಿನ ಅನುಗ್ರಹಗಳ ಬಗ್ಗೆ ಅವರಿಗೆ ಹೇಳಿಕೊಡಲಾಯಿತು. ಸರಿ, ಇಂದು ನಾವು ಆಡುಗಳನ್ನು ಬಲಿಕೊಡದೆ ಜುಮಾ ನಿರ್ವಹಿಸುವ ಎಂದು ಅವರಿಗೆ ಹೇಳಲಾಯಿತು. ಗ್ರಾಮದ ಜನರು ಹಲವು ಮೂಢನಂಬಿಕೆಗಳನ್ನು ಹೊಂದಿರುವವರಾಗಿರುತ್ತಾರೆ. ಧರ್ಮದ ಬಗ್ಗೆ ಅವರಿಗೆ ಹೆಚ್ಚೇನೂ ಗೊತ್ತಿರುವುದಿಲ್ಲ. ಮೌಲವಿಯನ್ನು ಅನುಸರಿಸದ ಕಾರಣ ಪಾಪಿಗಳಾಗಿ ಅವರ ಮೇಲೆ ಶಿಕ್ಷೆ ಎರಗಬಹುದೆಂಬ ಭಯ ಮತು ಆತಂಕ ಅವರಿಗೆ ತುಂಬ ಇತ್ತು. ಆದರೆ ಅವರನ್ನು ಬಹಳ ಒತ್ತಾಯಿಸಿದಾಗ ಸಮ್ಮತಿಸಿದರು. ಜುಮಾ ನಿರ್ವಹಿಸಲಾಯಿತು ಮತು ಎಲ್ಲರು ಅದರಲ್ಲಿ ಹಾಜರಾದರು. ಜುಮಾದ ನಂತರ ಜಮಾಅತಿನ ಬಗ್ಗೆ ವಿಶದವಾಗಿ ಹೇಳಿಕೊಡಲಾಯಿತು. ಸವಾಲು ಜವಾಬುಗಳು ಸಹ ನಡೆಯಿತು. ಜನರ ಮನಸ್ಸಲ್ಲಿ ಆ ದೊಡ್ಡ ಇಮಾಮರ ಭಯಹುಟ್ಟಿಸುವ ಮಾತುಗಳು ಇದ್ದ ಕಾರಣ ಮುಬಲ್ಲಿಗ್ ಸಾಹಿಬರು ಹೇಳಿದರು. ಹೀಗೆ ಜುಮಾ ಏಕೆ ನಿರ್ವಹಿಸಲಾಯಿತು ಎಂದು ಯಾರಾದರೂ ಕೇಳಿದರೆ, ಅವರೊಡನೆ ಜುಮಾ ನಿರ್ವಹಿಸುವುದಕ್ಕೆ ಮುಂಚಿತವಾಗಿ ಆಡುಗಳನ್ನು ಕೊಯ್ಯಬೇಕೆಂದು ಎಲ್ಲಿ ಬರೆಯಲಾಗಿದೆ ಎಂದು ಮಾತ್ರ ಕೇಳಿದರಾಯಿತು ಎಂದು ಮುಬಲ್ಲಿಗ್ ಸಾಹಿಬರು ಹೇಳಿದರು. ಆ ಗ್ರಾಮದಲ್ಲಿ ಜುಮಾ ನಮಾಝ್ ನಿರ್ವಹಿಸಲಾಯಿತು ಎಂದು ಮೌಲವಿಗೆ ಗೊತ್ತಾದಾಗ ಅದರ ಬಗ್ಗೆ ವಿಚಾರಿಸಲು ಅಲ್ಲಿಗೆ ಬಂದರು. ಬಹಳ ಕೋಪದಿಂದ ಇದ್ದರು. ಆದರೆ ಜುಮಾ ನಿರ್ವಹಿಸುವುದಕ್ಕೆ ಮುಂಚಿತವಾಗಿ ಮೂರು ಆಡುಗಳನ್ನು ಕೊಯ್ಯಬೇಕೆಂದು ಎಲ್ಲಿ ಬರೆಯಲಾಗಿದೆ ಎಂದು ತೋರಿಸಿರಿ ಎಂದು ಗ್ರಾಮದ ಜನರು ಕೇಳಿದರು. ಅನಂತರ ನಮ್ಮ ಲೋಕಲ್ ಮಿಶನರಿ ಗ್ರಾಮದ ಒಬ್ಬ ವ್ಯಕ್ತಿಗೆ ಜುಮಾ ನಿರ್ವಹಿಸುವ ರೀತಿಯನ್ನು ಕಲಿಸಿದರು. ಈಗ ಅಲ್ಲಿ ನಿಯತವಾಗಿ ಜುಮಾ ನಡೆಯುತ್ತಿದೆ. ಜನರು ಕೂಡ ಮುಂಚೆ ಇದ್ದ ಮೌಲವಿಯನ್ನು ಬಿಟ್ಟುಬಿಟ್ಟಿದ್ದಾರೆ. ಅಹ್ಮದಿಯಾ ಜಮಾಅತ್ ನಮಗೆ ಕಲಿಸಿದ್ದೇ ಯಥಾರ್ಥ ಇಸ್ಲಾಮ್, ಅಲ್ಲದೆ ಮೌಲವಿ ಹೇಳಿದ್ದು ಅಲ್ಲವೆಂದು ಎಂದು ಅವರು ತೀರ್ಮಾನಿಸಿದರು. ಅಲ್ಲಾಹನ ಅನುಗ್ರಹದಿಂದ ಅವರಲ್ಲಿ ಹೆಚ್ಚಿನ ಜನರು ಜಮಾಅತಿನಲ್ಲಿ ಸೇರಿರುವರು.ಅಲ್ಲಾಹನ ಅನುಗ್ರಹದಿಂದ ಇಲ್ಲಿ ಹೊಸ ಜಮಾಅತ್ ಸ್ಥಾಪಿತವಾಗಿದೆ.

ವಿಚಿತ್ರವಾದ ಹೊಸ ಆಚಾರಗಳನ್ನು ಧರ್ಮದ ಹೆಸರಲ್ಲಿ ಜನರು ಶುರುಮಾಡಿರುವರು. ಹೀಗೆ ಅರಿವಿಲ್ಲದ ಈ ಬಡ ಜನರನ್ನು ತಪ್ಪಾದ ದಾರಿಗೆ ಕೊಂಡು ಹೋಗುತ್ತಾರೆ.

ಫಿಲಿಪ್ಪೈನಿನ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ಸಾಲೋಪೇನ್ ಎಂಬ ಪ್ರದೇಶ ಕಟ್ಟರ್ ಮುಸ್ಲಿಮರಿಗೆ ಕುಪ್ರಸಿದ್ಧಿ ಪಡೆದಿದೆ. ತಬ್ಲೀಗೀ ಜಮಾಅತಿನ ಕಾರ್ಯಚರಣೆಗಳು ಇಲ್ಲಿ ಕ್ಷಿಪ್ರಗತಿಯಲ್ಲಿ ನಡೆಯುತ್ತಿವೆ. ಈ ಪ್ರದೇಶದಲ್ಲಿ ನನ್ನ ಹೆಂಡತಿಯ ಬಂಧುವಾದ ನಮ್ಮೊಬ್ಬ ಮುಅಲ್ಲಿಮ್ ಸಾಹಿಬರು ಇದ್ದಾರೆ. ಮುಅಲ್ಲಿಮ್ ಸಾಹಿಬರು ತಮ್ಮ ಸಂಬಂಧದರವರಿಗೆ ತಬ್ಲೀಗ್ ಮಾಡಿದಾಗ ಉತ್ತಮ ಪರಿಣಾಮ ಉಂಟಾದ ಕಾರಣ ನೇಶನಲ್ ಮಟ್ಟದಲ್ಲಿ ಇಲ್ಲೊಂದು ತಬ್ಲೀಗ್ ಪ್ರೋಗ್ರಾಮ್ ಮಾಡಲಾಯಿತು. ಮೂರು ಮುಅಲ್ಲಿಮರ ಮತ್ತು ಮೂರು ದಾಇಯರ ಒಂದು ಟೀಮನ್ನು ಈ ಪ್ರದೇಶಕ್ಕೆ ಕಳುಹಿಸಲಾಯಿತು. ಸಾಮಾನ್ಯವಾಗಿ ಆಗುವಂತೆ ಪ್ರಾದೇಶಿಕ ಮುಸ್ಲಿಮರ ಕಡೆಯಿಂದ ವಿರೋಧವುಂಟಾಯಿತು. ಆದರೆ ಈ ವಿರೋಧ ಇದ್ದು ಕೂಡ ಅಲ್ಲಾಹನ ಅನುಗ್ರಹದಿಂದ 23 ವ್ಯಕ್ತಿಗಳು ಬೈಅತ್ ಮಾಡಿ ಜಮಾಅತಿಗೆ ಸೇರಿದರು.

ಸೆನಿಗಾಲಿನ ಅಮೀರ್ ಸಾಹಿಬರು ಬರೆಯುತ್ತಾರೆ: ತಾಂಬ ಕಂಡಾಲ್ ಎಂಬ ರೀಜನಿನ ಒಂದು ಊರಿಗೆ ನಮ್ಮ ತಬ್ಲೀಗ್ ಸಂಘ ಹೋಯಿತು. ತೇಜಾನಿಯಾ ಮತ್ತು ಮುರೀದಿಯಾ ಎಂಬ ಎರಡು ಪಂಗಡಗಳ ನಡುವೆ ಅಲ್ಲಿ ಮುಂಚಿನಿಂದಲೇ ವಾದ ಪ್ರತಿವಾದಗಳು ನಡೆಯುತ್ತಿತ್ತು ಎಂದು ಅಲ್ಲಿಗೆ ಹೋದಾಗ ತಿಳಿದುಬಂತು. ಈ ಎರಡೂ ಪಂಗಡಗಳು ಸತ್ಯದ ಮೇಲೆ ಇಲ್ಲ ಎಂದು ಅಲ್ಲಿಯ ಇಮಾಮ್ ಸಾಹಿಬರು ನಮ್ಮ ಸಂಘದ ಮೆಂಬರಿಗೆ ತಿಳಿಸಿದರು. ಇಮಾಮ್ ಸಾಹಿಬರು ಮುಂದುವರಿಯುತ್ತಾ ಹೇಳಿದರು: ನಾವು ಪ್ರತೀಕ್ಷಿಸುತ್ತಿದ್ದೇವೆ. ಏಕೆಂದರೆ ಒಬ್ಬ ಸತ್ಯಸಂಧನಾದ ಇಮಾಮ್ ಬರುವರೆಂದು ನಾವು ಕೇಳಿದ್ದೇವೆ. ಅವರು ಬಂದರೆ ನಾವು ಅವರನ್ನು ನಂಬುವೆವು. ನಮ್ಮ ಸಂಘದವರು ಅಲ್ಲಿ ತಬ್ಲೀಗ್ ಮಾಡಿದರು. ಪ್ರಶ್ನೋತ್ತರ ಸಭೆಯನ್ನು ನಡೆಸಿದರು. ನಮ್ಮ ಸಂಘದ ಬಳಿ ಮೌಲಾನ ನಝೀರ್ ಮುಬಶ್ಶಿರ್ ಸಾಹಿಬರ ಪುಸ್ತಕವಾದ **"ಅಲ್‌ಖೌಲುಸ್ಸರೀಹ್ ಫಿಝುಹೂರಿಲ್‌ಮಹ್‌ದಿ ವಲ್‌ಮಸೀಹ್"** ಮತ್ತು ಖಾಇದ ಯಸ್ಸರ್‌ನಲ್ ಖುರ್‌ಆನ್ ಸಹ ಇತ್ತು. ಇಮಾಮ್ ಸಾಹಿಬರು ಇವೆರಡನ್ನೂ ಖರೀದಿಸಿದರು. ತಬ್ಲೀಗ್ ಮಾಡಿದ ನಂತರ ಸಂಘ ವಾಪಸ್ಸು ಬಂತು. ಎರಡು ದಿನಗಳು ನಂತರ ಇಮಾಮ್ ಸಾಹಿಬರು ಫೋನ್ ಮಾಡಿ ಅವರಿಗೆ ಮಂಡಿಂಗ ಭಾಷೆಯ ಖುರ್‌ಆನ್ ತರ್ಜುಮೆ ಸಹ ಬೇಕೆಂದು ಹೇಳಿದರು. ಹೀಗೆ ಅದನ್ನು ಸಹ ಅವರು ಖರೀದಿಸಿದರು. ಎರಡನೇ ಬಾರಿಗೆ ನಮ್ಮ ಸಂಘ ಅಲ್ಲಿಗೆ ಹೋದಾಗ ಇಮಾಮ್ ಸಾಹಿಬರು ಸಂಘದವರೊಡನೆ ಹೇಳಿದರು: ನಾವು ಯಾವ ಧರ್ಮದ ಪ್ರತೀಕ್ಷೆಯಲ್ಲಿ ಇದ್ದೆವೋ ಅದು ಇದೇ ಅಹ್ಮದಿಯ್ಯತ್ ಆಗಿದೆ. ಏಕೆಂದರೆ ನಾನು ನಿಮ್ಮ ಪುಸ್ತಕ ಮತ್ತು ಪವಿತ್ರ ಖುರ್‌ಆನಿನ ತರ್ಜುಮೆಯನ್ನು ಓದಿದೆ. ಹೀಗೆ ಸಂಪೂರ್ಣ ಗ್ರಾಮವಾಸಿಗಳು ಅಹ್ಮದಿಯ್ಯತಿಗೆ ಪ್ರವೇಶಿಸಿದರು. ಹೊಸ ಜಮಾಅತ್ ಸ್ಥಾಪನೆಯಾಯಿತು. ಖುರ್‌ಆನ್ ಕಲಿಸಲಿಕ್ಕಾಗಿ ಅಲ್ಲಿ ಖಾಇದ ಯಸ್ಸರ್‌ನಲ್ ಖುರ್‌ಆನ್ ಮತ್ತು ಪವಿತ್ರ ಖುರ್‌ಆನನ್ನು ನೀಡಲಾಯಿತು.

ಗೋಯ್ಪುಮಾಲದ ಅಮೀರ್ ಸಾಹಿಬರು ಬರೆಯುತ್ತಾರೆ: ಕೋಬಾನ್ ಪಟ್ಟಣದಿಂದ ಹತ್ತು ಕಿಲೋಮೀಟರ್ ದೂರದಲ್ಲಿ ಒಂದು ಪ್ರದೇಶವಿದೆ. ಅಲ್ಲಿ ಈ ವರ್ಷ ಮೊದಲ ಬಾರಿಗೆ ಜಮಾಅತಿನ ಪರಿಚಯ ಮಾಡಿಸಲಾಯಿತು. ಅಲ್ಲಿ ಎರಡು ಸಲ ಹೋಗಿ ಇಸ್ಲಾಂ ಅಹ್ಮದಿಯ್ಯತಿನ ಸಂದೇಶವನ್ನು ತಲುಪಿಸಲಾಯಿತು. ಅಲ್ಲಿಯ ಜನರನ್ನು ಗೋಯ್ಪುಮಾಲದ ಜಲಸ ಸಾಲಾನಕ್ಕೆ ಆಮಂತ್ರಿಸಲಾಯಿತು. ಅವರಲ್ಲಿ ಒಂದು ಕುಟುಂಬದ ಮೂರು ಸದಸ್ಯರು ಗೋಯ್ಪುಮಾಲಗೆ ಬಂದು ಬೈಅತ್ ಮಾಡಿ ಜಮಾಅತಿಗೆ ಪ್ರವೇಶಿಸಿದರು. ಹೀಗೆ ಇಲ್ಲೊಂದು ಹೊಸ ಜಮಾಅತ್ ಸ್ಥಾಪಿತವಾಯಿತು. ಇವರು ತಮ್ಮ ಕುಟುಂಬದ ಇತರ ಸದಸ್ಯರಿಗೆ ಅಹ್ಮದಿಯ್ಯತಿನ ಸಂದೇಶ ತಲುಪಿಸುತ್ತಿದ್ದಾರೆ.

ಸೆನಿಗಾಲಿನ ಅಮೀರ್ ಸಾಹಿಬರು ಬರೆಯುತ್ತಾರೆ: ಒಂದು ರೀಜನಿನ ಹತ್ತು ಸ್ಥಳಗಳಲ್ಲಿ ಪ್ರಾದೇಶಿಕ ಮುಅಲ್ಲಿಮ್ ಮತ್ತು ಮಿಶನರಿಯ ಮೇಲ್ನೋಟದಲ್ಲಿ

ವಾರದಲ್ಲಿ ಒಂದು ಗಂಟೆ ರೇಡಿಯೋ ಪ್ರೋಗ್ರಾಮ್ ನಡೆಯುತ್ತದೆ ಮತ್ತು ಒಂದು ಗಂಟೆ ನನ್ನ ಖುತ್‌ಬವನ್ನು ಪ್ರಸಾರ ಮಾಡಲಾಗುತ್ತದೆ. ಇದು ತಬ್ಲೀಗಿನ ಒಂದು ಮುಖ್ಯ ಮಾರ್ಗವಾಗಿದೆ. ಈ ಪ್ರೋಗ್ರಾಮುಗಳಲ್ಲಿ ಜನರು ಫೋನ್ ಮಾಡಿ ಪ್ರಶ್ನೆಗಳನ್ನು ಸಹ ಕೇಳುತ್ತಾರೆ. ಈ ರೀತಿಯಲ್ಲಿ ಈ ವರ್ಷ 20 ಹಳ್ಳಿಗಳಲ್ಲಿ ಅಹ್ಮದಿಯ್ಯತಿನ ಗಿಡ ನೆಡಲಾಯಿತು. ಜನರು ಅಹ್ಮದಿಯ್ಯತಿನ ಕಡೆಗೆ ಆಕರ್ಷಿತವಾಗುವುದಲ್ಲದೆ, ಸ್ವತಃ ಫೋನ್ ಮಾಡಿ ತಮ್ಮ ಬಳಿಗೆ ಬರಲು ಹೇಳುತ್ತಾರೆ.

ಕಬಾಬೀರಿನ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ದಕ್ಷಿಣ ಫಲಸ್ತೀನಿನ ಒಂದು ಪಟ್ಟಣದಲ್ಲಿ ಕೆಲವು ವರ್ಷಗಳಿಂದ ಅಹ್ಮದಿಯರು ಇರುವರಾದರೂ ಒಂದು ಸುಸಂಘಟಿತ ಜಮಾಅತ್ ಸ್ಥಾಪಿತವಾಗಿರಲಿಲ್ಲ. ಅಲ್ಲಾಹನ ಅನುಗ್ರಹದಿಂದ ಈ ವರ್ಷ ಇಲ್ಲಿ ಸ್ಥಿರವಾದ ಒಂದು ಜಮಾಅತ್ ಸ್ಥಾಪಿತವಾಯಿತು. ಹಝ್ರತ್ ಇಬ್ರಾಹೀಂ ಅಲೈಹಿಸ್ಸಲಾಮರ ಸ್ಥಳವಾಗಿದೆ ಅಲ್‌ಖ಼ಲೀಲ್. ಹಝ್ರತ್ ಇಬ್ರಾಹೀಂ, ಹಝ್ರತ್ ಇಸ್‌ಹಾಖ್, ಹಝ್ರತ್ ಯಾಖೂಬ್ ಹಾಗೂ ಅವರ ಪರಿಶುದ್ಧ ಪತ್ನಿಯಂದಿರ ಸಮಾಧಿಗಳು ಇಲ್ಲಿವೆ. ಇದು ಪ್ರಾಚೀನವಾದ ಚಾರಿತ್ರಿಕ ಪಟ್ಟಣವಾಗಿದೆ. ಈ ಪಟ್ಟಣ ಮತ್ತು ಇದರ ಆಸುಪಾಸಿನ ಗ್ರಾಮಗಳಲ್ಲಿ ನಮ್ಮ 27 ಅಹ್ಮದಿ ಸಹೋದರರು ಇರುವರು. ಸ್ಥಿರವಾದ ಜಮಾಅತ್ ಇಲ್ಲಿ ಸ್ಥಾಪಿತವಾಗಿದೆ. ನಮಾಝ್ ನಿರ್ವಹಿಸಲಿಕ್ಕಾಗಿ ಇಲ್ಲಿಯ ಒಬ್ಬ ಅಹ್ಮದಿಯ ಮನೆಯ ಒಂದು ಭಾಗವನ್ನು ಮಸೀದಿಯೆಂಬಂತೆ ಉಪಯೋಗಿಸಲಾಗುತ್ತದೆ.

**ಹೊಸ ಮಸೀದಿಗಳ ನಿರ್ಮಾಣ ಮತ್ತು ಜಮಾಅತಿಗೆ ಲಭಿಸಿದ ಮಸೀದಿಗಳು:**

ಅಲ್ಲಾಹನ ಅನುಗ್ರಹದಿಂದ ಅವುಗಳ ಒಟ್ಟು ಸಂಖ್ಯೆ 217 ಆಗಿದೆ. ಅದರಲ್ಲಿ 124 ಹೊಸ ಮಸೀದಿಗಳ ನಿರ್ಮಾಣವಾಯಿತು ಮತ್ತು ನಿರ್ಮಾಣಗೊಂಡ 93 ಮಸೀದಿಗಳು ನಮಗೆ ಲಭಿಸಿವೆ. ಇದರಲ್ಲಿ ಯು.ಕೆ. ಫ್ರಾಂಚ್, ಜರ್ಮನಿ, ಭಾರತ, ಇಂಡೋನೇಶಿಯಾ, ಗಾನಾ, ನೈಜೀರಿಯಾ, ಸೀರಲಿಯೋನ್, ಬೆನಿನ್, ಬುರ್ಕಿನೊಫಾಸೋ, ಲೈಬೀರಿಯಾ, ಐವರಿಕೋಸ್ಟ್, ಗಿನಿಬಸಾವ್, ತಂಜ಼ಾನಿಯ, ಯುಗಾಂಡ, ಮಾಲಿ, ಕೋಂಗೋಕಂಸಾಶಾ, ಕೇಮರೂನ್, ಸಿನಿಗಲ್, ಗಿನಿಕನಾಕುರಿ, ಟೋಗೋ ಚಾಡ್‌ಜ಼ೇಂಬಿಯ, ಆಸ್ಟ್ರೇಲಿಯ, ಮುಂತಾದ ದೇಶಗಳು ಒಳಗೊಂಡಿವೆ. ಲೋಕದ ಹಲವು ದೇಶಗಳಲ್ಲಿ ಮತ್ತು ನಾಲ್ಕು ಭೂಖಂಡಗಳಲ್ಲಿ ಮಸೀದಿಗಳನ್ನು ನಿರ್ಮಾಣಮಾಡುವ ಸೌಭಾಗ್ಯ ಲಭಿಸಿದೆ.

ಗೋಯ್ಟುಮಾಲದಲ್ಲಿ 31 ವರ್ಷದ ನಂತರ ಎರಡನೇ ಮಸೀದಿಯ ನಿರ್ಮಾಣವಾಗಿದೆ. ಬೈತುಲ್ ಅವ್ವಲ್ ಎಂಬ ಮೊದಲ ಮಸೀದಿ 1989ರಲ್ಲಿ ನಿರ್ಮಾಣಗೊಂಡಿತ್ತು. ಹೀಗೆ 31 ವರ್ಷದ ನಂತರ ಮಸ್ಜಿದ್ ನೂರ್ ಎಂಬ ಈ ಎರಡನೇ ಮಸೀದಿ ಕಾಬೂನನ ಪ್ರದೇಶದಲ್ಲಿ ನಿರ್ಮಾಣಗೊಂಡಿದೆ. ಈ ಪ್ರದೇಶಕ್ಕೆ 2015ರಲ್ಲಿ ಅಹ್ಮದಿಯ್ಯತಿನ ಸಂದೇಶ ತಲುಪಿತ್ತು. ಈ ಪ್ರದೇಶ ಗೋಯ್ಟುಮಾಲದ ನಮ್ಮ ಸೆಂಟರ್‌ನಿಂದ 328 ಕಿಲೋಮಿಟರ್ ದೂರದಲ್ಲಿದೆ. 70 ಕಿ.ಮಿ.ನಷ್ಟು ಪರ್ವತದ ಮಾರ್ಗದಿಂದ ಕೂಡಿದೆ. ಮಣ್ಣಿನ ಸಣ್ಣ ರಸ್ತೆ ಹಾಗು ತುಂಬ ಅಪಾಯಕಾರಿಯಾದದ್ದು ಆಗಿದೆ. ಮಸೀದಿಯ ಅಡಿಗಲ್ಲು 2019ರ ಡಿಸೆಂಬರ್ ತಿಂಗಳಲ್ಲಿ ಇಡಲಾಗಿತ್ತು. ಅಲ್ಲಾಹನ ಕೃಪೆಯಿಂದ ಅವನ ವಿಧಿ ಪ್ರಕಾರ ಅಲ್ಲಿ ರಸ್ತೆ ನಿರ್ಮಾಣ ಶುರುವಾಗಿ ಈಗ ಅಲ್ಲಾಹನ ಅನುಗ್ರಹದಿಂದ 70 ಕಿ. ಮಿ. ರಸ್ತೆ ತುಂಬ ಉತ್ತಮವಾಗಿ ಮಾಡಲಾಗಿದೆ. ರಸ್ತೆಯನ್ನು ಅಗಲಗೊಳಿಸುವ ಕಾರ್ಯ ಸಹ ನಡೆಯುತ್ತಿದೆ. ಈ ಮಸೀದಿಯಲ್ಲಿ 170 ಜನರು ನಮಾಝ್ ಮಾಡುವ ಸೌಕರ್ಯವಿದೆ. ಒಂದು ಮೀನಾರ ಸಹ ನಿರ್ಮಿಸಲಾಗಿದೆ. ಅದರ ಉದ್ದ ಎಂಟುವರೆ ಮೀಟರ್ ಆಗಿದೆ. ಮಸೀದಿಯೊಂದಿಗೆ ಎರಡು ಮಹಡಿಯ ಮಿಶನ್ ಹೌಸ್ ಸಹ ನಿರ್ಮಿಸಲಾಗಿದೆ. ಗ್ರೌಂಡ್ ಫ್ಲೋರಿನಲ್ಲಿ ಲೈಬ್ರರಿ ಮತ್ತು ಆಫೀಸ್ ಇವೆ. ಮೊದಲು ಫಸ್ಟ್ ಫ್ಲೋರಿನಲ್ಲಿ ನಿವಾಸದ ಭಾಗವನ್ನು ಮಾಡಲಾಗಿತ್ತು. ಪುರುಷರಿಗೆ ಮತ್ತು ಸ್ತ್ರೀಯರಿಗೆ ಬೇರೆ ಬೇರೆ ಕಿಚನ್ ಮಾಡಲಾಗಿತ್ತು. ನಮ್ಮ ಮಸೀದಿಗಳಲ್ಲಿ ಸಾಮಾನ್ಯವಾಗಿರುವಂತಹ ವಾಶ್‌ರೂಮ್ಸ್ ಮಾಡಲಾಗಿದೆ. ಹೀಗೆ ಆವಶ್ಯಕವಾದ ಎಲ್ಲವೂ ಇದೆ. ಉಚ್ಚ ಸ್ಥಳದಲ್ಲಿ ಇರುವ ಕಾರಣದಿಂದ ದೂರದಿಂದಲೇ ಕಾಣಬಹುದಾಗಿದೆ.

ನಾರ್ವೇಯ ಕರಿಸ್ಟಾನ್ ಎಂಬ ಸ್ಥಳದಲ್ಲಿರುವ ನಮ್ಮ ಜಮಾಅತಿನಲ್ಲಿ ಈ ವರ್ಷ ಚರ್ಚಿನ ಒಂದು ಕಟ್ಟಡವನ್ನು ಮಸೀದಿಗಾಗಿ ಖರೀದಿ ಮಾಡಲಾಯಿತು. ಈ ಪಟ್ಟಣದಲ್ಲಿ ಜೂಲಾಯಿ 2017ರಲ್ಲಿ ಕಂಪೆನಿಯ ಆಫೀಸ್ ಆಗಿದ್ದ ಒಂದು ಕಟ್ಟಡವನ್ನು ಖ಼ರೀದಿ ಮಾಡಲಾಗಿತ್ತು. ಅಲ್ಲಿ ನಮಾಝ್ ಮತ್ತು ಕಾರ್ಯಕ್ರಮಗಳನ್ನು ಮಾಡಲು ಶುರುಮಾಡಲಾಗಿತ್ತು. ಈ ಜಾಗದಲ್ಲಿ ಮಸೀದಿ ಮಾಡುವ ಯೋಜನೆ ಮಾಡಿ ಅದರ ನಕಾಶೆ ಇತ್ಯಾದಿ ಮಾಡುವ ಕೆಲಸ ಶುರುಮಾಡಿ ಸರ್ಕಾರಿ ಸಂಸ್ಥೆಗಳಿಗೆ ಸಮರ್ಪಿಸಲಾದಾಗ ಸುತ್ತುಮುತ್ತಲಿನಲ್ಲಿ ವಾಸಿಸುವ ಜನರು ವಿರೋಧಿಸಲು ತೊಡಗಿದರು ಮತ್ತು ಪತ್ರಿಕೆಗಳಲ್ಲೂ ಬಹಳ ವಿರೋಧವನ್ನು ವ್ಯಕ್ತಪಡಿಸಲಾಗಿತ್ತು. ವಿರೋಧದ ಅಲೆ ಎರಡು ವರ್ಷಗಳ ಕಾಲ ಮುಂದುವರಿಯಿತು. ಸಮೀಪದಲ್ಲೇ ಒಂದು ಚರ್ಚ್ ಸಹ ಇತ್ತು. ಚರ್ಚಿನ ಜನರು ಕೂಡ ಮಸೀದಿ ನಿರ್ಮಾಣವನ್ನು ಶಕ್ತವಾಗಿ ವಿರೋಧಿಸಿದರು. ಆದರೆ ಅಲ್ಲಾಹನ ವಿಧಿ ಹೇಗೆ ಉಂಟಾಯಿತೆಂದರೆ, ನಮ್ಮನ್ನು ವಿರೋಧಿಸುತ್ತಿದ್ದ ಚರ್ಚಿನ ಅಧಿಕಾರಿಗಳಿಂದ ಚರ್ಚಿನ ಮೇಲ್ನೋಟವಹಿಸಲು ಸಾಧ್ಯವಾಗದ ಸ್ಥಿತಿ ಉಂಟಾಗಿ ಚರ್ಚನ್ನು ಮಾರಾಟ ಮಾಡಲು ತೀರ್ಮಾನಿಸಿದರು. ಚರ್ಚ್ ಮಾರಲು ಇಚ್ಛಿಸುವುದಾಗಿ ಕೌನ್ಸಿಲ್‌ಗೆ ಹೇಳಿದರು. ಅಹ್ಮದಿಯಾ ಜಮಾಅತಿನವರನ್ನು ಸಂಪರ್ಕಿಸಿದರೆ ಅವರು ಬಹುಶಃ ಚರ್ಚನ್ನು ಖರೀದಿಸಬಹುದು ಎಂದು ಕೌನ್ಸಿಲ್ ಸಲಹೆ ನೀಡಿದರು. ಚರ್ಚಿನ ಅಧಿಕಾರಿಗಳು ನಮ್ಮ ಮುಬಲ್ಲಿಗರನ್ನು ಸಂಪರ್ಕಿಸಿದರು. ಮುಬಲ್ಲಿಗ್ ಸಾಹಿಬರು ಎಲ್ಲವನ್ನು ಅವಲೋಕಿಸಿ ನನಗೆ ರಿಪೋರ್ಟ್ ನೀಡಿದರು. ನನ್ನ ಮಂಜೂರಾತಿಯ ನಂತರ ಚರ್ಚಿನ ಕಟ್ಟಡವನ್ನು ಮಸೀದಿಗಾಗಿ ಖರೀದಿಸಲಾಯಿತು. ಈ ವರ್ಷದ 25 ಫೆಬ್ರವರಿಯಂದು ಅಲ್ಲಾಹನ ಅನುಗ್ರಹದಿಂದ ಚರ್ಚಿನ ಕೀಲುಗೈ ನಮಗೆ ಲಭಿಸಿತು. ಮಸೀದಿ ಮಾಡುವುದನ್ನು ಈ ಚರ್ಚ್ ವಿರೋಧಿಸುತ್ತಿತ್ತು. ಈಗ ಅಲ್ಲಾಹನ ಅನುಗ್ರಹದಿಂದ ಅದೇ ಚರ್ಚಿನಲ್ಲಿ ಜಮಾಅತಿನ ಮರ್‌ಯಮ್ ಮಸೀದಿ ನಿರ್ಮಾಣಗೊಂಡಿದೆ. ಸರ್ಕಾರಿ ಖರ್ಚುಗಳೆಲ್ಲ ಸೇರಿ ಸುಮಾರು ಹತ್ತು ಮಿಲಿಯನ್ ನಾರ್ವೇಜಿಯನ್ ಕ್ರೋನ್ಸ್ ಇದಕ್ಕಾಗಿ ಖರ್ಚಾಗಿದೆ.

ಮಲಾವಿಯಲ್ಲಿ ಮೊದಲ ಮಸೀದಿಯನ್ನು ನಿರ್ಮಿಸಲಾಗಿದೆ. ಇಲ್ಲಿಯ ಜಿಲ್ಲೆಯಾದ ಮಾಲಿನ್‌ನಲ್ಲಿ ಜಮಾಅತಿನ ಈ ಮೊದಲ ಮಸೀದಿ ನಿರ್ಮಾಣಗೊಂಡಿದೆ. ತನ್‌ಝೀಮಿಯಾದ ಅಮೀರ್ ಸಾಹಿಬರು ಬರೆಯುತ್ತಾರೆ: ಮಸೀದಿ ಮತ್ತು ಮಿಶನ್ ಹೌಸಿನ ನಿರ್ಮಾಣಕ್ಕೆ ಮುಂಚಿತವಾಗಿ ಆ ಪ್ರದೇಶದ ಜನರಲ್ಲಿ ನಮ್ಮ ಜಮಾಅತಿನ ಮೇಲೆ ಭರವಸೆ ಉಂಟುಮಾಡಲಾಯಿತು. ತಮ್ಮ ಗ್ರಾಮದಲ್ಲಿ ಮಸೀದಿ ನಿರ್ಮಾಣದ ಬಗ್ಗೆ ಕೇಳಿ ಎಲ್ಲರೂ ಸಂತೋಷದಲ್ಲಿದ್ದರು. ಆದರೆ ಕೆಲವು ಕಿಡಿಗೇಡಿಗಳು ಅಲ್ಲಿ ಹಲ್ಲೆ ನಡೆಸಿ ನಿರ್ಮಾಣದ ಸಾಮಾಗ್ರಿಗಳನ್ನೆಲ್ಲ ತೆಗೆದುಕೊಂಡು ಹೋದರು. ಈ ಕಾರಣದಿಂದ ಪೊಲೀಸರ ಆದೇಶದ ಮೇರೆಗೆ ನಿರ್ಮಾಣ ಕೆಲಸ ಕೆಲವು ದಿನಗಳಿಗೆ ನಿಲ್ಲಿಸಲಾಯಿತು. ಪುನಃ ನಿರ್ಮಾಣ ಕೆಲಸ ಶುರುವಾದಾಗ ಸ್ಥಿತಿಗತಿಗಳ ಗಂಭೀರತೆಯ ಬಗ್ಗೆ ಗ್ರಾಮವಾಸಿಗಳಿಗೆ ತಿಳಿಸಲಾಯಿತು. ಪುನಃ ಯಾರೂ ಇಂತಹ ದುಷ್ಟ ಕೆಲಸಮಾಡದಿರಲು ಈಗ ಎಲ್ಲರೂ ಒಗ್ಗಟ್ಟಾಗಿ ನಿಂತು ಅದನ್ನು ಸಂರಕ್ಷಿಸಬೇಕೆಂದು ಅವರಿಗೆ ಹೇಳಿಕೊಡಲಾಯಿತು. “ಈ ಮಸೀದಿ ನಮ್ಮ ಗ್ರಾಮಕ್ಕೆ ಒಂದು ಅನುಗ್ರಹವಾಗಿದೆ ಅದರ ನಿರ್ಮಾಣವನ್ನು ಎಲ್ಲರೂ ಸೇರಿ ಖಾತರಿಪಡಿಸುವೆವು ಯಾವುದೇ ಅಹಿತಕಕರ ಘಟನೆ ನಡೆಯದಂತೆ ನೋಡಿಕೊಳ್ಳುವೆವು” ಎಂದು ಗ್ರಾಮ ವಾಸಿಗಳೂ ಭರವಸೆ ನೀಡಿದರು. ಹೀಗೆ ಅಲ್ಲಾಹನ ಅನುಗ್ರಹದಿಂದ ಅಲ್ಲಿನ ಜಮಾಅತಿನ ಸದಸ್ಯರು ಆಸುಪಾಸಿನ ಜನರೊಂದಿಗೆ ತಮ್ಮ ತಬ್ಲೀಗ್ ಪರವಾದ ಸಂಪರ್ಕವನ್ನು ವರ್ಧಿಸಿದರು. ಮಾತ್ರವಲ್ಲ ಇಸ್ಲಾಮಿನ ಯಥಾರ್ಥ ಅಧ್ಯಾಪನೆಯಾಗಿರುವ ಅಹ್ಮದಿಯ್ಯತಿನ ಶಾಂತಿಪ್ರಿಯ ಮತ್ತು ಸ್ನೇಹಭರಿತ ಪಾಠವನ್ನು ಅವರಿಗೆ ತಿಳಿಸಿಕೊಡಲಾಯಿತು. ಹೇಗಿದ್ದರೂ ಈ ಮಸೀದಿ ನಿರ್ಮಿಸಿ ಅದರ ಉದ್ಘಾಟನಾ ಸಮಾರಂಭ ಜರಗಿಸಲಾದಾಗ ಒಟ್ಟು ಸುಮಾರು 450ರಷ್ಟು ಜನರು ಭಾಗವಹಿಸಿದರು. ಕಾರ್ಯಕ್ರಮಕ್ಕೆ ಅಲ್ಲಿನ ವಿವಿಧ ಝೋನಿನಿಂದ 13 ಚೀಫ್ ಸಹ ಬಂದಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ಇತರ ಮಸೀದಿಗಳ ಇಮಾಮರು ಸಹ ಇದ್ದರು. ಅಹ್ಮದಿಯರು ಮುಸ್ಲಿಮರಲ್ಲ ಮತ್ತು ಅವರ ಆರಾಧನೆ ರೀತಿ ಕೂಡ ಮುಸ್ಲಿಮರಂತಲ್ಲ ಎಂದು ತಪ್ಪಾಗಿ ಹೇಳಲಾಗಿತ್ತೆಂದೂ, ಆದರೆ ಅಹ್ಮದಿಯರು ಮುಸ್ಲಿಮರು ಮಾತ್ರವಲ್ಲ, ಇತರ ಮುಸ್ಲಿಮರನ್ನು ಶಾಂತಿಯಿಂದ ಇರಲು ಒತ್ತಾಯಿಸುವವರೆಂದು ಇಲ್ಲಿಗೆ ಬಂದು ತಿಳಿಯಿತು ಎಂದು ಈ ಸಂದರ್ಭದಲ್ಲಿ ಅಹ್ಮದಿಯೇತರಾದ ಜನರು ಬಹಿರಂಗವಾಗಿ ಸಮ್ಮತಿಸಿದರು. ಈ ರೀತಿಯಲ್ಲಿ ವಿವಿಧ ಕಾರ್ಯಕ್ರಮಗಳ ಕಾರಣದಿಂದ ಈ ಪ್ರದೇಶದ ಮೂರು ಗ್ರಾಮದಿಂದ ಒಂದು ಸಾವಿರಕ್ಕಿಂತ ಹೆಚ್ಚಿನ ಜನರು ಬೈಅತ್ ಮಾಡಿ ಜಮಾಅತಿಗೆ ಪ್ರವೇಶಿಸಿದರು. ಅದರಲ್ಲಿ ತಮ್ಮ ತಮ್ಮ ಝೋನಿನ ಚೀಫ್ ಸಹ ಇದ್ದಾರೆ.

ಮಸ್ಜಿದ್ ಬೈತುಲ್‌ಆಫಿಯತ್ ಮೆಕ್ಸಿಕೋ: ಮೆಕ್ಸಿಕೋದ ರಾಜಧಾನಿಯಾದ ಮೆಕ್ಸಿಕೋ ಸಿಟಿಯಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಕಟ್ಟಡವನ್ನು ಸೆಂಟರ್ ಆಗಿ ಖರೀದಿಸಲಾಗಿತ್ತು. ಇದು ಮೆಕ್ಸಿಕೋದಲ್ಲಿ ಜಮಾಅತ್ ಖರೀದಿಸಿದ ಮೊದಲ ಸೊತ್ತಾಗಿದೆ. ಇದು ಮೂರು ಮಹಡಿ ಕಟ್ಟಡವಾಗಿದೆ. ಈ ಕಟ್ಟಡದ ಗ್ರೌಂಡ್‌ಫ್ಲೋರನ್ನು ಮಸೀದಿಯನ್ನಾಗಿ ಮಾಡಲಾಯಿತು. ಈ ಫ್ಲೋರಿನಲ್ಲಿ ಪುರುಷರು ಮತ್ತು ಸ್ತ್ರೀಯರಿಗೆ ನಮಾಝಿನ ಹಾಲ್, ಲೈಬ್ರರಿ, ಜಮಾಅತ್ ಆಫೀಸ್ ಮತ್ತು ಕೆಲವು ರೂಮುಗಳಿವೆ. ಅವುಗಳನ್ನು ವಿವಿಧ ಕ್ಲಾಸಿಗಾಗಿ

ಉಪಯೋಗಿಸಲಾಗುತ್ತದೆ. ಫಸ್ಟ್ ಫ್ಲೋರಲ್ಲಿ ಮುಬಲ್ಲಿಗ್ ಕ್ವಾರ್ಟರ್ ಇದೆ. ಸೆಕೆಂಡ್ ಫ್ಲೋರ್ ಆವಶ್ಯಾನುಸಾರ ಉಪಯೋಗಿಸಲಾಗುವುದು.

ಬೇಲೀಸ್ ಮತ್ತಿತ್ತರ ಸ್ಥಳಗಳಲ್ಲಿ ಸಹ ಮಸೀದಿಗಳು ನಿರ್ಮಾಣದ ಹಂತದಲ್ಲಿದೆ. ಅವುಗಳಲ್ಲೆವು ಸಹ ಬೇಗನೇ ಪೂರ್ತಿಯಾಗುವುವು. ಅವುಗಳ ಬಗ್ಗೆ ನಾನು ಪ್ರಸ್ತಾಪಿಸುವುದಿಲ್ಲ.

ಅಮೀರ್ ಸಾಹಿಬ್ ಮಾಲಿ ಬರೆಯುತ್ತಾರೆ: ಮಾಲಿಯ ಒಂದು ಜಮಾಅತಾದ ಟೀಮಾ ನಮ್ಮ ಮರ್ಕಝಿನಿಂದ 3 ಕಿ.ಮಿ. ದೂರದಲ್ಲಿದೆ. ಇಲ್ಲಿ 4 ವರ್ಷಗಳ ಮುಂಚೆ ಮಸೀದಿಯ ನಿರ್ಮಾಣ ಶುರುವಾಯಿತು. ಅದರ ಮಿನಾರ ಮತ್ತು ಸ್ವಲ್ಪ ಫಿನಿಶಿಂಗ್ ಕೆಲಸಗಳು ಬಾಕಿಯಿದ್ದಾಗ ಮಸೀದಿಯ ಕೆಲಸವನ್ನು ನಿಲ್ಲಿಸಲು ಚೀಫ್ ಕಡೆಯಿಂದ ಆದೇಶಬಂತು. ವಿರೋಧದ ಕಾರಣ ಅಲ್ಲಿಯ ಜನರು ಅಹ್ಮದಿಯ್ಯತಿನ ಬಗ್ಗೆ ತಪ್ಪಾದ ದೂರುಗಳನ್ನು ಚೀಫ್ ಮತ್ತು ಮೇಯರ್ ಮುಂತಾದವರಿಗೆ ಕೊಟ್ಟಿದ್ದರು. ಹೇಗಿದ್ದರೂ ಕೆಲಸ ನಿಲ್ಲಿಸಲಾಯಿತು. ಮೂರು ವರ್ಷಗಳ ಕಾಲ ಪ್ರಯತ್ನ ನಡೆಯುತ್ತಾ ಇತ್ತು. ಕೊನೆಗೆ ಮೂರು ವರ್ಷಗಳ ನಂತರ ಸಂಪರ್ಕಗಳ ಕಾರಣದಿಂದ ಮತ್ತು ವಿವಿಧ ರೀತಿಯಲ್ಲಿ ಪ್ರಯತ್ನಿಸಿದ ಕಾರಣದಿಂದ ಚೀಫ್ ಸಮ್ಮತಿ ಸೂಚಿಸಿ ಮಸೀದಿ ನಿರ್ಮಾಣ ಪೂರ್ತಿಮಾಡಲು ಅನುಮತಿ ನೀಡಿದರು. ನೀವು ಅಹ್ಮದಿಯರು ಮೂರು ವರ್ಷಗಳ ಕಾಲ ತುಂಬ ಸಹನೆ ಮತ್ತು ತಾಳ್ಮೆಯಿಂದ ಇದ್ದೀರಿ ನೀವು ಬೇಕಿದ್ದರೆ ಉನ್ನತ ಜನರು ಸಂಪರ್ಕಗಳ ಮೂಲಕ ಇಲ್ಲಿ ಮಸೀದಿ ನಿರ್ಮಾಣ ಮಾಡಬಹುದಾಗಿತ್ತು ಎಂದು ಚೀಫ್ ಹೇಳಿದರು. ವಹಾಬಿಗಳ ಉದಾಹರಣೆ ನೀಡುತ್ತಾ ಹೇಳಿದರು: ಅವರನ್ನು ಮಸೀದಿ ನಿರ್ಮಾಣದಿಂದ ತಡೆಯಲಾಗಿತ್ತು ಆದರೆ ಅವರು ತಮ್ಮ ಕೆಲವು ಸಂಪರ್ಕಗಳ ಮೂಲಕ ಮಸೀದಿಯನ್ನು ನಿರ್ಮಾಣ ಮಾಡಿದ್ದರು. ಅದೇ ರೀತಿಯಲ್ಲಿ ನೀವು ಮಾಡಬಹುದಾಗಿತ್ತು ಆದರೆ ನೀವು ತಾಳ್ಮೆವಹಿಸಿದ್ದೀರಿ. ಆದ್ದರಿಂದ ನಮಗೆ ನಿಮ್ಮ ಮೇಲೆ ಗೌರವವಿದೆ ಎಂದು ಹೇಳಿದರು. ಗ್ರಾಮದ ಚೀಫ್ ಮತ್ತು ಅವರ ಸಹಾಯಕರು ನಮಗೆ ತಡವಾಗಿ ಅನುಮತಿ ನೀಡಿದ್ದಕ್ಕೆ ಪದೇ ಪದೇ ಕ್ಷಮೆ ಕೇಳುತ್ತಿದ್ದರು. ಈಗ ನೀವು ಮಸೀದಿಯ ಕೆಲಸವನ್ನು ಪೂರ್ತಿಮಾಡಿರಿ ಮತ್ತು ನಮಾಝನ್ನು ಶುರುಮಾಡಿರಿ ಎಂದು ಒಮ್ಮತಾಭಿಪ್ರಾಯದಿಂದ ಅವರು ಹೇಳಿದರು. ಈಗ ಅಲ್ಲಾಹನ ಅನುಗ್ರಹದಿಂದ ನಿಯತವಾಗಿ ಮಸೀದಿಯಲ್ಲಿ ನಮಾಝ್ ಶುರುವಾಗಿದೆ.

ತನ್ಸಾನಿಯಾದ ಅಮೀರ್ ಸಾಹಿಬರು ಬರೆಯುತ್ತಾರೆ: ಈ ವರ್ಷ ಅವರ ಒಂದು ರೀಜನಲ್ಲಿ ಅಲ್ಲಾಹನ ಅನುಗ್ರಹದಿಂದ ಎರಡು ಜಮಾಅತುಗಳನ್ನು ಸ್ಥಾಪಿಸಲು ತೌಫೀಕ್ ಲಭಿಸಿತು. ಈ ಮಸೀದಿಗಳ ನಿರ್ಮಾಣಕ್ಕೆ ಮುಂಚಿತವಾಗಿ ಸಮೀಪ ಗ್ರಾಮದ ಸುನ್ನೀ ಮೌಲವಿಗಳು ಇಲ್ಲಿಗೆ ಬಂದು ಜನರನ್ನು ದಾರಿತಪ್ಪಿಸುತ್ತಿದ್ದರು. ಅಹ್ಮದಿಯಾ ಜಮಾಅತ್ ಒಂದು ಸಣ್ಣ ಪಂಗಡವಾಗಿದೆ ಅವರಿಗೆ ಮಸೀದಿ ನಿರ್ಮಿಸುವ ಶಕ್ತಿಯಿಲ್ಲ. ಅವರು ಇದಕ್ಕಿಂತ ಮುಂಚೆ ಎರಡು ಮಸೀದಿಗಳನ್ನು ಸಮೀಪ ಗ್ರಾಮದಲ್ಲಿ ನಿರ್ಮಿಸಿರುವರು. ಅದೇ ಸಾಕು. ಇವರಿಂದ ಮಸೀದಿ ನಿರ್ಮಿಸಲು ಸಾಧ್ಯವಲ್ಲ ಎಂದೆಲ್ಲ ಹೇಳಿದ್ದರು. ಆದರೆ ಸ್ವಲ್ಪ ಕಾಲದಲ್ಲೇ ಈ ಗ್ರಾಮದಲ್ಲಿ ಮಸೀದಿ ನಿರ್ಮಾಣ ಆರಂಭವಾದಾಗ ಅವರು ಅಚ್ಚರಿಗೊಂಡರು. ಇವರ ಬಳಿ ಯಾವುದೋ ಒಂದು ವಿಶೇಷವಾದ ಶಕ್ತಿಯಿರುವ ಕಾರಣ ಇವರು ಅಲ್ಪ ಸಮಯದಲ್ಲೇ ಬಹಳ ಸುಂದರವಾದ ಮಸೀದಿಯನ್ನು ನಿರ್ಮಿಸುತ್ತಾರೆ, ನಮಾಝ್ ಮಾಡಲಿಕ್ಕಾಗಿ ಇಲ್ಲೊಂದು ಟೆಂಟ್ ಹಾಕಲು ಕೂಡ ನಮ್ಮಿಂದ ಸಾಧ್ಯವಾಗಿಲ್ಲ ಎಂದು ಜನರೊಡನೆ ಹೇಳತೊಡಗಿದರು. ಅನಂತರ ಅವರು ಬೇರೆ ಕುತಂತ್ರವನ್ನು ಮಾಡಲು ಶುರುಮಾಡಿದರು. ಜನರಲ್ಲಿ ಭಯಹುಟ್ಟಿಸಲು ಶುರುಮಾಡಿದರು. ಅಹ್ಮದಿಯರಿಂದ ಬಿಟ್ಟುನಿಲ್ಲಬೇಕು, ಸಂಪೂರ್ಣ ಪ್ರದೇಶವನ್ನು ವಶಪಡಿಸುವುದಾಗಿದೆ ಅವರ ಉದ್ದೇಶ, ಅವರು ಹಾಗೆ ಮಾಡುವರು, ಹೀಗೆ ಮಾಡುವರು, ಅನಂತರ ಮಸೀದಿ ಮಾಡುವರು ಎಂದೆಲ್ಲ ಹೇಳಿ ಜನರಲ್ಲಿ ಭಯಹುಟ್ಟಿಸಲು ಶುರುಮಾಡಿದರು. ಆದರೆ ಜನರು ಅವರ ಪರಿವೆ ಮಾಡಲಿಲ್ಲ.

ಬುರ್ಕಿನಾಫಾಸೋದ ಮುಬಲ್ಲಿಗ್ ಬರೆಯುತ್ತಾರೆ: ಕಾರಿ ಜಮಾಅತಿನಲ್ಲಿ ಮಸೀದಿ ನಿರ್ಮಾಣದ ಕೆಲಸ ನಡೆಯುತ್ತಿತ್ತು. ಅಲ್ಲಿ ಪ್ರತಿಯೊಬ್ಬ ವ್ಯಕ್ತಿ ಆವೇಶದಿಂದ ಈ ಕೆಲಸದಲ್ಲಿ ಭಾಗವಹಿಸುತ್ತಿದ್ದರು. ನಿರ್ಮಾಣ ಕೆಲಸಕ್ಕಾಗಿ ಚಂದಾ ನೀಡಲು ಸಹ ಹೇಳಲಾಗಿತ್ತು. ಪ್ರತಿಯೊಬ್ಬರು ತಮ್ಮದಾದ ರೀತಿಯಲ್ಲಿ ಈ ಸತ್ಕರ್ಮದಲ್ಲಿ ಭಾಗವಹಿಸುತ್ತಿದ್ದರು. ಒಂದು ದಿನ ಹಿರಿವಯಸ್ಸಿನ ಎರಡು ಅಹ್ಮದಿಯರು ಬಂದರು. ಅವರು ಎರಡು ಕೋಳಿಗಳನ್ನು ಮತ್ತು ಸ್ವಲ್ಪ ಮೊಟ್ಟೆಗಳನ್ನು ತಂದಿದ್ದರು. ನಮ್ಮ ಬಳಿ ಈ ಕೋಳಿಗಳು ಮತ್ತು ಮೊಟ್ಟೆಗಳು ಮಾತ್ರವಿದೆ. ಇದನ್ನೇ ಮಸೀದಿ ನಿರ್ಮಾಣಕ್ಕಾಗಿ ನಮ್ಮ ಚಂದಾ ಆಗಿ ಸ್ವೀಕರಿಸಿಕೊಂಡು ನಮ್ಮನ್ನು ಈ ಒಳಿತನಲ್ಲಿ ಭಾಗಿಯನ್ನಾಗಿ ಮಾಡಿರಿ ಎಂದು ಹೇಳಿದರು. ಹೀಗೆ ಮುಅಲ್ಲಿಮ್ ಸಾಹಿಬರು ಅವರಿಗೆ ಇದರ ರಶೀದಿ ಕೊಟ್ಟರು.

ಅಂದಾಜು ಎಂಬತ್ತು ತೊಂಬತ್ತು ವರ್ಷಗಳ ಹಿಂದೆ ಖಾದಿಯಾನಿನ ಬಡವರ ಪರಂಪರೆಯನ್ನು, ಚರಿತ್ರೆಯನ್ನು ಆಫ್ರಿಕದ ದರಿದ್ರರು ಪುನಃ ಜಾರಿಗೊಳಿಸುತ್ತಿದ್ದಾರೆ. ಯಾರಾದರೂ ಇದನ್ನು ನೋಡಿದರೆ, ವಿವೇಕದ ಕಣ್ಣುಗಳಿಂದ ನೋಡುವುದಾದರೆ ಮತ್ತು ಅವರು ಸೌಭಾಗ್ಯವಂತರೂ ಆಗಿದ್ದರೆ, ಇದು ಸತ್ಯವಲ್ಲದೆ ಬೇರೆಯೇನೂ ಅಲ್ಲವೆಂದು ಅವರಿಗೆ ಮನವರಿಕೆಯಾಗುವುದು. ಹೇಗೆ ತ್ಯಾಗಮಾಡಬೇಕೆಂದು ಅಲ್ಲಾಹನು ಜನರ ಹೃದಯಗಳಿಗೆ ತಿಳಿಸಿಕೊಡುತ್ತಾನೆ.

ತನ್ಸಾನಿಯಾದ ರೇಂಗಾ ರೀಜನಿನ ಮುಅಲ್ಲಿಮ್ ಸಾಹಿಬರು ಬರೆಯುತ್ತಾರೆ: ಎಪ್ರಿಲ್ 2020ರಲ್ಲಿ ಕೆಲವು ಖುದ್ದಾಮ್‌ರೊಡನೆ ಸಮೀಪದ ಒಂದು ಗ್ರಾಮಕ್ಕೆ ಹೋದೆವು. ಲೋಕಲ್ ಗವರ್ನಮೆಂಟಿನ ಅನುಮತಿಯಿಂದ ಸಾರ್ವಜನಿಕ ಸ್ಥಳದಲ್ಲಿ ಮಧ್ಯಾಹ್ನ 1 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ಲೆಕ್ಚರ್ ನೀಡಲಾಯಿತು. ಲೆಕ್ಚರ್ ನಂತರ ಹಾಜಿರಿದ್ದವರ ಸವಾಲುಗಳಿಗೆ ಜವಾಬುಗಳನ್ನು ಕೊಡಲಾಯಿತು. ಈ ಪ್ರೋಗ್ರಾಮ್ ಕೊನೆಗೊಂಡಾಗ 72 ವಯಸ್ಸಿನ ಹಲೀಮ ಎಂಬ ಹೆಸರಿನ ಓರ್ವ ಹೆಂಗಸು ಕೈಯಲ್ಲಿ ಒಂದು ಫೈಲನ್ನು ತೆಗೆದುಕೊಂಡು ಬಂದಳು. ನಾನು ಮುಸ್ಲಿಮ್ ಮತ್ತು ತುಂಬ ಕಾಲದಿಂದ ಇಲ್ಲಿ ವಾಸಿಸುತ್ತಿದ್ದೇನೆ. ಇಸ್ಲಾಮಿನ ತಬ್ಲೀಗಿಗಾಗಿ ಯಾರೂ ಇಲ್ಲಿಗೆ ಬಂದದ್ದಾಗಿ ನಾನು ಎಂದಿಗೂ ಕಂಡಿಲ್ಲ ಎಂದು ಆ ಹೆಂಗಸು ಹೇಳಿದಳು. ತಮ್ಮ ಕೈಯಲ್ಲಿ ಇದ್ದ ಫೈಲನ್ನು ಮುಅಲ್ಲಿಮ್ ಸಾಹಿಬರಿಗೆ ಕೊಡುತ್ತಾ ಹೇಳಿದಳು: ಇದು ನನ್ನ ಜಮೀನಿನ ಡೋಕ್ಯುಮೆಂಟ್ಸ್ ಮತ್ತು ರಿಜಿಸ್ಟ್ರೇಶನ್ ಆಗಿವೆ. ನಿಮ್ಮ ಜಮಾಅತ್ ಇಲ್ಲಿ ತಯಾರಾಗಿ ಇಲ್ಲಿ ಮಸೀದಿ ನಿರ್ಮಿಸಲು ಇಚ್ಛಿಸುವಾಗ ನನ್ನ ತುಂಡು ನೆಲವನ್ನು ನಿಮಗಾಗಿ ಸಮರ್ಪಿಸುತ್ತೇನೆ. ಇದರ ಅಧಿಕಾರವನ್ನು ನಿಮಗೆ ಕೊಡುತ್ತಿದ್ದೇನೆ. ಈಗಲ್ಲಿ ಜಮಾಅತಿನ ಜನರ ವಖಾರೆ ಅಮಲ್ ಮೂಲಕ ಮಸೀದಿಯ ಕೆಲಸ ಶುರುಮಾಡಲಾಗಿದೆ. ಇಟ್ಟಿಗೆ ಇತ್ಯಾದಿಗಳನ್ನು ಕಟ್ಟಲಾಗಿದೆ. ಮಾಡುತ್ತಿರುವ ಕೆಲಸಗಳಲ್ಲಿ ಈ ವೃದ್ಧ ಸ್ತ್ರೀಯ ಮಗನು ಸಹ ಭಾಗೀಯಾಗಿರವರು. ಈ ರೀತಿಯಲ್ಲಿ ಅಲ್ಲಾಹನು ಉತ್ತಮ ಸ್ವಭಾವದ ಜನರ ಹೃದಯಕ್ಕೆ ಸಹಾಯ ಮಾಡುವ ಮನಸ್ಸನ್ನು ನೀಡುತ್ತಾನೆ.

ಬುರ್ಕಿನಾಫಾಸೋದಲ್ಲಿ ಕಾರಿ ಎಂಬ ಒಂದು ಜಮಾಅತಿದೆ. ಅಲ್ಲಿಯ ಒಬ್ಬ ಸ್ತ್ರೀಯಾದ ಝೀನತ್ ಸಾಹಿಬ ಹೇಳುತ್ತಾರೆ: ನಾನು ಬಿ.ಎ. ಪರೀಕ್ಷೆ ಪಾಸ್ ಮಾಡಿದ ನಂತರ ಎರಡು ವರ್ಷಗಳ ಕಾಲ ನರ್ಸ್ ಆಗಲು ಟೆಸ್ಟ್ ನೀಡುತ್ತಾ ಇದ್ದೆ. ಆದರೆ ತೇರ್ಗಡೆಗೊಳ್ಳಲಿಲ್ಲ. ನಾನು ಮತ್ತು ನನ್ನ ಗಂಡ ಒಂದು ಪ್ರೈವೆಟ್ ನರ್ಸಿಂಗ್ ಸ್ಕೂಲಲ್ಲಿ ಪ್ರವೇಶಿಸಲು ಹಣ ಕೂಡಿಸಲು ಶುರುಮಾಡಿದೆವು. ಅದೇ ವೇಳೆ ಟೆಸ್ಟ್ ಸಹ ನೀಡುತ್ತಾ ಇದ್ದೆ. ಆದರೆ ಪ್ರವೇಶನ ಲಭಿಸುವ ಪ್ರತೀಕ್ಷೆಯಿರಲಿಲ್ಲ. ಅದೇ ವೇಳೆ ಕಾರಿಯ ಮಸೀದಿಗಾಗಿ ಜಮಾಅತಿನ ಕಡೆಯಿಂದ ಚಂದಾ ಕೇಳಲಾಗುತ್ತಿತ್ತು. ನಾವು ಶಿಕ್ಷಣಕ್ಕಾಗಿ ಒಟ್ಟುಗೂಡಿಸಿದ ಹಣವನ್ನು ಚಂದಾ ಪಾವತಿಸಲು ನೀಡಿದೆವು. ಪ್ರವೇಶನದ ಉದ್ದೇಶವನ್ನು ಸ್ವಲ್ಪ ಸಮಯಕ್ಕೆ ಉಪೇಕ್ಷಿಸಿದೆವು. ಎರಡು ವಾರದಲ್ಲೇ ನನಗೆ ಹೆಲ್ತ್ ಡಿಪಾರ್ಟ್‌ಮೆಂಟಿನಿಂದ ಫೋನ್ ಬಂತು. ನನ್ನ ಡೈರೆಕ್ಟ್ ಸೆಲೆಕ್ಷನ್ ಆಗಿದೆ ಮತ್ತು ನನ್ನ ಎಲ್ಲ ಖರ್ಚುಗಳನ್ನು ಸರ್ಕಾರ ಸ್ವತಃ ಪಾವತಿಸುವುದು ಎಂದು ಅವರು ಹೇಳಿದರು. ಹೀಗೆ ಅಲ್ಲಾಹನು ಜನರ ವಿಶ್ವಾಸವನ್ನು ವರ್ಧಿಸಲು ಏರ್ಪಾಡು ಮಾಡುತ್ತಾನೆ.

ಅಲ್ಲಾಹನ ಅನುಗ್ರಹದಿಂದ ಈ ವರ್ಷ 97 ಮಿಶನ್ ಹೌಸುಗಳ ವರ್ಧನೆ ಉಂಟಾಗಿದೆ. ಮಿಶನ್ ಹೌಸ್ ಮತ್ತು ತಬ್ಲೀಗ್ ಸೆಂಟರ್‌ನಲ್ಲಿ ಮೊದಲ ಸ್ಥಾನ ಘಾನಕ್ಕಿದೆ. ಅನಂತರದ ಸ್ಥಾನ ಇಂಡೋನೇಶಿಯದ್ದಾಗಿದೆ. ಅನಂತರ ಭಾರತ, ಸೆರೆಲಿಯೋನ್, ಕೋಂಗೋಕಂಸಾಶ, ಕೋಂಗೋಬ್ರಾಝ್‌ವೆಲ್, ಬುರ್ಕಿನಾಫಾಸೋ, ಐವರಿಕೋಸ್ಟ್, ಮಾಲಿ. ಇದಲ್ಲದೆ ಹಲವು ಇತರ ದೇಶಗಳಿವೆ. ಆಸ್ಟ್ರೇಲಿಯಾ, ಬಾಂಗ್ಲದೇಶ, ಬ್ಲೀಝ್, ಕೆನಡ, ಗ್ಯಾಂಬಿಯಾ, ಗೊಯ್ಥಮಾಲ, ಗಿನಿಬಸಾವ್, ಮೆಸಡೋನಿಯ, ಮಲಾವಿ, ನಾರ್ವೆ, ಸೌತೋಮೆ, ಟೋಂಗ, ತುರ್ಕಿ. ಇಲ್ಲೆಲ್ಲ ಒಂದೊಂದು ಮಿಶನ್ ಹೌಸ್‌ಗಳ ವರ್ಧನೆ ಉಂಟಾಗಿವೆ.

ತನ್ಸಾನಿಯಾದ ಸೀಮಿಯೊ ರೀಜನಿನ ಮುಅಲ್ಲಿಮ್ ಸಾಹಿಬರು ಬರೆಯುತ್ತಾರೆ: ಕಳೆದ ವರ್ಷ ಸ್ಥಾಪನೆಯಾದ ಜಮಾಅತಿನಲ್ಲಿ ಈ ವರ್ಷ ಮಸೀದಿ ಮತ್ತು ಮಿಶನ್ ಹೌಸ್ ನಿರ್ಮಿಸಲಾಯಿತು. ಈ ಮನೆಯನ್ನು ಏಕೆ ನಿರ್ಮಿಸಲಾಗುತ್ತಿದೆ ಎಂದು ಈ ಸಂದರ್ಭದಲ್ಲಿ ಒಬ್ಬ ಕ್ರೈಸ್ತ ಪಾದರಿ ಕೇಳಿದರು. ಇದು ಜಮಾಅತಿನ ಮುಅಲ್ಲಿಮರ ನಿವಾಸಕ್ಕಾಗಿ ತಯಾರಿಸಲಾಗುತ್ತಿದೆ ಎಂದು ಅವರಿಗೆ ಹೇಳಿಕೊಡಲಾಯಿತು. ಆಗ ಅವರು ಹೇಳಿದರು: ಈ ಗ್ರಾಮದಲ್ಲಿ ಕ್ರೈಸ್ತರ ಆರು ಚರ್ಚುಗಳಿವೆ. ಹಲವು ಪಂಗಡದವರು ದೀರ್ಘಕಾಲದಿಂದ ಇಲ್ಲಿ ನೆಲೆಸಿರುವರು. ಆದರೆ ಯಾರಿಗೂ ತಮ್ಮ ಪಾದರಿಗಾಗಿ ಮನೆಯನ್ನು ಮಾಡಿಕೊಡಲು ಸಾಧ್ಯವಾಗಿಲ್ಲ. ನಿಶ್ಚಯವಾಗಿಯೂ ನೀವು ನಿಮ್ಮ ಧರ್ಮದ ಇಮಾಮರನ್ನು ಗೌರವ ಭಾವದಿಂದ ಕಾಣುತ್ತಿರುವಿರಿ. "ಎಲ್ಲರೊಡನೆ ಪ್ರೀತಿ

ಯಾರೊಂದಿಗೂ ದ್ವೇಷವಿಲ್ಲ" ಎಂಬ ನಿಮ್ಮ ಆದರ್ಶ ಸೂತ್ರವನ್ನು ನೀವು ಸಂಪೂರ್ಣವಾಗಿ ಪಾಲಿಸುತ್ತಿದ್ದೀರಿ. ಈ ಮಾದರಿಯನ್ನು ಇತರರು ಸಹ ಸ್ವೀಕರಿಸಬೇಕು ಎಂದು ಹೇಳಿದರು.

ಅಹ್ಮದಿಯಾ ಜಮಾಅತಿನ ಒಂದು ವೈಶಿಷ್ಟ್ಯ **ವಖಾರೆ ಅಮಲ್** ಆಗಿದೆ. ಈ ವರ್ಷ ಆಫ್ರಿಕದ ಹಲವು ದೇಶಗಳಲ್ಲಿ ಮಸೀದಿಗಳನ್ನು, ಮಿಶನ್ ಹೌಸುಗಳನ್ನು ನಿರ್ಮಿಸಲಾಯಿತು ಮತ್ತು ಇತರ ಕೆಲಸಗಳನ್ನು ಮಾಡಲಾಯಿತು. 148 ದೇಶಗಳಿಂದ ಲಭಿಸಿದ ರಿಪೋರ್ಟ್‌ಗಳ ಪ್ರಕಾರ 114 ದೇಶಗಳಲ್ಲಿ ಒಟ್ಟು ನಲ್ವತ್ತೊಂದು ಸಾವಿರದ ನೂರ ಹನ್ನೊಂದು ವಖಾರೆ ಅಮಲ್ ಮಾಡಲಾಯಿತು. ಹೀಗೆ 52 ಲಕ್ಷ 13 ಸಾವಿರ ಯು.ಎಸ್. ಡಾಲರ್‌ಗಳ ಉಳಿತಾಯವಾಯಿತು.ಈಗ ಆಫ್ರಿಕದಲ್ಲಿ ನಿರ್ಮಿಸಲಾಗುವ ಮಸೀದಿಗಳ ಖರ್ಚುಗಳನ್ನು ನೋಡುವುದಾದರೆ, ವಖಾರೆ ಅಮಲ್‌ಗಳಿಂದ ಉಳಿತಾಯವಾದ ಹಣದಿಂದ ಹೆಚ್ಚಿನ 10 ಮಸೀದಿಗಳನ್ನು ನಿರ್ಮಾಣಮಾಡುವ ಸೌಭಾಗ್ಯ ಅಲ್ಲಾಹನು ಜಮಾಅತಿಗೆ ನೀಡಿದನು. ಹೀಗೆ ಅಲ್ಲಾಹನು ನಮ್ಮ ಸಂಪತ್ತನ್ನು ಅನುಗ್ರಹಿಸುತ್ತಾನೆ.

ಕೇಂದ್ರ ಪ್ರತಿನಿಧಿಗಳ ಪರ್ಯಟನೆಗಳು ಹಲವು ದೇಶಗಳಲ್ಲಿ ನಡೆದಿದೆ. ಅದರ ಬಹಳ ದೀರ್ಘವಾದ ವಿವರಗಳಿವೆ. ಅದನ್ನು ನಾನು ಬಿಡುತ್ತೇನೆ. ಅಲ್ಲಾಹನ ಅನುಗ್ರಹದಿಂದ ಪರ್ಯಟನೆಗಳಿಂದ ಬಹಳ ಉತ್ತಮ ಪರಿಣಾಮ ಉಂಟಾಗಿವೆ.

ರಖೀಮ್ ಪ್ರೆಸ್ಸಿನ ಮೂಲಕವೂ ಕೆಲಸಗಳು ನಡೆಯುತ್ತಿವೆ. ರಖೀಮ್ ಪ್ರೆಸ್ಸ್ ಯು.ಕೆ.ಯ ಮೇಲ್ನೋಟದಲ್ಲಿ ಆಫ್ರಿಕದಲ್ಲಿ ಹಲವು ಪ್ರೆಸ್‌ಗಳನ್ನು ನಡೆಸಲಾಗುತ್ತಿವೆ. ಈ ವರ್ಷ ಫಾರನ್‌ಹಮ್ಮಿನ ನಮ್ಮ ರಖೀಮ್ ಪ್ರೆಸ್ಸಿನಲ್ಲಿ 3 ಲಕ್ಷ 60 ಸಾವಿರ ಇನ್ನೂರ ನಲ್ವತ್ತು ಪುಸ್ತಕಗಳನ್ನು ಮುದ್ರಿಸಲಾಯಿತು. ಇದಲ್ಲದೆ ನಿಯತಕಾಲಿವಾದ ಮವಾಝ್ಝಿನ ಮಝಾಹಿಬ್, ಅನ್ನುಸ್‌ರತ್ ಮ್ಯಾಗಝೀನ್, ವಖ್‌ಫೆ ನೌಯಿನ ಮ್ಯಾಗಝೀನಾದ ಮರ್‌ಯಮ್, ಇಸ್ಮಾಈಲ್, ಅಲ್ಲದೆ, ಪೇಂಫ್‌ಲೆಟ್, ಲೀಫ್ಲೆಟ್, ಜಮಾಅತಿನ ಆಫೀಸುಗಳ ಸ್ಟೇಶನರಿ ಸಾಮಾನುಗಳು ಇತ್ಯಾದಿ ಕೆಲಸಗಳು ಸಹ ನಡೆಯುತ್ತಿವೆ. ಖಾಇದ ಯಸ್ಸರ್‌ನಲ್ ಖುರ್‌ಆನಿನ ಮಾದರಿಯಲ್ಲಿ ಪವಿತ್ರ ಖುರ್‌ಆನ್ ಸಹ ಈ ವರ್ಷ ಪ್ರಕಟಿಸಲಾಯಿತು. ಆರೇಳು ವರ್ಷಗಳಿಂದ ಈ ಕೆಲಸ ನಡೆಯುತ್ತಿತ್ತು. ಈ ಕೆಲಸವನ್ನು ಖಾದಿಯಾನಿನ ಜಮಾಅತಿಗೆ ವಹಿಸಿಕೊಡಲಾಗಿತ್ತು. ಖತೆ ಮಂಝೂರ್ ಎಂಬ ಹೆಸರಿನ ನಮ್ಮದಾದ ಒಂದು ಫಾಂಟ್ ಮಾಡುವ ಉದ್ದೇಶದಿಂದ ಹೀಗೆ ಮಾಡಲಾಗಿತ್ತು. ನಝ್ಝಾರತ್ ಇಶಾಅತ್ ಖಾದಿಯಾನ್ ಈ ನಿಟ್ಟಿನಲ್ಲಿ ತುಂಬ ಕೆಲಸಮಾಡಿದೆ. ಅಲ್‌ಹಮ್ದುಲಿಲ್ಲಾಹ್. ಬಹಳ ಸುಂದರ ಮತ್ತು ಆಕರ್ಷಕ ಅಕ್ಷರ ವಿನ್ಯಾಸದೊಂದಿಗೆ ಈ ಖುರ್‌ಆನನ್ನು ಪ್ರಕಟಿಸಲಾಗಿದೆ. ವರ್ಣರಂಜಿತ ಬೋರ್ಡರ್ ಮತ್ತು ಸುಂದರವಾದ ಬೈಂಡಿಂಗ್ ಇದಕ್ಕಿದೆ. ಇಲ್ಲಿ ಯು.ಕೆ.ಗೆ ಬಂದ ಪವಿತ್ರ ಖುರ್‌ಆನ್ ಪ್ರತಿಗಳು ಬಹಳ ವೇಗದಲ್ಲಿ ಮಾರಾಟವಾಗುತಿವೆ. ಬೇಗನೇ ಎರಡನೇ ಎಡಿಶನ್ ಪ್ರಕಟಿಸಬೇಕಾಗಿ ಬರಬಹುದೆಂಬ ನಿರೀಕ್ಷೆಯಿದೆ. ಇದರ ಬೈಂಡಿಂಗ್, ಪುಟಗಳು ಮತ್ತು ಒಳಗಿನ ಅಕ್ಷರಗಳು ಇತ್ಯಾದಿ ತುಂಬ ಆಕರ್ಷಕವಾಗಿವೆ. ಯಸ್ಸರ್‌ನಲ್ ಖುರ್‌ಆನಿನ ಫೋಂಟಿನಲ್ಲಿ ಈ ಪವಿತ್ರ ಖುರ್‌ಆನನ್ನು ತಯಾರಿಸಲಾಗಿದೆ. ಈ ಫೋಂಟನ್ನು ಖತೆ ಮಂಜೂರ್ ಎಂದು ಹೆಸರಿಸಲಾಗಿದೆ. ಇದು ಅಹ್ಮದಿಯಾ ಜಮಾಅತಿನ ವಿಶೇಷವಾದ ಅಕ್ಷರ ಶೈಲಿಯಾಗಿದೆ. ಇತರ ಜಾಗದಲ್ಲಿ ಇದು ಲಭ್ಯವಲ್ಲ. ಓದಲು ಕೂಡ ಇದು ಸುಲಭ. ಭಾರತದ ನಝ್ಝಾರತ್ ಇಶಾಅತ್ ಖಾದಿಯಾನ್ ಬಹಳ ಪರಿಶ್ರಮದಿಂದ ಕೆಲಸಮಾಡಿದೆ. ಅದೇ ರೀತಿಯಲ್ಲಿ ಇಲ್ಲಿಯ ರಖೀಮ್ ಪ್ರೆಸ್ಸಿನ ಸಹಾಯಕ್ಕಾಗಿ ತುರ್ಕಿಯ ಅಹ್ಮದಿ ಸಹೋದರನಾದ ಮುಹಮ್ಮದ್ ಸಾಹಿಬರು ಸಹ ಪ್ರಕಟಣೆಯ ಕೆಲಸದಲ್ಲಿ ತುಂಬ ಶ್ರಮಿಸಿರುವರು. ಇನ್ನು ಮುಂದೆ ಪವಿತ್ರ ಖುರ್‌ಆನಿನ ತರ್ಜುಮೆ ಸಹ ಈ ಫೋಂಟಿನಲ್ಲಿ ಮುದ್ರಿಸಲಾಗುವುದು. ಇದೇ ಖತೆ ಮಂಜೂರ್ ಅಕ್ಷರ ಶೈಲಿಯಲ್ಲಿ ಹಝ್ರತ್ ಶೇರ್ ಅಲಿ ಸಾಹಿಬರ ಪವಿತ್ರ ಖುರ್‌ಆನ್ ತರ್ಜುಮೆ ತಯಾರಿಸಲಾಗುತ್ತಿದೆ. ಬೇಗನೇ ಮುದ್ರಣಕ್ಕಾಗಿ ನೀಡಲಾಗುವುದು ಇನ್‌ಶಾ ಅಲ್ಲಾಹ್. ಅದೇ ರೀತಿಯಲ್ಲಿ ಮೀರ್ ಇಸ್‌ಹಾಕ್ ಸಾಹಿಬರ ಪದಾನುಪದ ತರ್ಜುಮೆಗಾಗಿಯೂ ಈ ಶೈಲಿಯನ್ನೇ ಉಪಯೋಗಿಸಲಾಗುವುದು. ಅದರ ತಯಾರಿ ಸಹ ನಡೆಯುತ್ತಿದೆ. ಪವಿತ್ರ ಖುರ್‌ಆನಿನ ಪ್ರಕಟನೆಯಲ್ಲೂ ಓದುವುದರಲ್ಲೂ ಇರಿಸುವುದರಲ್ಲೂ ಎಷ್ಟೆಲ್ಲ ಅಡಚಣೆಗಳನ್ನು ನಮ್ಮ ವಾರ್ಗದಲ್ಲಿ ಪಾಕಿಸ್ತಾನದಲ್ಲಿ ಉಂಟುಮಾಡಲಾಗುತ್ತದೋ ಅಷ್ಟೇ ಹೆಚ್ಚು ಮತ್ತು ಉತ್ತಮ ಮಾರ್ಗಗಳನ್ನು ಅಲ್ಲಾಹನು ನಮಗಾಗಿ ತೆರೆಯುತ್ತಾ ಹೋಗುತ್ತಿದ್ದಾನೆ.

ಈಗ ಯು.ಕೆ.ಯ ರಖೀಮ್ ಪ್ರೆಸ್ಸಿನ ಮೇಲ್ನೋಟದಲ್ಲಿ ಆಫ್ರಿಕದ ಎಂಟು ದೇಶಗಳಾದ ಘಾನ, ನೈಜೀರಿಯಾ, ತನ್ಸಾನಿಯ, ಸಿರಲಿಯೋನ್, ಐವರಿಕೋಸ್ಟ್, ಗ್ಯಾಂಬಿಯ, ಬುರ್ಕಿನಾಫಾಸೋ, ಹಾಗು ಬೆನಿನಿನಲ್ಲಿ ಪ್ರೆಸ್‌ಗಳು ಕ್ರಿಯಾಶೀಲವಾಗಿವೆ. ಬೇಕಾದ ಮಿಶನ್‌ಗಳನ್ನು ಒದಗಿಸಿಕೊಡಲಾಗಿದೆ. ಅವರು ಇಲ್ಲಿ ಮುದ್ರಿಸಿದ ಪುಸ್ತಕಗಳ ಒಟ್ಟು ಸಂಖ್ಯೆ 6 ಲಕ್ಷ ಹನ್ನೆರಡು ಸಾವಿರಕ್ಕಿಂತ ಮೇಲ್ಪಟ್ಟು ಇವೆ. ಅದಲ್ಲದೆ, ನಿಯತಕಾಲಿಕಗಳು, ಪತ್ರಿಕೆಗಳು, ತಬ್ಲೀಗಿಗೆ ಆವಶ್ಯವಾದ ಸಾಹಿತ್ಯಗಳು, ಲೀಫ್‌ಲೆಟ್‌ಗಳು ಬೇರೆ ಇವೆ. ಅದರ ಒಟ್ಟು ಸಂಖ್ಯೆ 94 ಲಕ್ಷ 85 ಸಾವಿರ ಆಗಿವೆ. ಈ ವೇಳೆ ಗಾಂಬಿಯದಲ್ಲಿ ಪ್ರೈವೆಟ್ ಕೆಲಸವಲ್ಲದೆ, ಗ್ಯಾಂಬಿಯಾದ ಆರೋಗ್ಯ ವಿಭಾಗಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ಕೋವಿಡ್ ಮುನ್ನೆಚ್ಚರಿಕೆಗಾಗಿ ಕೆಲವು ಮುಂಜಾಗ್ರತಾ ಕ್ರಮಗಳನ್ನು ಒಳಗೊಂಡಿರುವ ಪಂಫ್‌ಲೆಟ್ಸ್, ಪೋಸ್ಟರ್ ಇತ್ಯಾದಿಗಳನ್ನು ಮುದ್ರಿಸಲು ಗವರ್ನಮೆಂಟ್ ನೀಡಿದೆ. ಬಾಕಿ ಪ್ರೆಸ್‌ಗಳು ಮುಚ್ಚಲ್ಪಟ್ಟಿರುವ ಕಾರಣ ಸರ್ಕಾರ ನಮ್ಮನ್ನು ಸಂಪರ್ಕಿಸಿ ಇವುಗಳನ್ನು ಮುದ್ರಿಸಲು ಹೇಳಿತು. ಹೀಗೆ ಅವರ ಸಹಾಯಮಾಡಲಾಯಿತು.

ವಕಾಲತ್ ಇಶಾಅತಿನ ಪ್ರಕಾಶನದ ಕೆಲಸಗಳ ಬಗ್ಗೆ 93 ದೇಶಗಳಿಂದ ಲಭಿಸಿದ ರಿಪೋರ್ಟ್‌ಗಳ ಪ್ರಕಾರ 407 ವಿವಿಧ ಪಂಫ್‌ಲಟ್ಸ್, ಫೋಲ್ಡರ್ಸ್ ಇತ್ಯಾದಿಗಳನ್ನು 42 ಭಾಷೆಗಳಲ್ಲಿ 42 ಲಕ್ಷ 56 ಸಾವಿರ 659ರ ಸಂಖ್ಯೆಯಲ್ಲಿ ಮುದ್ರಿಸಲಾಗಿದೆ. ಹಲವು ದೇಶಗಳಿವೆ. ಇದರ ಉದ್ದದ ಲಿಸ್ಟ್ ಇದೆ.

**ಹಲವು ದೇಶಗಳಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಜಮಾಅತಿನ ಮ್ಯಾಗಜಿನ್‌ಗಳ ಪ್ರಕಾಶನ:**

ಈಗ ಲೋಕದೆಲ್ಲಡೆ 29 ಭಾಷೆಗಳಲ್ಲಿ 94 ತಅ್‌ಲೀಮ್, ತರ್‌ಬಿಯತ್ ಮತ್ತು ಜ್ಞಾನಪರವಾದ ಲೇಖನಗಳನ್ನೊಳಗೊಂಡ ಪತ್ರಿಕೆ, ನಿಯತಕಾಲಿಕಗಳು ಪ್ರಕಟವಾಗುತ್ತಿವೆ.

**ವಕಾಲತ್ ಇಶಾಅತಿನ ರಿಪೋರ್ಟ್:**

ವಕಾಲತ್ ಇಶಾಅತಿಗೆ ರವಾನೆಯ ಒಂದು ಪ್ರತ್ಯೇಕ ವಿಭಾಗವಿದೆ. ಇಲ್ಲಿಂದ 24 ಭಾಷೆಗಳ ಒಂದು ಲಕ್ಷ ತೊಂಬತ್ತು ಸಾವಿರಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಲೋಕದ ಹಲವು ದೇಶಗಳಿಗೆ ಕಳುಹಿಸಲಾಯಿತು. ಇವಲ್ಲದೆ ಹಲವು ದೇಶಗಳಲ್ಲಿ 709 ವಿವಿಧ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು, ಫೋಲ್ಡರ್‌ಗಳನ್ನು ಮತ್ತು ಪಂಪ್ಲೇಟ್‌ಗಳನ್ನು 63 ಲಕ್ಷ 87 ಸಾವಿರದಷ್ಟು ಸಂಖ್ಯೆಯಲ್ಲಿ ಉಚಿತವಾಗಿ ವಿತರಿಸಲಾಯಿತು. ಇವುಗಳ ಮೂಲಕ ಲೋಕದೆಲ್ಲಡೆ ಲಕ್ಷಾಂತರ ಜನರಿಗೆ ಸಂದೇಶ ತಲುಪಿತು.

ವಕಾಲತ್ ತಸ್ನೀಫ್ ಯು.ಕೆ.ಯಲ್ಲಿ ಪವಿತ್ರ ಖುರ್‌ಆನಿನ ಇಟಾಲಿಯನ್ ತರ್ಜುಮೆಯ ಪುನರ್‌ಪರಿಶೀಲನೆಯ ಕೆಲಸ ಪೂರ್ತಿಯಾಗಿದೆ. ಇದರ ಫೈಲ್ ಸಹ ಮುದ್ರಣಕ್ಕಾಗಿ ಕಳುಹಿಸಲಾಗಿದೆ. ಈ ವರ್ಷ ಸಹೀಹ್ ಬುಖಾರಿಯ ತರ್ಜುಮೆ ಮತ್ತು ವ್ಯಾಖ್ಯಾನದ ಹನ್ನೊಂದು ಭಾಗಗಳು ಯು.ಕೆ.ಯಿಂದ ತಯಾರುಮಾಡಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥವಾದ ಇಅ್‌ಜಾಝೀ ಅಹ್ಮದಿಯ ಇಂಗ್ಲಿಷ್ ಅನುವಾದ ಈ ವರ್ಷ ಪ್ರಕಟಿಸಲಾಗಿದೆ. ಇತ್ಮಾಮೆ ಹುಜ್ಜತ್ ಮತ್ತು ಜಂಗೆ ಮುಖದ್ದಸಿನ ಇಂಗ್ಲಿಷ್ ಭಾಷಾಂತರದ ಕೆಲಸ ಪೂರ್ತಿಯಾಗಿದೆ. ಈ ಪುಸ್ತಕಗಳು ಸಹ ಮುದ್ರಣಕ್ಕಾಗಿ ಬೇಗನೆ ಕಳುಹಿಸಲಾಗುವುವು ಇನ್‌ಶಾ ಅಲ್ಲಾಹ್. ರೂಹಾನಿ ಖಝಾಇನಿನ ಹತ್ತನೇ ಸಂಪುಟದ ಹೊರತು ಬಾಕಿ 22 ಸಂಪುಟಗಳು ಯು.ಕೆ.ಯಿಂದ ಮುದ್ರಿಸಲಾಗುತ್ತಿದೆ. ಹತ್ತನೇ ಸಂಪುಟದ ಕೆಲಸವು ಶುರುವಾಗುವುದು ಇನ್‌ಶಾ ಅಲ್ಲಾಹ್. ಹೀಗೆ ಒಟ್ಟು 23 ಸಂಪುಟಗಳೂ ಬೇಗನೇ ಬರಬಹುದೆಂದು ಪ್ರತೀಕ್ಷೆಯಿದೆ. 36 ದೇಶಗಳಿಂದ 8 ಡೆಸ್ಕಿನಿಂದ ಲಭಿಸಿದ ರಿಪೋರ್ಟ್ ಪ್ರಕಾರ 2019 ಮತ್ತು 2020ರಲ್ಲಿ 33 ಭಾಷೆಯಲ್ಲಿ 154 ಪುಸ್ತಕಗಳು ಮತ್ತು ಫೋಲ್ಡರ್‌ಗಳನ್ನು ತಯಾರು ಮಾಡಲಾಗಿದೆ. ಅದರಲ್ಲಿ ಇಂಗ್ಲಿಷ್, ಸ್ಪೇನಿಷ್, ಲಾಟಿನ್, ಲೋಗಂಡ, ಫಾರ್ಸಿ, ಜರ್ಮನ್, ಬ್ರೆಮಿಸ್, ಫ್ರಂಚ್, ಹೌಸಾ, ಅರಬಿ, ಸ್ವಾಹಿಲಿ, ಇಂಡೋನೇಶ್ಯನ್, ಉರ್ದು, ಚೈನೀಸ್, ಬ್ರೋಂಡಿ, ಮಂಡೇಕ, ಮೆಸಿಡೋನಿಯನ್, ಟೋಂಗ, ಪರ್ತಗೇಝಿ, ಹಿಬ್ರೂ, ಡಚ್, ಕೊರೇಶಿಯನ್, ರಿಫೋಲ, ಬಂಬಲೋಝಿ, ಅಲ್ಬಾನಿಯನ್, ರಶ್ಯನ್, ಬಂಗ್ಲ, ಯೂರೋಬ, ವೋಲ್ಫ್, ನಯಾಂಜಾಥಾಯಿ, ನೋರ್ವೇಜಿಯನ್ ಇತ್ಯಾದಿಗಳು ಸೇರಿವೆ.

ಯುಕ್ರೇನಿನ ಒಬ್ಬ ಸಹೋದರರಾದ ಸರ್‌ಗಯಿ ದಮೇತ್‌ರೋ ಸಾಹಿಬರು ಅಹ್ಮದಿಯಾಗಿರದ ಸಮಯದಲ್ಲಿ ಕಳೆದ ವರ್ಷ ಜಲ್ಸಗೆ ಬಂದಿದ್ದರು. ಜಲ್ಸಗೆ ಬಂದಾಗ ಜಾಗತಿಕ ಬೈಅತಿನಲ್ಲಿ ಭಾಗವಹಿಸಿ ಬೈಅತ್ ಮಾಡಿದರು. ಬಹಳ ಉತ್ತಮ ವಿಶ್ಲೇಷಕರೂ, ಧಾರ್ಮಿಕ ಜ್ಞಾನದಲ್ಲಿ ಪರಿಣತರೂ ಆಗಿರುವರು. ಅವರು ಇಲ್ಲಿಗೆ ಬಂದಾಗ ನನ್ನನ್ನು ಸಹ ಭೇಟಿಯಾಗಿದ್ದರು. ನಾನು ಅವರೊಡನೆ ಹೇಳಿದ್ದೆ: ನೀವು ವಿದ್ಯಾವಂತರು, ಇಸ್ಲಾಮ್ ಧರ್ಮ ತತ್ವಜ್ಞಾನ ಓದಿ ತಮ್ಮ ಅಭಿಪ್ರಾಯವನ್ನು ಬರೆಯಿರಿ ಎಂದು ಹೇಳಿದ್ದೆ. ಮರಳಿಬಂದು ಹೇಳುತ್ತಾರೆ: ನಾನು ಈ ಗ್ರಂಥವನ್ನು ಒಂದೇ ಸಾರಿಗೆ ಓದಿ ಮುಗಿಸಿದೆ. ಈ ಗ್ರಂಥವನ್ನು ಓದಿದ ನಂತರ ನನಗೆ ತಿಳಿದು ಬಂದದ್ದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೇವಲ ಧಾರ್ಮಿಕ ನಾಯಕರಾಗಿರಲಿಲ್ಲ. ಬದಲಾಗಿ

ಧಾರ್ಮಿಕ ಜ್ಞಾನದ ಬಹಳ ಪರಿಣಿತ ಶೋಧಕರಾಗಿದ್ದರು.ನಾನು ನನ್ನ ಜೀವನದಲ್ಲಿ ಹಲವು ಪುಸ್ತಕಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ಬರೆದಿರುವೆನು. ಆದರೆ ಆ ಪುಸ್ತಕಗಳಿಂದ ಯಾವುದಾದರೂ ಹೊಸ ಸಂಗತಿ ಲಭಿಸಿದ್ದಾಗಿ ನನಗೆ ಅನುಭವವಾಗಿಲ್ಲ. ಆದರೆ ಇಸ್ಲಾಮೀ ಉಸೂಲ್ ಕಿ ಫಿಲೋಸಫಿ ಓದಿದ್ದರಿಂದ ನನ್ನ ಅರಿವಿನಲ್ಲಿ ತುಂಬ ವರ್ಧನೆಯುಂಟಾಗಿದೆ. ಈ ಪುಸ್ತಕದ ಬಗ್ಗೆ ವಿಶ್ಲೇಷಣೆಯನ್ನು ಕೇವಲ ಬುದ್ಧಿಯ ತಕ್ಕಡಿಯಲ್ಲಿ ಇಟ್ಟುಕೊಂಡು ಮಾಡುತ್ತಿಲ್ಲ. ಬದಲಾಗಿ ಹೃದಯ ಮತ್ತು ಆತ್ಮದ ಕನ್ನಡಿಯಿಂದ ದಾಟುತ್ತಾ ಬರೆಯುತ್ತಿದ್ದೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಸ್ಲಾಮಿನ ಪುನರುಜ್ಜೀವನ ಹಾಗೂ ಇಸ್ಲಾಮ್ ಮತ್ತು ಮುಸ್ಲಿಮ್ ಸಮುದಾಯದ ಸುಧಾರಣೆಗಾಗಿ ವಿಶೇಷವಾದ ಒತ್ತುನೀಡಿದ್ದರು. ಯಾವುದೇ ಧರ್ಮದ ಪುನುಜ್ಜೀವನ ಮಾಡುವುದು ಬಹಳ ಮುಖ್ಯವಾದ ವಿಷಯವಾಗಿದೆ. ಈ ಸಂಬಂಧವಾಗಿ ನಾವು ಮಧ್ಯಕಾಲಘಟ್ಟದ ಕಡೆಗೆ ಕಣ್ಣು ಹಾಯಿಸುವುದಾದರೆ, ತಿಳಿದುಬರುವುದೇನೆಂದರೆ, ಯೂರೋಪಿನಲ್ಲಿ ಸುಧಾರಣೆಯ ಕೆಲಸ ಶುರುವಾಗುವುದಕ್ಕೆ ಮುಂಚಿತವಾಗಿ ಕ್ರೈಸ್ತರಲ್ಲಿ ನಂಬಿಕೆ ಮತ್ತು ದೃಢವಿಶ್ವಾಸದ ವಿಷಯದಲ್ಲಿ ಬಹಳ ದೊಡ್ಡ ವಿಷಮಾವಸ್ಥೆ ಉಂಟಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರುವುದಕ್ಕೆ ಮುಂಚೆ ಇಸ್ಲಾಮಿನ ಸ್ಥಿತಿಯೂ ಇದೇ ರೀತಿಯಲ್ಲಿತ್ತು. ಅವರು ಬರೆಯುತ್ತಾರೆ: ಈ ಗ್ರಂಥದಲ್ಲಿ ಸಹಜ ಸ್ಥಿತಿ ಮತ್ತು ನೈತಿಕಾವಸ್ಥೆಯ ತಾತ್ಪರ್ಯದ ಬಗ್ಗೆ ವಿವರಿಸುವ ಭಾಗ ನನಗೆ ವಿಶೇಷವಾಗಿ ಇಷ್ಟವಾಯಿತು. ನಾವು ನಮ್ಮ ಹುಟ್ಟಿನ ತತ್ವ, ಯಥಾರ್ಥ ಉದ್ದೇಶ ಮತ್ತು ಅಲ್ಲಾಹನ ಸೃಷ್ಟಿಯ ಪ್ರಾಮುಖ್ಯವನ್ನು ತಿಳಿಯುವುದು ಮುಖ್ಯ. ಅದಕ್ಕೆ ಬೆಲೆನೀಡಬೇಕು. ಅದೇ ರೀತಿಯಲ್ಲಿ ನಮ್ಮ ಸ್ವಭಾವಗುಣಗಳು ಮತ್ತು ಅವುಗಳ ಬೇರುಗಳನ್ನು ಅರಿಯಲು ಪ್ರಯತ್ನಿಸಬೇಕು. ಈ ಕಾಲದಲ್ಲಿ ಮನುಷ್ಯನನ್ನು ಸತ್ಯದ ಮಾರ್ಗದಿಂದ ದೂರಮಾಡುವ ಮಾಧ್ಯಮಗಳು ಬಹಳ ಹೆಚ್ಚಾಗಿವೆ ಎಂಬುವುದನ್ನು ನಾವು ಮರೆತುಬಿಡುತ್ತಿದ್ದೇವೆ. ಆದ್ದರಿಂದ ಅಲ್ಲಾಹನ ಸೃಷ್ಟಿಗೆ ಬೆಲೆಕೊಡುವುದು ಅವುಗಳನ್ನು ಗೌರವಿಸುವುದು ಆವಶ್ಯಕ. ಅವರು ಹೇಳುತ್ತಾರೆ: ನಾನು ಪುಸ್ತಕ ಓದುತ್ತಿದ್ದಾಗ ನನಗೆ ಖಲೀಫತುಲ್ ಮಸೀಹರ ಭಾಷಣದ ಕೊನೆಯ ವಾಕ್ಯಗಳು ನೆನಪಿಗೆ ಬಂತು. ಅದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಸ್ಲಾಮಿನ ಬಗ್ಗೆ ಇದ್ದ ತಪ್ಪಾದ ಭಾವನೆ ಮತ್ತು ಕಲ್ಪನೆಯನ್ನು ದೂರಮಾಡಿದರು ಹಾಗು ಜಮಾಅತಿನ ಸುಧಾರಣೆ ಬಗ್ಗೆ ಗಮನಹರಿಸಿದ್ದರು. ಅವರು ಹೇಳುತ್ತಾರೆ: ನಮ್ಮಲ್ಲಿ ಪ್ರತಿಯೊಬ್ಬರು ತಮ್ಮ ಕುಟುಂಬದ, ತಮ್ಮ ಪರಿಸರದ, ತಮ್ಮ ದೇಶದ ಸುಧಾರಣೆ ಮಾಡಿದರೆ, ಅದರ ಪರಿಣಾಮವಾಗಿ ಲೋಕದ ಸುಧಾರಣೆ ಮಾಡಲು ನಾವು ಯೋಗ್ಯರಾಗುವೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಶಾರೀರಿಕ ಸ್ಥಿತಿ ಮತ್ತು ನೈತಿಕ ಸ್ಥಿತಿಯನ್ನು ವ್ಯಾಖ್ಯಾನಿಸಿ ಧಾರ್ಮಿಕ ಜ್ಞಾನದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆದಿರುವರು. ನನ್ನ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮೊಟ್ಟಮೊದಲಿಗೆ ಈ ಪಾರಿಭಾಷಿಕ ಪದಗಳನ್ನು ಪ್ರಯೋಗಿಸಿರುವರು. ಅವುಗಳನ್ನು ಬಹಳ ಉನ್ನತ ಮತ್ತು ಪರಿಶುದ್ಧ ರೀತಿಯಲ್ಲಿ ವಿವರಿಸಿರುವರು. ಧಾರ್ಮಿಕ ಮತ್ತು ತತ್ವಜ್ಞಾನದ ಪರಿಣಿತ ಎಂಬ ನೆಲೆಯಲ್ಲಿ ನನಗೆ ಈ ಪುಸ್ತಕ ಓದುವುದರಿಂದ ತುಂಬ ಆನಂದವಾಯಿತು. ಆದ್ದರಿಂದ ಈ ಪುಸ್ತಕವನ್ನು ಅಹ್ಮದಿಯಾ ಜಮಾಅತ್ ಗರಿಷ್ಠ ಸಂಖ್ಯೆಯಲ್ಲಿ ಪ್ರಕಟಿಸಬೇಕು ಮತ್ತು ವಿವಿಧ ಭಾಷೆಗಳಲ್ಲಿ ಇದನ್ನು ತರ್ಜುಮೆ ಸಹ ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಇದರಿಂದ ಜನರು ಈ ಪುಸ್ತಕವನ್ನು ಓದುವುದರಿಂದ ಹೆಚ್ಚು ಹೆಚ್ಚಾಗಿ ಧರ್ಮ, ವಿಶ್ವಾಸ ಮತ್ತು ಯಥಾರ್ಥವಾದ ಸತ್ಯದ ಬಗ್ಗೆ ತಿಳಿಯುವಂತಾಗುವರು.

ನೇಪಾಲಿನ ಒಬ್ಬ ಪ್ರೊಫೆಸರಿಗೆ ನನ್ನ ಹಲವು ಭಾಷಣಗಳನ್ನು ಒಳಗೊಂಡ ಪುಸ್ತಕವಾದ ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಮಾರ್ಗ ಎಂಬ ಪುಸ್ತಕವನ್ನು ಓದಲು ಕೊಡಲಾಗಿತ್ತು. ಅವರು ಹೇಳುತ್ತಾರೆ: ಈ ಪುಸ್ತಕ ಈಗಿನ ಸ್ಥಿತಿಯಲ್ಲಿ ಬಹಳ ಉತ್ತಮವಾದುವುದಾಗಿದೆ. ಆ ಪುಸ್ತಕದ ಹಲವು ಪಾರಾಗ್ರಾಫ್ ಮತ್ತು ಲೈನುಗಳಿಗೆ ಗುರುತು ಮತ್ತು ಅಡಿಗೆರೆ ಹಾಕಿದ್ದರು. ಅವರು ಹೇಳುತ್ತಾರೆ: ನಾನು ಈ ಉಲ್ಲೇಖವನ್ನು ಹೈಲೈಟ್ ಮಾಡಲು ಇಚ್ಛಿಸಿದ್ದೆ. ಏಕೆಂದರೆ ಈ ಸಂಗತಿಗಳನ್ನು ಲೋಕದಲ್ಲಿ ಹರಡುವ ಬಹಳ ಅಗತ್ಯವಿದೆ. ಲೋಕಕ್ಕೆ ಸುವರ್ಣ ತತ್ವಗಳನ್ನು ಇದರಲ್ಲಿ ಹೇಳಲಾಗಿದೆ. ಅವರಿಗೆ ಈ ಪುಸ್ತಕ ತುಂಬ ಇಷ್ಟವಾಯಿತು ಮತ್ತು ತಮ್ಮ ಸ್ನೇಹಿತರಿಗೆ ಈ ಪುಸ್ತಕವನ್ನು ಓದಲು ಕೊಡುವೆನು ಎಂದು ಅವರು ಹೇಳಿದರು.

ನೇಪಾಳಿನ ಮತ್ತೊಬ್ಬ ಪ್ರೊಫೆಸರರಾದ ಡಾಕ್ಟರ್ ಗೋಂಡ ಹೇಳುತ್ತಾರೆ: ನಾನು ಈ ಪುಸ್ತಕವನ್ನು ಓದಿದ್ದೇನೆ. ಇಂದು ಲೋಕವೆಲ್ಲ ಮೀಡಿಯಾದ ಕಾರಣದಿಂದ ಮುಸ್ಲಿಮರ ಕುರಿತು ತಪ್ಪಾದ ರೀತಿಯಲ್ಲಿ ತೋರಿಸುವಾಗ ಒಬ್ಬ ಮುಸ್ಲಿಮ್ ನಾಯಕ ಲೋಕದಲ್ಲೆಲ್ಲ ಶಾಂತಿ ಸ್ಥಾಪನೆಗಾಗಿ ಪ್ರಯತ್ನಿಸುವುದು ಮುಸ್ಲಿಮೇತರರಿಗೆ ಅಚ್ಚರಿ ಹುಟ್ಟಿಸುವ ಸಂಗತಿಯಾಗಿದೆ. ಲೋಕದಲ್ಲಿ ಮುಸ್ಲಿಮರ 73 ಪಂಗಡಗಳಿವೆ. ಇಸ್ರಾಈಲರೊಡನೆ ಅವರಿಗೆ ಧಾರ್ಮಿಕ ಮತ್ತು ರಾಜಕೀಯ ವಿರೋಧವು ಇದೆ. ಈ ಸ್ಥಿತಿಯಲ್ಲಿ ಒಬ್ಬ ಮುಸ್ಲಿಮ್ ನೇತಾರರ ಕಡೆಯಿಂದ ಶಾಂತಿ ಸ್ಥಾಪನೆಗಾಗಿ ಇಸ್ರಾಈಲಿನ ಪ್ರಧಾನಮಂತ್ರಿಗೆ ಪತ್ರ ಬರೆಯುವುದು ಬಹಳ ಧೈರ್ಯದ ಸಂಗತಿಯಾಗಿದೆ. ಅದೇ ರೀತಿಯಲ್ಲಿ ಅಹ್ಮದಿಯಾ ಜಮಾಅತಿನ ಖಲೀಫರು ಇರಾನಿನ ಪ್ರಧಾನಮಂತ್ರಿಗೂ ಪತ್ರವನ್ನು ಬರೆದಿರುವರು. ಅದರಿಂದ ನಾನು ತುಂಬ ಪ್ರಭಾವಿತಗೊಂಡಿರುವೆನು. ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಮಾರ್ಗವೆಂಬ ಈ ಪುಸ್ತಕವನ್ನು ಮುಸ್ಲಿಮೇತರರು ಓದುವುದಾದರೆ ಅದು ಇಸ್ಲಾಮಿನ ಶಾಂತಿದಾಯಕ ಸಂದೇಶವನ್ನು ಅರಿಯಲು ಮತ್ತು ತಿಳಿಯಲು ಸಹಾಯಕವಾಗುವುದು. ಅಹ್ಮದಿಯಾ ಜಮಾಅತ್ ಇತರ ಮುಸ್ಲಿಮ್ ಪಂಗಡಕ್ಕೆ ಹೋಲಿಸಿದರೆ, ಶಾಂತಿಗೆ ಸಂಬಂಧಿಸಿ ಲೋಕದಲ್ಲಿ ತನ್ನ ಮಾತನ್ನು ಮುಂದಿರಿಸುತ್ತದೆ. ಅಹ್ಮದಿಯಾ ಜಮಾಅತಿನ ಹೇಳಿಕೆ ಪ್ರಕಾರ ಪವಿತ್ರ ಖುರ್‌ಆನಿನ ಪಾಠಗಳನ್ನು ಪಾಲಿಸುವುದರಿಂದಲೇ ಲೋಕದಲ್ಲಿ ಶಾಂತಿ ನೆಲೆಗೊಳ್ಳುವುದು. ನಿಶ್ಚಯವಾಗಿಯೂ ಈ ಮಾತುಗಳನ್ನು ನಿರಾಕರಿಸಲು ಸಾಧ್ಯವಲ್ಲ.

ನೇಪಾಳಿನ ಒಂದು ಬುಕ್‌ಸ್ಟಾಲಿಗೆ ಒಬ್ಬ ಸಹೋದರ ಬಂದಿದ್ದರು. ಇಸ್ಲಾಮಿನಲ್ಲಿ ಯುದ್ಧಮಾಡಲು ಅನುಮತಿ ಏಕೆ ಮತ್ತು ಯಾವಾಗ ಕೊಡಲಾಗಿತ್ತು ಎಂಬ ಪ್ರಶ್ನೆಗೆ ಉತ್ತರವನ್ನು ನಮ್ಮ ಒಂದು ಪುಸ್ತಕದಲ್ಲಿ ನೋಡಿ ಅವರು ಹೇಳುತ್ತಾರೆ: ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಬಹಳ ಕಾಲದಿಂದ ಇದಕ್ಕೆ ಉತ್ತರವನ್ನು ಹುಡುಕುತ್ತಿದ್ದೆ, ಇಂದು ನನಗೆ ಅದರ ಉತ್ತರ ಲಭಿಸಿದೆ.

ಭಾರತದ ಝಾರ್‌ಕಂಡಿನ ಒಂದು ಬುಕ್‌ಫೇರಿಗೆ ಒಬ್ಬ ವ್ಯಕ್ತಿ ಬಂದಿದ್ದರು: ಬಹಳ ಅಧಿಕ ಪೂರ್ವಗ್ರಹ ಪೀಡಿತರಾಗಿ ಇಸ್ಲಾಮಿನ ಬಗ್ಗೆ ಅಭಿಪ್ರಾಯಹೊಂದಿದ್ದರು. ಬಂದ ಕೂಡಲೆ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ವಿವಿಧ ರೀತಿಯ ಆರೋಪಗಳನ್ನು ಹೊರಿಸಲು ಶುರುಮಾಡಿದರು. ಅವರು ಇಸ್ಲಾಮಿನ ವಿರುದ್ಧ ಬರೆಯಲಾದ ಹಲವು ಪುಸ್ತಕಗಳನ್ನು ಓದಿದ್ದ ಕಾರಣ ಹೀಗೆ ಆಕ್ಷೇಪಮಾಡುತ್ತಿದ್ದರು. ಅವರಿಗೆ ಇಸ್ಲಾಮಿನ ನೈಜ ಪಾಠವನ್ನು ಹೇಳಿಕೊಟ್ಟಾಗ ಬಹಳ ಪ್ರಭಾವಿತರಾದರು. ನನಗೆ ಇಂದಿನ ವರೆಗೆ ಸರಿಯಾದ ಇಸ್ಲಾಮಿನ ಬಗ್ಗೆ ತಿಳುವಳಿಕೆ ಇರಲಿಲ್ಲ, ಈಗ ನಾನು ನಿಮ್ಮ ಸಾಹಿತ್ಯಗಳನ್ನು ಓದುವೆನು ಎಂದು ಅವರು ಹೇಳಿದರು. ಹೀಗೆ ಅವರಿಗೆ ಪುಸ್ತಕಗಳನ್ನು ಕೊಡಲಾಯಿತು. ವಿಶೇಷವಾಗಿ ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಮಾರ್ಗ ಎಂಬ ಪುಸ್ತಕ ಕೊಡಲಾಗಿತ್ತು. ಈ ಸಹೋದರ ಮುಂದಿನ ದಿನ ಬಂದು ಹೇಳಿದರು: "ನಾನು ಪಾಥ್ ವೇ ಟು ಪೀಸ್ ಎಂಬ ಈ ಪುಸ್ತಕದ ಸ್ವಲ್ಪ ಭಾಗವನ್ನು ಓದಿದೆ. ತುಂಬ ಚೆನ್ನಾಗಿತ್ತು. ಇದರಿಂದ ನನ್ನ ಮನಸ್ಸಲ್ಲಿ ಇದ್ದ ಹಲವು ಆಕ್ಷೇಪಗಳು ದೂರವಾಯಿತು." ಈಗ ಅವರು ನಿರಂತರವಾಗಿ ನಮ್ಮ ಸಂಪರ್ಕದಲ್ಲಿ ಇದ್ದಾರೆ.

ಅದೇ ರೀತಿಯಲ್ಲಿ ಕರೀಬಾತಿನ ಮುಬಲ್ಲಿಗ್ ಬರೆಯುತ್ತಾರೆ: ಪ್ರತಿಯೊಬ್ಬ ಮುಸ್ಲಿಮ್ ಮತ್ತೊಬ್ಬ ಮುಸ್ಲಿಮನ್ನು ಕೊಲ್ಲಲ್ಲು ತಯಾರಾಗುತ್ತಾನೆಂದು ಇಲ್ಲಿಯ ಜನರು ಭಾವಿಸಿರುವರು. ಆದರೆ ಈಗ ಹಲವರಿಗೆ ಈ ಭಾವನೆ ತಪ್ಪೆಂದು ಗೊತ್ತಿದೆ. ಎಲ್ಲಿಯ ವರೆಗೆ ಎಂದರೆ, ಮುಸ್ಲಿಮರನ್ನು ಈ ದೇಶದೊಳಗೆ ಏಕೆ ಬರಲು ಸಮ್ಮತಿಸಿದ್ದೀರಿ, ಇವರನ್ನು ಶೀಘ್ರದಲ್ಲೇ ಹೊರಗೆ ಹಾಕಬೇಕೆಂದು ಪ್ರಧಾನಮಂತ್ರಿಯರೊಡನೆ ಜನರು ಬೇಡಿಕೊಂಡಾಗ, ಪ್ರಧಾನ ಮಂತ್ರಿಯವರು ಹೇಳಿದರು: ನಾನು ಪವಿತ್ರ ಖುರ್‌ಆನನ್ನು ಓದಿದ್ದೇನೆ. ಇಸ್ಲಾಂ ಒಂದು ಶಾಂತಿಪ್ರಿಯ ಧರ್ಮವಾಗಿದೆ. ನಾನು ಇವರನ್ನು ಎಂದೂ ಇಲ್ಲಿಂದ ಹೊರಗೆ ಅಟ್ಟಿಸಲಾರನು. ಅಲ್‌ಹಮ್ದುಲಿಲ್ಲಾಹ್ ಪ್ರಧಾನಿಮಂತ್ರಿಯೊಂದಿಗೆ ಮಾಡಲಾದ ಕೆಲವೇ ಭೇಟಿಗಳಿಂದ, ಸಂದರ್ಶನಗಳಿಂದ ಇಸ್ಲಾಮಿನ ಸರಿಯಾದ ಅಧ್ಯಾಪನೆಗಳನ್ನು ಅವರಿಗೆ ತಿಳಿಸಲಾಗಿತ್ತು. ಈಗ ಈ ದೇಶದಲ್ಲಿ ಇಸ್ಲಾಮಿನ ಪಾಠಗಳನ್ನು ಅಹ್ಮದಿಯಾ ಜಮಾಅತ್ ಮಾತ್ರ ಹರಡುತ್ತಿದೆ.

ಶಿಯಾಂಗ ರೀಜನನ ಮುಬಲ್ಲಿಗ್ ಹೇಳುತ್ತಾರೆ: ಅಲ್ಲಿಯ ಚೇರ್‌ಮ್ಯಾನನ್ನು ಭೇಟಿಮಾಡಲಾಯಿತು. ಅವರು ಬುದ್ಧಿವಂತ ಮತ್ತು ವಿವೇಕಿಯಾಗಿ ಕಂಡುಬಂತು. ಆದರೆ ನಾಸ್ತಿಕನಾಗಿದ್ದ. ನಾನು ದೇವನನ್ನು ನಂಬುವುದರ ಮತ್ತು ಧರ್ಮದ ಆವಶ್ಯಕತೆ ಬಗ್ಗೆ ಅವರಿಗೆ ಹೇಳಿದೆ. ಮಾತುಕತೆ ಮಧ್ಯೆ ಅವರು ಹೇಳಿದರು: ನಾನು ಸಮಾಜದಲ್ಲಿ ಗೌರವಾನ್ವಿತ ಹುದ್ದೆಯಲ್ಲಿದ್ದೇನೆ. ಮನೆಯಲ್ಲಿ ನನಗೆ ಎರಡು ಹೆಂಡತಿಯರೂ ಇದ್ದಾರೆ. ಮಕ್ಕಳೂ ಇದ್ದಾರೆ. ನನ್ನ ಜೀವಿತ ದೇವನನ್ನು ನಂಬದೆಯೂ ಉತ್ತಮ ರೀತಿಯಲ್ಲಿ ಸಾಗುತ್ತಿದೆ. ನನಗೆ ದೇವನನ್ನು ಅಥವಾ ಯಾವುದಾದರೂ ಧರ್ಮವನ್ನು ನಂಬುವ ಆವಶ್ಯಕತೆ ಏನಿದೆ? ಆಗ ಮುಬಲ್ಲಿಗ್ ಸಾಹಿಬರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರು ದೇವನ ಅಸ್ತಿತ್ವದ ಬಗ್ಗೆ ಹೇಳಿದ ಪುರಾವೆಗಳನ್ನು ಉದಾಹರಣೆ ಸಹಿತ ಹೇಳಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ಈ

ಎರಡು ಪುಸ್ತಕ ತುಂಬ ಉತ್ತಮವಾದುದಾಗಿದೆ. ಪ್ರತಿಯೊಬ್ಬ ಅಹ್ಮದಿ ಇದನ್ನು ಓದಬೇಕು. ಹೇಗಿದ್ದರೂ ಇವುಗಳನ್ನು ಕೇಳಿದಾಗ ಅವರು ಹೇಳಿದರು: ನಾನು ಇಸ್ಲಾಮ್ ಅಹ್ಮದಿಯ್ಯತನ್ನು ಸ್ವೀಕರಿಸಲು ತಯಾರಿದ್ದೇನೆ. ಆಗ ಮುಬಲ್ಲಿಗ್ ಸಾಹಿಬರು ಹೇಳಿದರು: ಸ್ವಲ್ಪ ಮುಂಚೆ ನೀವು ಧರ್ಮದ ಆವಶ್ಯಕತೆಯನ್ನೇ ನಿರಾಕರಿಸುತ್ತಿದ್ದೀರಿ, ಈಗ ಇಸ್ಲಾಮ್ ಅಹ್ಮದಿಯ್ಯತನ್ನು ಸ್ವೀಕರಿಸಲು ತಯಾರಾಗಿರುವಿರಿ. ಆಗ ಅವರು ಹೇಳಿದರು: ನಿಮ್ಮ ಮಾತುಗಳಿಂದ ನನ್ನ ಹೃದಯ ತೃಪ್ತಿಗೊಂಡಿದೆ. ಧರ್ಮ ಸತ್ಯವಾಗಿಯೂ ಈ ರೀತಿಯಲ್ಲಿ ದೇವನ ಕುರಿತು ಹೇಳುವುದಾದರೆ, ನಾವು ಅವನನ್ನು ನಂಬಬೇಕು. ಅವರಿಗೆ ಬೈಅತ್ ನಿಬಂಧನೆಗಳನ್ನು ಓದಿ ಹೇಳಲಾಯಿತು. ಅವರು ತಮ್ಮ ಎಂಟು ಮಕ್ಕಳ ಸಮೇತ ಅಹ್ಮದಿಯ್ಯತಿಗೆ ಪ್ರವೇಶಿಸಿದರು. ನಿಯತವಾಗಿ ಜುಮಾ ನಮಾಝ್ ನಿರ್ವಹಿಸಲು ಬರುತ್ತಾರೆ ಮತ್ತು ಜಮಾಅತಿನೊಂದಿಗೆ ಪೂರ್ಣವಾಗಿ ಸಂಪರ್ಕವನ್ನು ಇರಿಸಿರುವರು.

ಲೀಫ್‌ಲೆಟ್‌ಗಳ ವಿತರಣೆಯ ಯೋಜನೆಯಿತ್ತು. ಈ ವರ್ಷ 111 ದೇಶಗಳಲ್ಲಿ ಒಟ್ಟು 93 ಲಕ್ಷ 57 ಸಾವಿರಕ್ಕಿಂತ ಹೆಚ್ಚಿನ ಲೀಫ್‌ಲೆಟ್‌ಗಳನ್ನು ವಿತರಿಸಲಾಯಿತು. ಇದರ ಮೂಲಕ ಎರಡು ಕೋಟಿ 27 ಲಕ್ಷ ಜನರಿಗೆ ಸಂದೇಶ ತಲುಪಿತು. ಇದರಲ್ಲಿ ಜರ್ಮನಿ ಎಲ್ಲರಿಗಿಂತ ಹೆಚ್ಚು ಕೆಲಸಮಾಡಿದೆ. 25 ಲಕ್ಷದಷ್ಟು ಲೀಫ್‌ಲೆಟ್‌ಗಳನ್ನು ವಿತರಿಸಿದೆ. ಅನಂತರ ಯು.ಕೆ.13 ಲಕ್ಷ, ಆಸ್ಟ್ರೇಲಿಯಾ 8 ಲಕ್ಷ, ಹಾಲಂಡ್ 4 ಲಕ್ಷ, ಫ್ರಾನ್ಸ್ 3 ಲಕ್ಷ, ಕೆನಡ 3 ಲಕ್ಷ, ಹೀಗೆ ಬಾಕಿ ದೇಶಗಳು ಲಕ್ಷಗಟ್ಟಲೆ ಲೀಫ್‌ಲೆಟ್‌ಗಳನ್ನು ವಿತರಣೆ ಮಾಡಿವೆ.

ತನ್ಸಾನಿಯಾದ ಮಾರಾ ರೀಜನಿನ ಮುಅಲ್ಲಿಮ್ ಸಾಹಿಬರು ಬರೆಯುತ್ತಾರೆ: ಒಂದು ಗ್ರಾಮದ ಮೂರು ಯುವಕರು ಜಮಾಅತಿನ ಪೇಂಫ್ಲೆಟ್ ಓದಿ ಫೋನ್ ಮೂಲಕ ನಮ್ಮನ್ನು ಸಂಪರ್ಕಿಸಿದರು. ಜಮಾಅತಿನ ಬಗ್ಗೆ ತಿಳಿಯಲು ಉದ್ದೇಶಿಸುವುದಾಗಿ ಹೇಳಿದರು. ಸ್ವಲ್ಪ ಕಾಲದ ತಬ್ಲೀಗಿನ ನಂತರ ಅವರು ತಮ್ಮ ಕುಟುಂಬ ಸಮೇತ ಬೈಅತ್ ಮಾಡಿದರು. ತಮ್ಮ ಗ್ರಾಮದಲ್ಲಿಯೂ ತಬ್ಲೀಗ್ ಶುರುಮಾಡಿದರು. ಇವರಲ್ಲಿ ಒಬ್ಬ ಯುವಕ ಈ ಗ್ರಾಮದ ಚೇರ್‌ಮೇನ್ ಸಹ ಆಗಿರುವರು. ಅಲ್ಲಾಹನ ಅನುಗ್ರಹದಿಂದ ಅಲ್ಲಿ ಅಹ್ಮದಿಯ್ಯತಿನ ಸಂದೇಶ ಮನೆಮನೆಗೆ ತಲುಪಿತ್ತಿದೆ. ಇಲ್ಲಿಯ ವರೆಗೆ ಈ ಗ್ರಾಮದಲ್ಲಿ 82 ವ್ಯಕ್ತಿಗಳು ಬೈಅತ್ ಮಾಡಿರುವರು. ತಬ್ಲೀಗ್ ಮಾಡುವ ವೇಳೆ ವಿರೋಧವನ್ನು ಎದುರಿಸಬೇಕಾಗಿ ಬಂದಿತ್ತು. ಒಂದು ದಿನ ಅನ್ಸಾರುಸ್ಸುನ್ನ ಜಮಾಅತಿನ ಮೌಲವಿ ಬಂದರು. ಜನರ ಮುಂದೆ ಉಚ್ಚಸ್ವರದಲ್ಲಿ ಜಮಾಅತಿನ ವಿರುದ್ಧ ಬೈಗುಳ ಹೇಳಲು ಶುರುಮಾಡಿದ. ಹೀಗೆ ಗದ್ದಲವೆಬ್ಬಿಸುವುದು ಧಾರ್ಮಿಕ ನಾಯಕರ ರೀತಿಯಲ್ಲ ಎಂದು ಹೇಳಿ ಅಲ್ಲಿಯ ಜನರೇ ಅವರ ಬಾಯಿಮುಚ್ಚಿಸಿದರು. ಅನಂತರ ಅವರನ್ನು ಸಂವಾದ ಮಾಡಲು ಮತ್ತು ಅಹ್ಮದಿಯಾ ಜಮಾಅತಿನ ಪಾಠಗಳ ಬಗ್ಗೆ ಚಿಂತಿಸಲು ಆಮಂತ್ರಿಸಲಾಯಿತು. ನಮ್ಮ ಪುರಾವೆಗಳಿಂದ ನಿರುತ್ತರನಾದಾಗ ಪುನಃ ಬೈಯ್ಯಲು ತೊಡಗಿದನು. ಅಹ್ಮದಿಯಾ ಜಮಾಅತಿನ ಶಾಂತಿಪ್ರಿಯ ಪಾಠಗಳಿಂದ ಮತ್ತು ಈ ಘಟನೆಯಿಂದ ಪ್ರಭಾವಿತಗೊಂಡು ಒಬ್ಬ ಹಿರಿಯ ವ್ಯಕ್ತಿ ತಮ್ಮ ಜಮೀನನ್ನು ಜಮಾಅತಿಗೆ ಜುಮಾ ನಡೆಸಲು ಮತ್ತು ಜಮಾಅತಾದ ನಮಾಝ್ ಮಾಡಲು ನೀಡಿದರು. ಹೀಗೆ ಹಲವು ಅಹ್ಮದಿಯೇತರ ಮಕ್ಕಳು ಸಹ ನಮ್ಮ ತರಬೇತಿ ಕ್ಲಾಸುಗಳಲ್ಲಿ ಭಾಗವಹಿಸುತ್ತಾರೆ. ಅವರ ವಿರೋಧ ಸ್ವತಃ ತಬ್ಲೀಗಿನ ಮಾರ್ಗವಾಗುತ್ತಿದೆ.

ಫ್ರಾನ್ಸ್ ಜಮಾಅತಿನ ಸದರ್ ಸಾಹಿಬರು ಹೇಳುತ್ತಾರೆ: ತೋಲೂಸ್ ಪಟ್ಟಣದ ಸೆಂಟರ್‌ನಲ್ಲಿ ಹಾಕಲಾಗುವ ಸಂಡೆ ಮಾರ್ಕೆಟಿನಲ್ಲಿ ಲೀಫ್‌ಲೆಟ್ ವಿತರಣೆ ಮಾಡುತ್ತಿದ್ದೆವು. ಒಬ್ಬ ಹಿರಿವಯಸ್ಸಿನ ಹೆಂಗಸು ನಗುತ್ತಾ ಬಂದು ಹೀಗೆ ಹೇಳಿದರು: ದೇಶಪ್ರೇಮ ಮತ್ತು ಪರದೆಯ ಬಗ್ಗೆ ನನಗೆ ನೀವು ನೀಡಿದ ಲೀಫ್‌ಲೆಟ್‌ಗಳನ್ನು ನಾನು ಓದಿದ್ದೇನೆ. ನನಗೆ ಅದನ್ನು ಓದಿ ತುಂಬ ಖುಶಿಯಾಯಿತು. ಈಗಿನ ಕಾಲದಲ್ಲಿ ಈ ಪಾಠಗಳ ಬಹಳ ಆವಶ್ಯಕತೆಯಿದೆ. ನಿಮಗೆ ಎಷ್ಟು ಹಣ ಸಿಗುತ್ತದೆ ಎಂದೂ ಕೇಳಿದರು. ನಾವು ಅಲ್ಲಾಹನಿಗಾಗಿ ಈ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಅವರೊಡನೆ ಹೇಳಲಾದಾಗ ಅವರು ತುಂಬ ಪ್ರಭಾವಿತಗೊಂಡರು.

**ಪ್ರದರ್ಶನಗಳು, ಬುಕ್‌ಸ್ಟಾಲ್ಸ್ ಮತ್ತು ಬುಕ್‌ಫೇರ್ಸ್:**

ಪವಿತ್ರ ಖುರ್‌ಆನ್ ಮತ್ತು ಜಮಾಅತಿನ ಸಾಹಿತ್ಯಗಳ ಎಕ್ಸಿಬಿಶನ್ ಹಾಕಲಾಯಿತು. ಲಭಿಸಿದ ರಿಪೋರ್ಟ್ ಪ್ರಕಾರ 7 ಸಾವಿರ 540 ಪ್ರದರ್ಶನಗಳ ಮೂಲಕ ಮೂರು ಲಕ್ಷ 43 ಸಾವಿರಕ್ಕಿಂತ ಹೆಚ್ಚಿನ ಜನರಿಗೆ ಇಸ್ಲಾಮಿನ ಸಂದೇಶ ಲಭಿಸಿತು. ಈ ವರ್ಷ 1,580 ರಷ್ಟು ಸಂಖ್ಯೆಯಲ್ಲಿ ಪವಿತ್ರ ಖುರ್‌ಆನಿನ ವಿವಿಧ ಭಾಷೆಗಳ ತರ್ಜುಮೆಯನ್ನು ಅತಿಥಿಗಳಿಗೆ ಕೊಡುಗೆಯಾಗಿ ನೀಡಲಾಯಿತು. ಇದಲ್ಲದೆ ಐದು ಸಾವಿರಕ್ಕಿಂತ ಹೆಚ್ಚಿನ ಬುಕ್‌ಸ್ಟಾಲ್‌ಗಳ ಮತ್ತು ಬುಕ್‌ಫೇರ್‌ಗಳ ಮೂಲಕ 7 ಲಕ್ಷ 64 ಸಾವಿರಕ್ಕಿಂತ ಹೆಚ್ಚಿನ ವ್ಯಕ್ತಿಗಳಿಗೆ ಸಂದೇಶ ತಲುಪಿಸುವ ಸೌಭಾಗ್ಯ ಲಭಿಸಿತು.

ಲಟ್‌ವಿಯಾದ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ನಮ್ಮ ಬುಕ್‌ಸ್ಟಾಲಿಗೆ ಒಬ್ಬ ಹಿರಿವಯಸ್ಸಿನ ವ್ಯಕ್ತಿ ಬಂದರು. ಸ್ಟಾಲಿನ ಒಳಗೆ ಬಂದರು. ಫೋಟೋಗಳಿರುವ ರೋಲ್ ಅಲ್ಲಿ ಚಲಿಸುತ್ತಿತ್ತು. ಅದರಲ್ಲಿ ಇಸ್ಲಾಮಿನ ಹಲವು ವಿಷಯಗಳನ್ನು ಬರೆಯಲಾಗಿತ್ತು. ಅವುಗಳನ್ನು ಅವರು ಓದುತ್ತಾ ಹೋಗುತ್ತಿದ್ದರು. ಪ್ರತಿಯೊಂದು ಸಂಗತಿ ಬರುವಾಗ ತಮ್ಮ ಬೆರಳಿನಿಂದ ಬೊಟ್ಟು ಮಾಡುತ್ತಾ ರಶ್ಯನ್ ಭಾಷೆಯಲ್ಲಿ ಬಹಳ ಚೆನ್ನಾಗಿದೆ ಮತ್ತು ಸಂಪೂರ್ಣವಾಗಿ ಸರಿಯಾದ ಸಂಗತಿ ಎಂದು ಹೇಳುತ್ತಿದ್ದರು. ಅದೇ ರೀತಿಯಲ್ಲಿ ಎರಡು ಹೆಂಗಸರು ಬಂದಿದ್ದರು. ಅವರು "Introduction to the study of Holy Quran" ಎಂಬ ಪುಸ್ತಕದ ತರ್ಜುಮೆ ಮತ್ತು ಇತರ ಪುಸ್ತಕಗಳನ್ನು ಖರೀದಿಮಾಡಿದರು. ನೀವು ಬಹಳ ಒಳ್ಳೆಯ ಕೆಲಸಮಾಡುತ್ತಿದ್ದೀರಿ ಎಂದು ಪ್ರಶಂಸಿಸಿದರು.

ಡಿಸೆಂಬರ್ 2019ರಲ್ಲಿ ಭಾರತದ ನೂರುಲ್ ಇಸ್ಲಾಮ್ ವಿಭಾಗ ಬುಕ್ ಫೇರಿನಲ್ಲಿ ಭಾಗವಹಿಸಿತ್ತು. ಅದಕ್ಕೆ ಒಬ್ಬ ಹಿರಿಯ ಹಿಂದು ಪಂಡಿತರಾದ ಜೊಫ್ರಿಯಾ ಎಂಬವರು ಬಂದಿದ್ದರು. ಅವರು ಧರ್ಮದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು. ಸ್ಕೂಲ್ ಸಹ ನಡೆಸುತ್ತಿದ್ದಾರೆ. ಅವರು ಅಲ್ಲಿಗೆ ಬಂದು ಕೆಲವು ನಿಮಿಷಗಳಲ್ಲೇ ಪವಿತ್ರ ಖುರ್‌ಆನನ್ನು ಆಕ್ಷೇಪಿಸಲು ತೊಡಗಿದರು. ಪವಿತ್ರ ಖುರ್‌ಆನ್ ಮತ್ತು ಇಸ್ಲಾಮ್ ಮುಸ್ಲಿಮರಲ್ಲದ ಎಲ್ಲರನ್ನೂ ಕೊಲ್ಲಲ್ಲು ಆದೇಶಿಸುತ್ತದೆ ಎಂದು ಹೇಳಿದರು. ಪವಿತ್ರ ಖುರ್‌ಆನ್ ಪ್ರತಿ ನಿಮ್ಮ ಮುಂದಿದೆ. ಯಾವ ಜಾಗದಲ್ಲಿ ಇಂತಹ ಆದೇಶವಿದೆ ಎಂದು ತೋರಿಸಲು ಹೇಳಲಾಯಿತು. ನಾನು ಖುರ್‌ಆನನ್ನು ಪೂರ್ತಿಯಾಗಿ ಓದಿರುವೆನು, ಯಾವುದೋ ಒಂದು ಸ್ಥಳದಲ್ಲಿ ಈ ಆದೇಶವಿದೆ, ಎಲ್ಲಿದೆ ಎಂದು ಈಗ ನನಗೆ ಗೊತ್ತಿಲ್ಲ ಎಂದು ಆಗ ಅವರು ಹೇಳಿದರು. ಹೀಗೆ ಅವರಿಗೆ ಪವಿತ್ರ ಖುರ್‌ಆನಿನ ಪಾಠಗಳು ಮತ್ತು ಇತರ ಧರ್ಮೀಯರೊಂದಿಗೆ ಇಸ್ಲಾಮಿನ ಸದ್ವರ್ತನೆಯ ಅಧ್ಯಾಪನೆಗಳನ್ನು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿಯನ್ನು ಹೇಳಿಕೊಡಲಾಯಿತು. ಕೆಲವು ನಿಮಿಷಗಳು ಇಸ್ಲಾಮಿನ ಪಾಠಗಳನ್ನು ಕೇಳಿದ ನಂತರ ಹೇಳಿದರು: ನಾನು ಸ್ಟಾಲಿನೊಳಗೆ ಬಂದು ಕುಳಿತುಕೊಂಡು ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯಲು ಬಯಸುತ್ತೇನೆ. ಹೀಗೆ ಎರಡು ಗಂಟೆಗಳಷ್ಟು ಕಾಲ ಅವರ ಎಲ್ಲ ಪ್ರಶ್ನೆಗಳಿಗೆ ಮತ್ತು ಆಕ್ಷೇಪಗಳಿಗೆ ತೃಪ್ತಿಕರವಾದ ಉತ್ತರಗಳನ್ನು ವಿವರಿಸಿ ಕೊಡಲಾಯಿತು. ಆಗ ಅವರು ಬಹಿರಂಗವಾಗಿ ಹೀಗೆ ಹೇಳಿದರು: "ನಾನು ಇಂದಿನ ವರೆಗೆ ಇಷ್ಟು ತೃಪ್ತಿಕರವಾದ ಉತ್ತರಗಳನ್ನು ಕೇಳಿಲ್ಲ. ನಾನು ಇಸ್ಲಾಮಿನ ಕುರಿತು ಅರಿಯಲು ಹಲವು ಪಂಡಿತರ ಬಳಿಗೆ ಹೋಗಿದ್ದೇನೆ, ಮನೆ ಮನೆಗೆ ಹೋಗಿ ಸುತ್ತಾಡಿದ್ದೇನೆ. ಆದರೆ ನನ್ನ ಪ್ರಶ್ನೆಗಳಿಗೆ ಪಂಡಿತರ ಉತ್ತರಗಳಿಂದ ನನ್ನೊಳಗೆ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನೊಡನೆ ಪ್ರೀತಿ ಉಂಟಾಗುವ ಬದಲು ದ್ವೇಷ ಮತ್ತು ವಿಷ ತುಂಬುತ್ತಾ ಹೋಯಿತು. ಎಷ್ಟರ ವರೆಗೆ ಎಂದರೆ, ನಾನು ನನ್ನ ಸ್ನೇಹಿತರೊಡನೆ ಸಮಾಲೋಚಿಸಿ ಇಸ್ಲಾಮಿನ ವಿರುದ್ಧ ಒಂದು ಟಿ.ವಿ. ಚಾನಲ್ ಶುರುವಮಾಡಲು ತೀರ್ಮಾನಿಸಿದೆ. ಹೀಗೆ ಇದರ ಕೆಲಸ ಶುರುಮಾಡಿದೆವು, ಸ್ವಲ್ಪ ರಿಕಾರ್ಡಿಂಗ್ ಸಹ ಶುರುಮಾಡಿದೆವು. ಆದರೆ ಈಗ ನೀವು ನನ್ನ ಲೋಕವನ್ನೇ ಬದಲಾಯಿಸಿದ್ದೀರಿ." ಅವರು ಬಹಳ ಪ್ರಭಾವಿತರಾದರು ಮತ್ತು ಇಂದಿನಿಂದ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ವಿರುದ್ಧ ಏನೂ ಹೇಳುವುದಿಲ್ಲ, ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ಬಗ್ಗೆ ಮಾಡಲಾದ ರಿಕಾರ್ಡಿಂಗ್ ಪ್ರೋಗ್ರಾಮುಗಳನ್ನು ಪ್ರಸಾರ ಮಾಡಲಿಕ್ಕಿಲ್ಲ. ಬದಲಾಗಿ, ಇಸ್ಲಾಮ್ ಮತ್ತು ಇಸ್ಲಾಮಿನ ಪಾಠಗಳನ್ನು ಜನರ ಮುಂದೆ ಇರಿಸಲಾಗುವುದು ಎಂದು ವಾಗ್ದಾನ ಮಾಡಿ ಹೋದರು. ಅಹ್ಮದಿಯಾ ಜಮಾಅತ್ ಇಸ್ಲಾಮಿನ ಸುಂದರವಾದ ಪಾಠದಿಂದ ಅದರ ಯಥಾರ್ಥ ಸ್ವರೂಪವನ್ನು ತೋರಿಸಿ ಶತ್ರುಗಳನ್ನು ಸಹ ತಮ್ಮ ತಪ್ಪನ್ನು ಒಪ್ಪುವಂತೆ ಮಾಡುತ್ತದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಅವರ ಜೀವನಶೈಲಿಯ ಸರಿಯಾದ ಅರಿವು ಕೊಡುತ್ತಿದೆ. ಈ ನಾಮಧಾರಿಗಳಾದ ಉಲೇಮಾಗಳು ತಮ್ಮನ್ನು ತಾವೇ ಇಸ್ಲಾಮಿನ ಗುತ್ತೇದಾರರಂದು ಭಾವಿಸಿ ಇತರ ಜನರನ್ನು ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನೊಡನೆ ಹಗೆಯುಂಟು ಮಾಡುತ್ತಾರೆ. ಹೀಗೆಲ್ಲ ಮಾಡಿ ನಮ್ಮ ವಿರುದ್ಧವೇ ಮಾತನಾಡುತ್ತಾರೆ.

ಆಗ್ರ ಬುಕ್‌ಫೇರ್ ಸಂದರ್ಭದಲ್ಲಿ ಪ್ರಾದೇಶಿಕ ಪತ್ರಿಕೆಯಾದ "ಅಗರ್ ಭಾರತ್"ನ ರಿಪೋರ್ಟರ್ ನಮ್ಮ ಸ್ಟಾಲಿಗೆ ಬಂದಿದ್ದರು. ಅವರು ಮುಸ್ಲಿಮ್ ಸಮುದಾಯದ ಹೀನಾಯ ಸ್ಥಿತಿ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದಾಗ ಅವರಿಗೆ ಅಹ್ಮದಿಯಾ ಜಮಾಅತ್ ಮೂಲಕ ನಡೆಸಲಾಗುವ ಇಸ್ಲಾಮಿನ ಸೇವೆಗಳ ಬಗ್ಗೆ ವಿವರಿಸಿ ಕೊಡಲಾದಾಗ ತುಂಬ ಪ್ರಭಾವಿತರಾದರು. ಮಾತ್ರವಲ್ಲ

ಈ ಕೆಲಸದಲ್ಲಿ ನಮ್ಮೊಡನೆ ಎಲ್ಲ ರೀತಿಯಲ್ಲೂ ಸಹಕರಿಸುವರು ಎಂದು ವಾಗ್ದಾನ ಮಾಡಿದರು. ಅವರು ತಮ್ಮ ಸಂಪರ್ಕ ಮಾಧ್ಯಮಗಳ ಮೂಲಕ ನಮ್ಮ ಸಂದೇಶವನ್ನು ಇತರ ಮೂರು ವಾರ್ತಾ ಚಾನಲ್‌ಗಳಲ್ಲೂ ಪ್ರಸಾರ ಮಾಡಿಸಿದರು. ಅದರ ಮೂಲಕ ಲಕ್ಷಾಂತರ ವ್ಯಕ್ತಿಗಳಿಗೆ ಅಹ್ಮದಿಯಾ ಜಮಾಅತಿನ ಸಂದೇಶ ತಲುಪಿತು.

ಅಸ್ಸಾಮಿನಲ್ಲಿ ಬುಕ್‌ಫೇರ್ ವೇಳೆಯಲ್ಲಿ ಖುರ್‌ಆನ್ ಹಾಫಿಝ್‌ರಾಗಿರುವ ಮತ್ತು ಪಿ.ಎಚ್.ಡಿ. ಹೊಂದಿರುವ ಆಫ್‌ತಾಬ್ ಅಹ್ಮದ್ ಚೌಧರಿಗೆ ಅಹ್ಮದಿಯಾ ಜಮಾಅತಿನ ಪರಿಚಯ ಮಾಡಿಕೊಡಲಾಯಿತು. ವಿಶದವಾಗಿ ಮಾತುಕತೆ ನಡೆಯಿತು. ಮಾತುಕತೆಯ ನಡುವೆ ಅವರಿಗೆ ಈಸಾ ಮಸೀಹರ ಮರಣದ ಬಗ್ಗೆ ಅಹ್ಮದಿಯಾ ಜಮಾಅತಿನ ವಿಶ್ವಾಸಗಳ ಕುರಿತು ಹೇಳಿಕೊಡಲಾಯಿತು. ಪವಿತ್ರ ಖುರ್‌ಆನಿನಿಂದಲೇ ಈಸಾ ಮಸೀಹರ ಮರಣವನ್ನು ಸಾಬೀತುಗೊಳಿಸಲಾಯಿತು. ಆಗ ಅವರು ಹೇಳಿದರು: ನಿಸ್ಸಂಶಯವಾಗಿಯೂ ನಾನು ಖುರ್‌ಆನ್ ಹಾಫಿಝ್ ಆಗಿರುವನು. ಆದರೆ ನಾನು ಇದರ ಬಗ್ಗೆ ಯೋಚಿಸಿಯೂ ಇರಲಿಲ್ಲ. ನೀವು ನನ್ನ ಕಣ್ಣುಗಳನ್ನು ತೆರೆದಿದ್ದೀರಿ.ನಾನು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿರುತ್ತೇನೆ. ಇನ್ನು ನಾನು ಈ ಎಲ್ಲ ಆಯತುಗಳನ್ನು ರೆಫರನ್ಸ್ ಸಮೇತ ಪತ್ರಿಕೆಗಳಲ್ಲಿ ಪ್ರಕಟಿಸುತ್ತೇನೆ. ಅಸ್ಸಾಮಿನ ಎಲ್ಲ ಮುಸ್ಲಿಮರು ನನ್ನ ವಿರೋಧಿಗಳಾದರೂ ಸರಿ.

ಸ್ವಿಟ್ಜರ್‌ಲೇಂಡಿನ ಪೀಸ್ ಸಿಂಪೋಝಿಯಮ್ ಸಂದರ್ಭದಲ್ಲಿ ಒಂದು ಕಲ್ಯಾಣ ಸಂಸ್ಥೆಯ ಅಧ್ಯಕ್ಷರು ಸಹ ಆಗಿರುವ ಮಿಶಲ್ ಫಶಲ್ ಎಂಬ ಒಬ್ಬ ಪಾದರಿ ಸಾಹಿಬರಿಗೆ ಒಂದು ಅವಾರ್ಡ್ ನೀಡಲಾಗಿತ್ತು. ಅವರು ಹೇಳುತ್ತಾರೆ: ನಾನು ಈ ಅವಾರ್ಡ್ ಲಭಿಸಿದ್ದಕ್ಕಾಗಿ ನಿಮಗೆ ಮನಸ್ಸಾರೆ ಕೃತಜ್ಞತೆ ಅರ್ಪಿಸುತ್ತೇನೆ. ಒಂದು ಮುಸ್ಲಿಮ್ ಜಮಾಅತ್ ಒಂದು ಕ್ರೈಸ್ತ ಸಂಸ್ಥೆಗೆ ಅದರ ಕಲ್ಯಾಣ ಸೇವೆಗಳಿಗಾಗಿ ಕೊಡುಗೆ ನೀಡುವುದನ್ನು ನೋಡಿ ಅಚ್ಚರಿಗೊಂಡಿದ್ದೇನೆ. ನೀವು ಶಾಂತಿಯ ಮಾತುಗಳನ್ನು ಆಡುವುದು ಮಾತ್ರವಲ್ಲ ಶಾಂತಿಯನ್ನು ಸ್ಥಾಪಿಸಿ ತೋರಿಸುತ್ತಿದ್ದೀರಿ ಎಂಬುವುದಕ್ಕೆ ಈ ಕಾಣಿಕೆ ಒಂದು ಸ್ಪಷ್ಟವಾದ ಪುರಾವೆಯಾಗಿದೆ. ಮರ ಅದರ ಹಣ್ಣುಗಳಿಂದ ಗುರುತಿಸಲ್ಪಡುತ್ತದೆ. ಈ ನಿಮ್ಮ ಪೀಸ್ ಸಿಂಪೋಝಿಯಮ್ ಇದರ ಫಲವಾಗಿದೆ.

ಜೇಂಬಿಯಾದ ಮುಬಲ್ಲಿಗ್ ಇಂಚಾಜ್ ಬರೆಯುತ್ತಾರೆ: ಪೀಸ್ ಸಿಂಪೋಸ್ಸಿಯಮ್‌ನಲ್ಲಿ ಜೀವಿತದ ವಿವಿಧ ವಿಭಾಗಗಳಿಗೆ ಸಂಬಂಧಿಸಿದ ವ್ಯಕ್ತಿಗಳು ಭಾಗವಹಿಸಿದ್ದರು. ಅವರಲ್ಲಿ ಪೊಲೀಸ್ ಆಫಿಸರ್, ಲೋಕಲ್ ಕೋರ್ಟಿನ ಜಡ್ಜ್, ಹಲವು ಚರ್ಚುಗಳ ಪಾದರಿಗಳು ಮತ್ತು ಇತರ ಪ್ರತಿನಿಧಿಗಳು ಇದ್ದರು. ಅದಲ್ಲದೆ ಸ್ಕೂಲಿನ ಅಧ್ಯಾಪಕರು, ಲೋಕಲ್ ಮೀಡಿಯಾದ ಪ್ರತಿನಿಧಿಗಳು, ಮೆಂಬರ್ ಆಫ್ ಪಾರ್ಲಿಮೆಂಟಿನ ಪ್ರತಿನಿಧಿಗಳು, ಮೆಂಬರ್ ಆಫ್ ಪಾರ್ಲಿಮೆಂಟ್ ಅಲ್ಲದೆ ಸಮೀಪದಲ್ಲಿರುವ ಅಹ್ಮದಿಯೇತರ ಮಸೀದಿಯ ಮುಅಲ್ಲಿಮ್ ಸಹ ಇದ್ದರು. ಒಂದು ಚರ್ಚಿನ ಪಾಸ್ಟರ್ ಸಾಹಿಬರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು: ನಾವು ಬಹಳ ಕಾಲದಿಂದ ಇಂತಹ ಕಾರ್ಯಕ್ರಮವನ್ನು ಮಾಡಲು ಯೋಚಿಸುತ್ತಿದ್ದೆವು. ಆದರೆ ಅಹ್ಮದಿಯಾ ಜಮಾಅತ್ ಪ್ರೋಗ್ರಾಮ್ ಮಾಡಿ ನಮಗಿಂತ ಮುಂದೆ ಸಾಗಿದೆ.

ಚಂಡಿಗಢ್‌ನಲ್ಲಿ ನಡೆದ ಪೀಸ್ ಸಿಂಪೋಸಿಯಮ್‌ನಲ್ಲಿ ಒಬ್ಬ ಅಫ್ಘಾನ್ ಸಹೋದರನಾದ ಉಬೈದುಲ್ಲಾಹ್‌ರಿಗೆ ಅಹ್ಮದಿಯಾ ಜಮಾಅತನ್ನು ಪರಿಚಯಿಸಿ ಕೊಡಲಾಯಿತು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಗ್ಗೆ ಹೇಳಿಕೊಡಲಾಯಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುವಾರ್ತೆ ನೀಡಿದ ವಾಗ್ದತ್ತ ಮಸೀಹ್ ತಾನೆಂದು ಮಿರ್ಝಾ ಗ್ಹುಲಾಂ ಅಹ್ಮದ್ ಸಾಹಿಬರು ವಾದಿಸಿದ್ದರು ಎಂದು ತಿಳಿಸಿಕೊಡಲಾಯಿತು. ಇದು ಮಸೀಹ್ ಮೌಊದ್ ಬರಬೇಕಾದ ಸಮಯವಲ್ಲವೇ ಎಂದು ಚಿಂತಿಸಿರಿ ಎಂದು ಹೇಳಿದಾಗ ಅವರ ಮುಖ ಕೆಂಪಾಗಿ ನಡುಗಲು ತೊಡಗಿದರು. ಮಸೀಹ್ ಮೌಊದ್ ಬಂದಿರುವರು ಎಂಬುದು ಸತ್ಯವೇ? ಎಂದು ಪದೇ ಪದೇ ಕೇಳುತ್ತಿದ್ದರು. ಅದರ ನಂತರ ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬರಹಗಳಿಂದಲೇ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಹಿಮೆಯನ್ನು ಹೇಳಿಕೊಡಲಾದಾಗ ಅವರು ಅತ್ಯಂತ ಆವೇಶಭರಿತರಾಗಿ ನಮ್ಮೊಬ್ಬ ಅಹ್ಮದಿ ಸಹೋದರನ ಹಣೆಯನ್ನು ಚುಂಬಿಸಿದರು. ನಿಮ್ಮ ಮೂಲಕ ಲೋಕಕ್ಕೆ ನೀಡಲಾಗುವ ಈ ಸಂದೇಶವೇ ಇಸ್ಲಾಮಿನ ನೈಜ ಅಧ್ಯಾಪನೆಯಾಗಿದೆ ಎಂದು ಹೇಳಿದರು.

ಫಿನ್‌ಲೇಂಡಿನ ನ್ಯಾಶನಲ್ ಸದರ್ ಬರೆಯುತ್ತಾರೆ: ಅಲ್ಲೊಂದು ಪೀಸ್ ಸಿಂಪೋಸಿಯಮ್ ನಡೆಸಲಾಗಿತ್ತು. ಪಾಕಿಸ್ತಾನದಲ್ಲಿ ಫಿನ್‌ಲೇಂಡಿನ ರಾಯಭಾರಿಯೂ ಆಗಿದ್ದ ಫಾರಿನ್ ಮಿನಿಸ್ಟ್ರಿಯ ಒಬ್ಬ ಅಂಬಸಿಡರ್ ಮತ್ತು ಡಿಪ್ಲೋಮೇಟ್ ಹೇಳುತ್ತಾರೆ: ನನಗೆ ನಿಜವಾಗಿಯೂ ನಿಮ್ಮ ಸಭ್ಯ ಮತ್ತು ಘನತೆಯಿಂದ ಕೂಡಿದ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂತೋಷವಾಗುತ್ತಿದೆ. ನಾನು ಪಾಕಿಸ್ತಾನದಲ್ಲಿ 1995ರಿಂದ 1998ರ ತನಕ ಇದ್ದೆ. ಫಿನ್‌ಲೇಂಡಿನ ರಾಯಭಾರಿ ವಿಭಾಗದ ಅಧ್ಯಕ್ಷನಾಗಿದ್ದೆ. ನನ್ನೊಂದಿಗೆ ಆ ಕಾಲದ ಉತ್ತಮ ನೆನಪುಗಳಿವೆ. ನನ್ನ ಮತ್ತು ನನ್ನ ಕುಟುಂಬದ ಆತ್ಮೀಯ ಸ್ನೇಹಿತರಲ್ಲಿ ಅಹ್ಮದಿಯಾ ಕಮ್ಯೂನಿಟಿಯ ಹಲವು ವಿಶಿಷ್ಟ ಸದಸ್ಯರು ಇರುವರು. ಅಹ್ಮದಿಯರು ಆ ದೇಶ ಮತ್ತು ಆ ದೇಶದ ಗಡಿಗೂ ಮಿಗಿಲಾಗಿ ಕುಶಲಕಲೆಗಳಲ್ಲಿ ಮತ್ತು ಅಲ್ಲಿನ ಸಾಮಾಜಿಕ ವಿಜಯಗಳಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿರುವರು. ಬ್ರಿಟಿಷರು ಉಪಭೂಖಂಡದಲ್ಲಿ ಆಡಳಿತ ನಡೆಸಿದಾಗ ಅಲ್ಲಿನ ಹಲವು ಪ್ರಸಿದ್ಧ ಪ್ರಜೆಗಳು ಮತ್ತು ಸೇನಾ ನಾಯಕರು ಅಹ್ಮದಿಯಾ ಜಮಾಅತಿನವರಾಗಿದ್ದರು. ನಾನು ಇಟಲಿಯಲ್ಲೂ ರಾಯಭಾರಿಯಾಗಿದ್ದೆ. ಆಗ ಇಟಲಿಯ ಟ್ರೀಸ್ಟೇಯಲ್ಲಿರುವ ವಿಜ್ಞಾನದ ಮೂರನೇ ಜಾಗತಿಕ ಅಕಾಡಮಿ ಬಗ್ಗೆ ನನಗೆ ಅರಿವಾಯಿತು. ಅದರ ಆರಂಭ ಮತ್ತು ಅದರ ತಳಹದಿಯನ್ನು ಪಾಕಿಸ್ತಾನದ ಪರಮಾಣು ಮತ್ತು ಭೌತಶಾಸ್ತ್ರ ವಿಜ್ಞಾನಿಯಾದ ಅಬ್ದುಸ್ಸಲಾಮ್ ಹಾಕಿದ್ದರು. ಇಸ್ಲಾಮಿ ದೇಶಗಳಲ್ಲೇ ಅವರು ನೋಬೆಲ್ ಪ್ರಶಸ್ತಿ ಪಡೆದ ಮೊದಲ ವಿಜ್ಞಾನಿಯಾಗಿದ್ದರು. ಅವರಿಗೆ ನೋಬೆಲ್ ಪ್ರಶಸ್ತಿ ಲಭಿಸಿದ ವಾರ್ತೆ ಹರಡಿದಾಗ ಪಾಕಿಸ್ತಾನದ ರಾಷ್ಟ್ರೀಯ ಪತ್ರಿಕೆಗಳಲ್ಲಿ, ರೇಡಿಯೋ ಮತ್ತು ಟಿ.ವಿ.ಗಳಲ್ಲಿ ತುಂಬ ಪ್ರಶಂಸಿಸಲಾಯಿತು. ಬಹಳವಾಗಿ ಅವರನ್ನು ಗೌರವಿಸಲಾಯಿತು. ಆದರೆ ಅವರು ಓರ್ವ ಅಹ್ಮದಿಯಾಗಿರುವರೆಂದು ತಿಳಿದಾಗ ಬೇಗನೇ ಎಲ್ಲ ಪ್ರಶಂಸೆ ಮತ್ತು ಪ್ರಸಿದ್ಧಿ ನಿಂತುಹೋಯಿತು. 1996ರಲ್ಲಿ ಅವರು ನಿಧನರಾದಾಗ ಅವರನ್ನು ಪಾಕಿಸ್ತಾನ ಪಂಜಾಬಿನ ಪಟ್ಟಣವಾದ ರಬ್ವದಲ್ಲಿ ದಫನ್ ಮಾಡಲಾಯಿತು. ಇನ್ನೊಂದು ನಾಚಿಕೆಗೇಡಿನ ಸಂಗತಿಯೇನೆಂದರೆ, ಅವರ ಶಿಲಾಲೇಖನದಿಂದ ಮುಸ್ಲಿಮ್ ಎಂಬ ಪದವನ್ನು ಅಳಿಸಲಾಯಿತು. ಹೇಗಿದ್ದರೂ ಅವರು ಅಹ್ಮದಿಯರ ಮೇಲೆ ನಡೆಸಲಾಗುತ್ತಿರುವ ಶೋಷಣೆಯ ಬಗ್ಗೆ ವಿವರವಾಗಿ ಪ್ರಸ್ತಾಪಿಸಿದರು. ಈಗಂತು ಚರಿತ್ರೆಯ ಪುಸ್ತಕಗಳನ್ನು ಬದಲಾಯಿಸಲಾಗುತ್ತಿದೆ. ಮಕ್ಕಳ ಮನಸ್ಸಿಂದ ನೈಜ ಚರಿತ್ರೆಯನ್ನು ಅಳಿಸಿ ಹಾಕಲಾಗುತ್ತಿದೆ. ನಾವು ಹೇಳಿದ್ದರೂ ಹೇಳದಿದ್ದರೂ ಅಹ್ಮದಿಯಾ ಜಮಾಅತ್ ಪಾಕಿಸ್ತಾನಕ್ಕಾಗಿ ಏನೆಲ್ಲ ಸೇವೆ ಮಾಡಿತ್ತು ಎಂದು ಲೋಕದ ವಿದ್ಯಾವಂತ ವಿಭಾಗಕ್ಕೆ ಗೊತ್ತಿದೆ. ಈಗ ಅಹ್ಮದಿಯರೊಡನೆ ಕೆಟ್ಟದ್ದಾಗಿ ವರ್ತಿಸುತ್ತಿದ್ದಾರೆ. ಪಾಕಿಸ್ತಾನ ನಿರ್ಮಾಣವನ್ನು ವಿರೋಧಿಸುತ್ತಿದ್ದ ಅದೇ ಜನರೇ ಈಗ ನಾಮಧಾರಿಗಳಾದ ಸಂಸ್ಥಾಪಕರಾಗಲು ಪ್ರಯತ್ನಿಸುತ್ತಿದ್ದಾರೆ. ಹೇಗಿದ್ದರೂ ಪಾಕಿಸ್ತಾನದ ಎಲ್ಲ ಅಹ್ಮದಿಯರು ಆ ದೇಶದ ನಿಷ್ಠಾವಂತ ಪ್ರಜೆಯಾಗಿರುವರು, ನಿಷ್ಠಾವಂತರಾಗಿದ್ದರು ಮತ್ತು ಮುಂದೆಯೂ ನಿಷ್ಠಾವಂತರಾಗಿರುವರು. ಇನ್‌ಶಾ ಅಲ್ಲಾಹ್. ಈ ವಿರೋಧಿಗಳ ಪ್ರಯತ್ನಗಳು ಒಂದು ದಿನ ಧೂಳೀಪಟವಾಗುವುದು ಎಂದು ಪ್ರತೀಕ್ಷಿಸುತ್ತೇವೆ. ಅಲ್ಲಾಹನ ನೆರವು ನಮ್ಮೊಡನೆ ಇರುವುದು. ಇನ್‌ಶಾ ಅಲ್ಲಾಹ್. ಈಗಲೂ ಇದೆ. ಅವರು ಇಲ್ಲಿಯ ವರೆಗೆ ಮಾಡಿದ ಪ್ರಯತ್ನಗಳನ್ನು ನೋಡಿದರೆ, ಈ ವೇಳೆಗೆ ಅಹ್ಮದಿಯಾ ಜಮಾಅತ್ ನಾಶಹೊಂದಬೇಕಾಗಿತ್ತು. ಆದರೆ ಅಲ್ಲಾಹನು ಜಮಾಅತನ್ನು ಸಂರಕ್ಷಿಸುತ್ತಿದ್ದಾನೆ.

ಹೇಗಿದ್ದರೂ ನಾನು ಓದಿಹೇಳಿದ ಈ ಘಟನೆಗಳ ರಿಪೋರ್ಟ್‌ಗಳು ಕೇವಲ ಒಂದು ಭಾಗ ಮಾತ್ರವಾಗಿದೆ. ಈ ರಿಪೋರ್ಟನ್ನು ನಾನು ಹೇಳಿದಂತೆ ಜಲಸದ ಎರಡನೇ ದಿವಸ ಹೇಳಲಾಗುತ್ತದೆ. ಈ ವರ್ಷ ಜಲಸ ಜರಗದ ಕಾರಣ, ನಾನು ಹಿಂದೆ ಹೇಳಿದಂತೆ ಇದನ್ನು ಎರಡು ಭಾಗಗಳನ್ನಾಗಿ ಮಾಡಿ ಹೇಳಲು ಯೋಚಿಸಿದ್ದೇನೆ. ಪ್ರೋಗ್ರಾಮ್ ಮಾಡಲಾಗಿದೆ. ರವಿವಾರ ಸಂಜೆ 4 ಗಂಟೆಗೆ ಚಿಕ್ಕ ಸಭೆಯ ಮುಂದೆ ಜಲ್ಸ ರೂಪದಲ್ಲಿ ನಾನು ರಿಪೋರ್ಟಿನ ಉಳಿದ ಭಾಗಗಳನ್ನು ಮತ್ತು ಈ ವರ್ಷ ಜಮಾಅತಿನ ಮೇಲೆ ಅಲ್ಲಾಹನು ಮಾಡಿದ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸುವೆನು. ಅಲ್ಲಿಂದ ಎಂ.ಟಿ.ಎ.ಮೂಲಕ ಲೋಕದೆಲ್ಲಡೆ ಇದನ್ನು ಕೇಳಲಾಗುವುದು. ಇನ್‌ಶಾ ಅಲ್ಲಾಹ್. ಈ ರಿಪೋರ್ಟನಿಂದ ಹಲವು ಘಟನೆಗಳನ್ನು ಮತ್ತು ಸಂಗತಿಗಳನ್ನು ಬಿಟ್ಟುಬಿಡಬೇಕಾಗಿ ಬಂದಿದೆ. ಉಳಿದ ಭಾಗವನ್ನು ರವಿವಾರದಂದು ಹೇಳುತ್ತೇನೆ **– ಇನ್‌ಶಾ ಅಲ್ಲಾಹ್.**

***************

## ದೇವದರ್ಶನ

ತನ್ನ ಸಂಶಯವನ್ನು ನೀಗಿಸಿಕೊಳ್ಳದೆಯಿರುವವನು ಶಿಕ್ಷೆಯಿಂದ ರಕ್ಷಿತನಾಗಲಾರನು. ಈ ಲೋಕದಲ್ಲಿ ದೇವನನ್ನು ಕಾಣುವ ಭಾಗ್ಯವನ್ನು ಪಡೆಯದವನು ಪರಲೋಕದಲ್ಲಿಯೂ ಅಂಧಕಾರದಲ್ಲಿ ಬೀಳುವನು. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆಂದಿರುವನು:

مَن كَانَ فِي هٰذِهٖ أَعْمَىٰ فَهُوَ فِي الْآخِرَةِ أَعْمَىٰ

*"ಈ ಲೋಕದಲ್ಲಿ ಅಂಧನಾಗಿರುವವನು ಪರಲೋಕದಲ್ಲಿಯೂ ಅಂಧನಾಗಿಯೇ ಇರುವನು." (17:73)*

***(ಕಿತಾಬುಲ್ ಬರಿಯ್ಯ; ರೂಹಾನೀ ಖಝಾಇನ್ ಸಂಪುಟ 13, ಪುಟ 65)***

**ನಿಧನ ವಾರ್ತೆ**

## ಜನಾಬ್ ಎಸ್.ಎಂ. ಜಲ್‌ಫರ್ ಸಾದಿಖ್ ಸಾಹಿಬ್

ಶಿವಮೊಗ್ಗದ ನಿವಾಸಿಯಾದ ಜನಾಬ್ ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬ್‌ರವರು 87ನೇ ವಯಸ್ಸಿನಲ್ಲಿ ಆಗಸ್ಟ್ ದಿನಾಂಕ 18ರಂದು ಸಂಜೆ 6:30ಕ್ಕೆ ನಿಧನ ಹೊಂದಿದರು– **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. 19 ಆಗಸ್ಟ್ ಝುಹರ್ ನಮಾಝ್ ನಂತರ ಅಹ್ಮದಿಯಾ ಖಬರ್‌ಸ್ಥಾನದಲ್ಲಿ ಧಫನ್ ಮಾಡಲಾಯಿತು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆ ಜನಾಬ್ ಅಲ್‌ಹಾಜ್ ಮೀರ್ ಕಲೀಮುಲ್ಲಾಹ್ ಸಾಹಿಬ್‌ರವರ ಮೂಲಕ ಪ್ರವೇಶಿಸಿತು. ಜನಾಬ್ ಮೀರ್ ಕಲೀಮುಲ್ಲಾಹ್ ಸಾಹಿಬ್‌ರವರು ಶಿವಮೊಗ್ಗ ಜಮಾಅತಿನ ಮೊದಲ ಅಹ್ಮದಿ ಆಗಿದ್ದರು. ಹೀಗೆ ಅವರು (ಎಸ್. ಎಂ. ಜಲ್‌ಫರ್ ಸಾದಿಖ್ ಸಾಹಿಬ್) ಹುಟ್ಟಿನಂದಲೇ ಅಹ್ಮದಿ ಆಗಿದ್ದರು. ಜನಾಬ್ ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬರು 11–06–1933ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಅವರ ತಂದೆಯ ಹೆಸರು ಅಲ್‌ಹಾಜ್ ಮೀರ್ ಕಲೀಮುಲ್ಲಾಹ್ ಸಾಹಿಬ್ ಮತ್ತು ತಾಯಿಯ ಹೆಸರು ಸುಫಿಯಾ ಬೀ ಆಗಿತ್ತು. ಅಲ್‌ಹಾಜ್ ಮೀರ್ ಕಲೀಮುಲ್ಲಾಹ್ ಸಾಹಿಬರು ಶಿವಮೊಗ್ಗದಲ್ಲಿ ಠೇಕೆದಾರ್ ಎಂದು ಪ್ರಸಿದ್ಧರಾಗಿದ್ದರು. ಅವರು ಅಹ್ಮದಿಯಾರಾದಾಗ ಕಠಿಣ ವಿರೋಧ ಎದುರಿಸಬೇಕಾಯಿತು.

ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬರು ಮೀರ್ ಕಲೀಮುಲ್ಲಾಹ್ ಸಾಹಿಬರ ಕಿರಿ ಮಗ ಆಗಿದ್ದರು. ಅವರು ಬಹಳ ದೊಡ್ಡ ವಿದ್ವಾಂಸರಾಗಿದ್ದರು, ಮುತ್ತಖಿಯೂ, ನಮಾಝ್, ಉಪವಾಸಗಳನ್ನು ನಿಷ್ಠೆಯಿಂದ ನಿರ್ವಹಿಸುವವರಾಗಿದ್ದರು. ತಹಜ್ಜುದ್ ನಮಾಝ್ ನಿರ್ವಹಿಸುವವರೂ ಪ್ರಾರ್ಥಿಸುವವರೂ ಆಗಿದ್ದರು. ಪವಿತ್ರ ಖುರ್‌ಆನ್, ಹದೀಸ್, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರವರ ಮತ್ತು ಖಲೀಫರೆಲ್ಲರ ಗ್ರಂಥಗಳನ್ನು ಗಾಢವಾಗಿ ಅಧ್ಯಯನ ಮಾಡಿದವರಾಗಿದ್ದರು. ಅದಲ್ಲದೆ ಅನೇಕ ಅಹ್ಮದಿಯೇತರರ ಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ಅವರ ಸ್ವಂತ ಲೈಬ್ರರಿಯಲ್ಲಿ ಅಸಂಖ್ಯಾತ ಅಪೂರ್ವ ಗ್ರಂಥಗಳಿದ್ದುವು. ಅನೇಕ ಮುಸ್ಲಿಮ್ ಹಾಗೂ ಹಿಂದೂ ವಿದ್ವಾಂಸರೊಂದಿಗೆ ವಾದ ಪ್ರತಿವಾದ ಮಾಡುತ್ತಿದ್ದರು. ಅವರು ಉತ್ತಮ ಭಾಷಣಗಾರರೂ ವಾದವಿವಾದ ನಿಪುಣರೂ ಆಗಿದ್ದರು. ಶಿವಮೊಗ್ಗದ ಅನೇಕ ಜಮಾಅತಿನ ಸದಸ್ಯರು ಅವರಿಂದ ಬಹಳಷ್ಟು ವಿಷಯಗಳನ್ನು ತಿಳಿದುಕೊಂಡಿದ್ದರು. ಜಮಾಅತಿನ ತರಬೇತಿಗಾಗಿ ಸದಾ ಪ್ರಯತ್ನಿಸುವವರಾಗಿದ್ದರು.

ಅವರು ಜಮಾಅತಿನ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಶಿವಮೊಗ್ಗದ ಮೊದಲ ಖಾಯಿದ್ (ಯುವಜನ ಅಧ್ಯಕ್ಷ) ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾ ಆಗಿದ್ದರು. ಸೆಕ್ರೆಟರಿ ತಅ್‌ಲೀಮ್ ವ ತರ್‌ಬಿಯ್ಯತ್, ಸೆಕ್ರೆಟರಿ ಉಮೂರೆ ಆಮ ಆದ ನಂತರ 1977ರಲ್ಲಿ ಜನಾಬ್ ಸಯ್ಯದ್ ಮದಾರ್ ಸಾಹಿಬ್‌ರವರು ನಿಧನ ಹೊಂದಿದ ನಂತರ ಅವರು ಜಮಾಅತ್ ಅಹ್ಮದಿಯಾ ಶಿವಮೊಗ್ಗದ ಸದರ್ ಆದರು. 1976ರಿಂದ 2003ರವರೆಗೆ 27 ವರ್ಷಗಳ ಸುದೀರ್ಘ ಕಾಲ ಶಿವಮೊಗ್ಗ ಜಮಾಅತಿನ ಸದರ್ (ಅಧ್ಯಕ್ಷ) ಆಗಿ ಸೇವೆ ಸಲ್ಲಿಸಿದರು. ಈ ಸುದೀರ್ಘ ಕಾಲದ ಸೇವೆಯಲ್ಲಿ ಶಿವಮೊಗ್ಗ ಜಮಾಅತಿನಲ್ಲಿ ಅನೇಕ ವಿದ್ವಾಂಸರು ಮೌಲವಿಗಳಾಗಿ ಆಗಮಿಸಿದ್ದರು. ಅವರ ಅಧ್ಯಕ್ಷತೆಯ ಕಾಲದಲ್ಲಿ ಬಹಳಷ್ಟು ಜನರಿಗೆ ತಬ್‌ಲೀಗ್ ಮಾಡುತ್ತಿದ್ದರು. ಜಮಾಅತಿನ ಸದಸ್ಯರ ತರಬೇತಿಯ ಕೆಲಸಗಳನ್ನು ಮಾಡಿದ್ದಾರೆ. ಮರ್‌ಕಝ್‌ನಿಂದ ಆಗಮಿಸುವ ಎಲ್ಲ ವಿದ್ವಾಂಸರೊಂದಿಗೆ ಅವರು ಉತ್ತಮ ಸಂಬಂಧ ಹೊಂದಿದ್ದರು. ವಿಶೇಷವಾಗಿ ಹಝ್‌ರತ್ ಮಿರ್ಝಾ ವಸೀಂ ಅಹ್ಮದ್ ಸಾಹಿಬ್ ಅವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರು. ಮಿಯಾಂ ಸಾಹಿಬರು ಶಿವಮೊಗ್ಗಕ್ಕೆ ಆಗಮಿಸಿದಾಗ ಅವರೊಂದಿಗೆ ಬಹಳಷ್ಟು ಸಮಯ ಕಳೆಯುತ್ತಿದ್ದರು. ಅಂದಿನ ಕಾಲದಲ್ಲಿ ಮಿಯಾಂ ಸಾಹಿಬ್ ಆಗಮಿಸಿದಾಗ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು.

ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬರು ಓರ್ವ ಪತ್ನಿ, 10 ಪುತ್ರರು, 2 ಪುತ್ರಿಯರನ್ನು ಮತ್ತು ಮೊಮ್ಮಕ್ಕಳನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಅವರ ಸಂತಾನದಲ್ಲಿ ಅನೇಕರು ಜಮಾಅತಿನ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ ಅವರ ಓರ್ವ ಮೊಮ್ಮಗ ಆದ ನಾನು ತಾರಿಖ್ ಅಹ್ಮದ್ ಇದ್ರೀಸ್. ಮುಬಲ್ಲಿಗ್ ಆಗಿ ಈಗ ಬದರ್ ಕನ್ನಡ ವಾರಪತ್ರಿಕೆಯ ಸಂಪಾದಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಅವರ ಇನ್ನೊಬ್ಬ ಮೊಮ್ಮಗ ಜನಾಬ್ ಮೀರ್ ಅಝೀಮ್ ಝಿಕ್ರಿಯ ಸಾಹಿಬರು ಭಾರತದ ನಾಯಿಬ್ ಸದರ್ ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಹಿರಿಯ ಸೊಸೆ ಅಮತುಲ್ ರಹೀಮ್ ಸಾಹಿಬರವರು ಲಜ್ನಾ ಇಮಾಇಲ್ಲಾಹದ ಜಿಲ್ಲಾಧ್ಯಕ್ಷರಾಗಿದ್ದಾರೆ. ಅವರ ಇನ್ನೋರ್ವ ಮಗ ಮೀರ್ ಅನ್ಸಾರುಲ್ಲಾಹ್ ಸಾಹಿಬರು ಮಜ್ಲಿಸ್ ಅನ್ಸಾರುಲ್ಲಾದ ಜಿಲ್ಲಾ ನಾಝಿಮ್ ಆಗಿದ್ದಾರೆ. ಮತ್ತೋರ್ವ ಮೊಮ್ಮಗ ಮೀರ್ ಮಸೀಉರ್‌ರ‌ಹ್ಮಾನ್ ಸಾಹಿಬರು ಜಿಲ್ಲಾ ಖಾಯಿದ್ ಆಗಿ ಜಮಾಅತಿನ ಸೇವೆ ಸಲ್ಲಿಸುತ್ತಿದ್ದಾರೆ.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು, ಮೊಮ್ಮಕ್ಕಳು ಅವರ ಹೆಜ್ಜೆ ಗುರುತಲ್ಲಿ ಚಲಿಸುವ ಭಾಗ್ಯ ಗಳಿಸಲಿ. ಸಾತ್ವಿಕರೂ ಧರ್ಮಕ್ಕೆ ಸೇವೆ ಮಾಡುವವರೂ ಖಿಲಾಫತ್‌ನೊಂದಿಗೆ ಯಾವಾಗಲೂ ನಿಷ್ಠಾವಂತ ಸಂಬಂಧ ಸ್ಥಾಪಿಸುವವರೂ ಆಗಲಿ – ಆಮೀನ್. **(ಸಂಪಾದಕ)**

---

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಎಲ್ಲರಿಗಿಂತ ದೊಡ್ಡ ದುಷ್ಕರ್ಮಿಯಾಗಿರುತ್ತಾನೆ. ಇದು ಎಂತಹ ಉತ್ತಮ ದರ್ಜೆಯ ಶಿಕ್ಷಣವಾಗಿದೆ, ಅದನ್ನು ಇಸ್ಲಾಮ್ ಪ್ರಸ್ತುತಪಡಿಸಿದೆ. ಅದನ್ನು ಮುಂದಿರಿಸಿರಿ. ಅದರ ಮುಂದೆ ಲೋಕದ ಯಾವ ದರ್ಮವು ನಿಲ್ಲಲ್ಲು ಸಾಧ್ಯವಿಲ್ಲ. ಮುಸಲ್ಮಾನರ ನಡತೆಯನ್ನು ನೋಡಬೇಡಿ, ಬದಲು ಅಲ್ಲಾಹನ ಆಜ್ಞೆ ಮತ್ತು ಶಿಕ್ಷಣವನ್ನು ನೋಡಿರಿ. ಅಲ್ಲಾಹನು ಹೇಳುವನು. ಯಾರಿಗೂ ಅಲ್ಲಾಹನ ಸ್ಮರಣೆಯಿಂದ ತಡೆಯುವ ಹಕ್ಕಿಲ್ಲ. ಯಾರಾದರು ಮಸೀದಿಯಲ್ಲಿ ಬಂದು ದೇವಸ್ಮರಣೆ ಮಾಡಬಯಸಿದರೆ ಅಥವಾ ತಮ್ಮದೇ ರೀತಿಯಲ್ಲಿ ದೇವಾರಾದನೆ ಮಾಡಬಯಸಿದರೆ ಅದನ್ನು ತಡೆಯುವುದು ಧರ್ಮಬಾಹಿರ ಕೆಲಸವಾಗಿದೆ. ಯಾವೊಬ್ಬ ಹಿಂದೂ–ಸಿಖ್ ಅಥವಾ ಕ್ರೈಸ್ತರು ಮಸೀದಿಯಲ್ಲಿ ಬಂದು ತಮ್ಮದೇ ರೀತಿಯಲ್ಲಿ ದೇವಾರಾಧನೆ ಮಾಡಬಯಸಿದರೆ ಯಾವ ಮುಸ್ಲಿಮನಿಗೂ ಅವನನ್ನು ತಡೆಯುವ ಹಕ್ಕಿಲ್ಲ. ಯಾರಾದರೂ ಬಾಜಬಜಂತರಿ ಊದುವುದು, ಕುಣಿಯುವುದು ನಮ್ಮ ಆರಾಧನೆ ಕ್ರಮವಾಗಿದೆ ಎಂದು ಹೇಳಿದರೆ ನಾವು ಅವರಿಗೆ ಹೇಳುವೆವು. ಹೊರಗೆ ಹೋಗಿ ಆ ಕೆಲಸ ಮಾಡಿಕೊಳ್ಳಿ, ದೇವಸ್ಮರಣೆ ಮಸೀದಿಯಲ್ಲಿ ಬಂದು ಮಾಡಬಹುದು.

ಈ ಕ್ರಮಕ್ಕೆಗೊಂಡ ಮೊಟ್ಟಮೊದಲ ಮನುಷ್ಯನೆಂದರೆ ನಮ್ಮ ಹಝ್‌ರತ್ ರಸೂಲುಲ್ಲಾಹ್(ಸ) ರವರಾಗಿದ್ದಾರೆ. ಅವರು ನಜ್ರಾನಿನ ಕ್ರೈಸ್ತರಿಗೆ ತನ್ನ ಮಸೀದಿಯಲ್ಲಿ ದೇವಾರಾಧನೆ ಮಾಡಲು ಅನುಮತಿ ನೀಡಿದರು. ಝಾದಲ್ ಮಿಆದ್‌ನಲ್ಲಿ ಹೀಗೆ ಬರೆಯಲಾಗಿದೆ **ಲಮ್ಮಾ ಖದಿಮ ವಫ್‌ದು ನಜ್ರಾನ ಅಲಾ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ ದಖಲೂ ಅಲೈಹಿ ಮಸ್ಜಿದಹೂ ಬಅದಲ್ ಅಸ್‌ರೆ ಫಹಾನತ್ ಸಲಾತುಹುಮ್ ಫಖಾಲೂ ಅಯುಸಲ್ಲೂನ ಫೀ ಮಸ್‌ಜಿದಿಹೀ ಫಅರಾದನ್ನಾಸು ಮನ್‌ಅಹುಮ್ ಫಖಾಲ ರಸೂಲಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ ದಔಹುಮ್ ಫಸ್ತಖ್ಬಲುಲ್‌ಮಶ್ರಿಕ ಫಸಲ್ಲೂ ಸಲವಾತುಹುಮ್**. (ಝಾದಲ್ ಮಿಆದ್, ಸಂಪುಟ–2, ಪುಟ–35) ಅರ್ಥಾತ್ ರಸೂಲುಲ್ಲಾಹ್‌ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರ ಬಳಿ ನಜ್ರಾನ್ ಕ್ರೈಸ್ತರ ಒಂದು ತಂಡ ಬಂದಿತ್ತು. ಆ ಜನರು ಅಸರ್ ನಮಾಝ್ ನಂತರ ಮಸ್ಜಿದ್ ನಬ್ವಿ (ಪ್ರವಾದಿಯವರ ಮಸೀದಿ) ಗೆ ಬಂದು ಮತ್ತು ಮಾತುಕತೆ ನಡೆಸಿದರು. ಮಾತುಕತೆಯ ನಡುವೆ ಅವರಿಗೆ ಅವರ ಆರಾಧನೆ ಸಮಯ ಬಂದಿತು. (ಬಹುಶಃ ಅದು ಭಾನುವಾರದ ದಿನವಾಗಿತ್ತು) ಅದಾಗ್ಯೂ ಅವರು ಅಲ್ಲಿ ಮಸೀದಿಯಲ್ಲಿ ತಮ್ಮದೇ ರೀತಿಯಲ್ಲಿ ಆರಾಧನೆ ಮಾಡಲು ಸಿದ್ಧರಾದರು. ಜನರು ಅವರನ್ನು ತಡೆಯ ಬಯಸಿದರು. ಆದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು. ಹಾಗೆ ಮಾಡಬೇಡಿರಿ. ಆಗ ಅವರು ಅದೇ ಜಾಗದಲ್ಲಿ ಪೂರ್ವ ದಿಕ್ಕಿಗೆ ಮುಖ ಮಾಡಿ ತಮ್ಮದೇ ರೀತಿಯಲ್ಲಿ ಆರಾಧನೆ ಮಾಡಿಕೊಂಡರು.

ಆದುದರಿಂದ ಮಸೀದಿಗಳಲ್ಲಿ ಅಲ್ಲಾಹನ ಆರಾಧನೆ ಮಾಡುವವರನ್ನು ತಡೆಯುವ ಹಕ್ಕು ಯಾರಿಗೂ ಇಲ್ಲ. ಎಲ್ಲ ಸಮುದಾಯಗಳು ಅದರಂತೆ ನಡೆದು ಕೊಂಡರೆ ಪ್ರಚಲಿತವಿರುವ ಎಲ್ಲ ಜಗಳಗಳು ಅಂತ್ಯಗೊಳ್ಳಬಹುದು. ಹೀಗೆಯೇ ಎಲ್ಲ ಸಮುದಾಯಗಳು ತಮ್ಮ ಆರಾಧನ ಸ್ಥಳಗಳಲ್ಲಿ ಇತರರಿಗೆ ಬರಲು ಬಿಟ್ಟರೆ ಮತ್ತು ಅಲ್ಲಿ ಆರಾಧನೆ ಹಾಗೂ ದೇವಸ್ಮರಣೆ ಮಾಡಲು ಅನುಮತಿ ನೀಡಿದರೆ ಪರಸ್ಪರ ದ್ವೇಷಭಾವನೆಗಳು ಮತ್ತು ಜಗಳ ಹುಟ್ಟುವುದೇ ಇಲ್ಲ. ಮತ್ತು ಲೋಕದಲ್ಲಿ ಎಲ್ಲಾ ಕಡೆ ಶಾಂತಿ ಸ್ಥಾಪನೆಯಾಗಬಹುದು. ಮುಸಲ್ಮಾನರ ಕರ್ತವ್ಯ ಸಹ ಇದಾಗಿದೆ. ಅವರು ತಮ್ಮ ನಡವಳಿಕೆಯ ಬಗ್ಗೆ ವಿಚಾರಿಸಿ ಅವಲೋಕನ ಮಾಡಿಕೊಳ್ಳಬೇಕು. ನಾವು ಈ ಶಿಕ್ಷಣದ ಮೇಲೆ ಪೂರ್ಣ ರೀತಿಯಲ್ಲಿ ನಡೆದುಕೊಳ್ಳುವವ ರಾಗಿದ್ದೇವೆಯೇ, ಪವಿತ್ರ ಖುರ್‌ಆನ್ ನೀಡುವ ಪಾಠ ರಸೂಲುಲ್ಲಾಹ್‌ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರ ಜೀವನ ಕ್ರಮದ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆಯೋ ಅಥವಾ ಅದರ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೇವೆ ಎಂದು. ನನ್ನ ದೃಷ್ಟಿಯಲ್ಲಿ ಈ ವಚನ ಅಹ್ಮದಿಯೇತರರಿಗೆ ಹಾಗೂ ನಮಗೂ ಒಂದು ನಿರ್ಣಾಯಕ ವಚನ ಆಗಿದೆ. **(ತಫ್ಸೀರ್ ಕಬೀರ್, ಸಂಪುಟ–2, ಪುಟ–130 ರಿಂದ 132, ಮುದ್ರಣ ಖಾದಿಯಾನ್ 2010)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 10 September 2020, Issue No. 35

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 34ರ ವರದಿಯ ಉಳಿದ ಭಾಗ)**

ಮೇಯರ್ ಸಾಹಿಬ್ ಹೇಳೀದರು. multifunctional Hall ಗೋಡೆಯ ಮೇಲೆ ನನಗೆ ಜಮಾಅತ್ತಿನ ಈ ಧ್ಯೇಯವಾಕ್ಯ ಓದಲು ಸಿಕ್ಕಿತು. ಪ್ರೀತಿ ಎಲ್ಲರೊಂದಿಗೆ ದ್ವೇಷ ಬೇಡ ಯಾರೊಂದಿಗೂ" ಇದೊಂದು ಅತ್ಯಂತ ಪ್ರೀತಿಯ Motto ಆಗಿದೆ ಮತ್ತು ಈ ಮಾತು ಅತ್ಯುತ್ತಮವಾಗಿದೆ. ಅದನ್ನು ಈ ಸಭಾಂಗಣದಲ್ಲಿ ಹಾಕಲಾಗಿದೆ. ಅಲ್ಲಿ ಸರ್ವಧರ್ಮಗಳ ಸಭೆಗಳು ನಡೆಯುವುವು.

ಮೇಯರ್ ಸಾಹಿಬ್ ಹೇಳಿದರು. ಇಡೀ ಲೋಕವೇ ಸಮೀಪಿಸುತ್ತಿದೆ ಮತ್ತು ಪರಸ್ಪರ ಒಟ್ಟುಗೂಡುತ್ತಿದೆ. HANAU ನಗರದಲ್ಲಿ 127 ವಿವಿಧ ಸಮುದಾಯಗಳ ಜನರು ನೆಲೆಸಿದ್ದಾರೆ ಮತ್ತು 20 ವಿಭಿನ್ನ ಧರ್ಮಗಳ ಜನರು ನೆಲೆಸಿದ್ದಾರೆ.

ಅಹ್ಮದಿಯಾ ಜಮಾಅತಿಗೆ ಇಲ್ಲಿ ನೀಡಲಾದ ಸ್ಥಾನಮಾನ ಮತ್ತು ಹಕ್ಕುಗಳು ಚರ್ಚ್‌ಗಳ ಸಮಾನ ನೀಡಲಾಗಿದೆ. ಇದು ಅಹ್ಮದಿಯಾ ಜಮಾಅತಿನ ಉನ್ನತ ಮೌಲ್ಯಗಳಿಗೆ ಸಾಕ್ಷಿಯಾಗಿದೆ.

ಮೇಯರ್ ಸಾಹಿಬ್ ಹೇಳಿದರು. ಈ ಮಸೀದಿಯಿಂದ, ಒಬ್ಬರು ಮತ್ತೊಬ್ಬರಿಗೆ ಸಮಾನತೆ ಮತ್ತು ಗೌರವಿಸುವ ಸಂಸ್ಕೃತಿ ಬೆಳೆಯುವುದು. ಈ ಗೃಹ ಎಲ್ಲರಿಗಾಗಿ ತೆರೆದಿರುತ್ತದೆ ಖಲಿಫತುಲ್ ಮಸೀಹ್ ಅವರ ಉಪಸ್ಥಿತಿಯಲ್ಲಿ ಇದರ ಉದ್ಘಾಟನೆ ಆಗುತ್ತಿದ್ದು ನನಗೆ ಸಂತೋಷದ ಸಂಗತಿಯಾಗಿದೆ.

ಅನಂತರ HESSEN ರಾಜ್ಯದ ಜಿಲ್ಲಾಧಿಕಾರಿ ERIC PIPA ಸಾಹಿಬ್ ಅವರು ಸಂಸದರು ಸಹ ಆಗಿರುವವರು. ತಮ್ಮ ಪರಿಚಯ ಭಾಷಣ ನೀಡುತ್ತ ಹೇಳಿದರು. ನನಗೆ ಇಂದಿನ ಸಮಾರಂಭದಲ್ಲಿ ಉಪಸ್ಥಿತವಾಗಿರುವುದು ತುಂಬ ಸಂತೋಷದ ವಿಷಯವಾಗಿದೆ. ಇಂದು ನಾವೆಲ್ಲರೂ ಒಂದು ವಿಶೇಷವಾದ ಉದ್ದೇಶ ಹೊಂದಿ ಒಟ್ಟಾಗಿದ್ದೇವೆ. ಇದರ ಅರ್ಥ ನಾವೆಲ್ಲರೂ ಸೇರಿ ತೆರೆದ ಮನಸ್ಸಿನಿಂದ ಈ ಸಮಾರಂಭವನ್ನು ಆಚರಿಸುತ್ತಿದ್ದೇವೆ ಎಂದು. ಜಮಾಅತ್ ಇಲ್ಲಿ ಮಸೀದಿ ನಿರ್ಮಿಸುವುದು ಈ ಮಾತನ್ನು ಸ್ಪಷ್ಟಪಡಿಸಲು, ಸರಿಯಾದ ಮಾರ್ಗವಾಗಿದೆ. ನೀವು ಈ ಸ್ಥಳದಲ್ಲಿ ಶಾಂತಿಯಿಂದ ಪರಸ್ಪರ ಒಟ್ಟುಗೂಡಿ ಇರಬಯಸುತ್ತೀರಿ. ಅದೇ ರೀತಿ ಪರಸ್ಪರ ಒಗ್ಗಟ್ಟು ಸ್ಥಾಪಿಸಬಹುದಾಗಿದೆ.

ನಮಗೆ ಈ ವಿಷಯದ ಕುರಿತು ಸಂತೋಷವಾಗುತ್ತದೆ. ಅಹ್ಮದಿಯಾ ಜಮಾಅತ್ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಅದೇ ರೀತಿ ಈ ಜಮಾಅತ್ ಐಕ್ಯತೆ (Integration) ಉಂಟು ಮಾಡುವುದರಲ್ಲಿ ಯಾವಾಗಲೂ ಮುಂದಿದೆ. ಅವರ motto "ಶಾಂತಿ ಎಲ್ಲಿರಿಗಾಗಿ, ದ್ವೇಷ ಯಾರೊಂದಿಗೂ ಇಲ್ಲ" ವೆಂಬುದು ಸಾಕ್ಷಿಯಾಗಿದೆ. ಅದಲ್ಲದೆ ಅಹ್ಮದಿಯಾ ಜಮಾಅತ್ ಇಲ್ಲಿ ತನ್ನ ಖುತುಬ ಜುಮಅ ಜರ್ಮನ್ ಭಾಷೆಯಲ್ಲಿಯೂ ನೀಡುತ್ತಿದೆ. ಇದು ಸಂತಸದ ವಿಷಯವಾಗಿದೆ.

ಜರ್ಮನಿಯಲ್ಲಿ 4.1 ಮಿಲಿಯರ್ ಮುಸ್ಲಿಮ್ ಜನಸಂಖ್ಯೆ ಇದೆ. ಮತ್ತು ಅವರ 210 ಮಸೀದಿಗಳು ಇಲ್ಲಿವೆ. 153 ವಿಭಿನ್ನ ಸಮುದಾಯಗಳ ಜನರು ನಮ್ಮ ಜಿಲ್ಲೆ MAIN KINZIG-KREIS ನಲ್ಲಿ ವಾಸಿಸುತ್ತಿದ್ದಾರೆ. ನಾವೆಲ್ಲರೂ ಸೇರಿ ಪರಸ್ಪರ ಶಾಂತಿ ಪ್ರೀತಿಯಿಂದ ವಾಸಿಸುತ್ತೇವೆ.

ಅನಂತರ ನೆಫ್ನಲ್ ಪಾರ್ಲಿಮೆಂಟಿನ ಜರ್ಮನಿಯ ಸದಸ್ಯರು FRAU MULLER ಸಾಹಿಬ ತಮ್ಮ ಪರಿಚಯ ಭಾಷಣದಲ್ಲಿ ಹೇಳಿದರು.

ಗೌರವಾನ್ವಿತ ಖಲೀಪತುಲ್ ಮಸೀಹ್! ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಈ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದಕ್ಕೆ ನನಗೆ ತುಂಬ ಸಂತೋಷವಿದೆ. ಇದು ಅಲ್ಲಾಹನ ಗೃಹಗಳಲ್ಲಿ ಒಂದು ಹೆಚ್ಚಳವಾಗಿದೆ. ಮಸೀದಿಯ ನಿರ್ಮಾಣವು ನಾವು ಶಾಂತಿ ಮತ್ತು ಸಮಾನತೆಯಿಂದ ಇರುವವರಾಗಿದ್ದೇವೆ ಎಂಬುದಕ್ಕೆ ಸಾಕ್ಷಿಯಾಗಿದೆ.

ನಮ್ಮ motto ಅದು multi funciton hall ಗೋಡೆಯ ಬರಹದಲ್ಲಿದೆ "ಪ್ರೀತಿ ಎಲ್ಲರಿಗಾಗಿ ದ್ವೇಷವಿಲ್ಲ ಯಾರೊಂದಿಗೂ' ಅಹ್ಮದಿಯಾ ಜಮಅತ್ ಶಾಂತಿ ಮತ್ತು ಪ್ರೀತಿಯ ಹಸ್ತ ನಮ್ಮೆಡೆ ಚಾಚುತ್ತಿದೆ ಎಂಬುದಕ್ಕೆ ಸಾಕ್ಷ್ಯವಾಗಿದೆ. ಅವರು ಹೇಳಿದರು. ಇಸ್ಲಾಂ ಧರ್ಮವು ಜರ್ಮನಯಲ್ಲಿ 3ನೇ ಸ್ಥಾನದಲ್ಲಿದೆ. ನಮಗೋಸ್ಕರ ಒಂದಾಗಿ ಇರುವುದಷ್ಟೇ ಸಾಲದು ಬದಲು ನಾವು ಕೂಡಿ ಬಾಳಬೇಕಾಗಿದೆ.

ಮಸೀದಿಯ ನಿರ್ಮಾಣವು ಸೂಚಿಸುತ್ತದೆ. ಇದು ಅಹ್ಮದಿಯರ ಜನ್ಮಸ್ಥಳವಾಗಿದೆ. ಅಹ್ಮದಿಯರು ಒಬ್ಬರು ಮತ್ತೊಬ್ಬರೊಡನೆ ಗೌರವಾದರದ ಮೇಲೆ ಒತ್ತು ನೀಡುವವರಾಗಿದ್ದಾರೆ. ಅಹ್ಮದಿಯಾ ಜಮಾಅತ್ ಒಂದು ಸುವ್ಯವಸ್ಥಿತ ಜಮಾಅತ್ ಆಗಿದೆ ಮತ್ತು ಇಸ್ಲಾಮಿಕ್ ಶಿಕ್ಷಣವು ಎಲ್ಲ ಕಾಲಕ್ಕು ಅನ್ವಯವಾಗುವಂತಹ ಸುಂದರ ಶಿಕ್ಷಣವಾಗಿದೆ ಎಂದು ಪ್ರಸ್ತುತಪಡಿಸುತ್ತಿದೆ. ಇಂದು HESSEN ರಾಜ್ಯದಲ್ಲಿ ಮುಸ್ಲಿಮ್ ಸಂಘಟನೆಗಳಲ್ಲಿ ಅಹ್ಮದಿಯವರಿಗೆ ಮಾತ್ರ ಶಾಲೆಗಳಲ್ಲಿ ಇಸ್ಲಾಮಿಕ್ ಶಿಕ್ಷಣ ನೀಡುವ ಹಕ್ಕಿದೆ.

ಅದಾದ ನಂತರ ನೆಫ್ನಲ್ ಪಾರ್ಲಿಮೆಂಟ್ ಜರ್ಮನಿಯ ಸದಸ್ಯರು FRAU SCHULZ ASCHE ಅವರು ತಮ್ಮ ಪರಿಚಯ ಭಾಷಣ ನೀಡುತ್ತ ಹೇಳಿದರು. ಇಂದು ನನಗೆ ಈ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ತುಂಬ ಸಂತೋಷವಾಗುತ್ತಿದೆ. ಇದಕ್ಕಿಂತ ಮುಂಚೆ FLOERSHEIM ನಗರದ ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ನಾನು ಉಪಸ್ಥಿತನಾಗಿದ್ದೆ.

ಅವರು ಹೇಳಿದರು. ನಮಗೆ ಇಸ್ಲಾಮಿನ ಶಿಕ್ಷಣದ ಕುರಿತು ಆತಂಕಗಳಿದ್ದರೆ ನಾವೆಲ್ಲ ಸೇರಿ ಶಾಂತಿಯ ಸಂದೇಶ ನೀಡುವುದು ಅನಿವಾರ್ಯವಾಗಿದೆ. ಇಂದು ಇಲ್ಲಿ ಮಸೀದಿಯ ನಿರ್ಮಾಣ ಸೂಚಿಸುವುದೇನೆಂದರೆ ನಾವೆಲ್ಲರೂ ಸೇರಿ ಶಾಂತಿ ಪ್ರೀತಿಯಿಂದ ಸೌಹಾರ್ದತೆಯಿಂದ ಇರಬಯಸುತ್ತೇವೆ ಎಂದು. ಈ ಮಸೀದಿಯು ಅಹ್ಮದಿಯರ ಇಂದು ಜನ್ಮಸ್ಥಳವಾಗಿದೆ ಎಂಬುದಕ್ಕೆ ಸಾಕ್ಷ್ಯವಾಗಿದೆ. ಅವರು ಈ ಮಾತನ್ನು ಹೇಳಿದರು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಕಾಲಕ್ಕೆ ತಕ್ಕಂತೆ ಇಸ್ಲಮಿನ ಶಿಕ್ಷಣ ಪ್ರಸ್ತುತಪಡಿಸುತ್ತಿದೆ. ಪುರುಷ ಮಹಿಳೆಯರ ಹಕ್ಕುಗಳು, ಕರ್ತವ್ಯಗಳು ಮತ್ತು ಸಮಾನತೆ ಕುರಿತು ಒತ್ತು ನೀಡುತ್ತಿದೆ. ಅವರು ತಮ್ಮ ಸಂಬೋಧನೆಯಲ್ಲಿ ಹೇಳಿದರು. ಅಹ್ಮದಿಯಾ ಜಮಾಅತ್ ಈಗಂತೂ ನಮಗೆ indispensable ಆಗಿರುತ್ತದೆ ಅದಕ್ಕೆ ಒಂದು ಕಾರಣ ಜರ್ಮನ್ ಶಾಲೆಗಳಿಗಾಗಿ ಇಸ್ಲಾಮಿ ಶಿಕ್ಷಣದ ಪಠ್ಯ ಮತ್ತು ಅದರ ಬೋಧನೆಗಾಗಿ ಶಿಕ್ಷಕರನ್ನು ಸಿದ್ಧಗೊಳಿಸುವುದಾಗಿದೆ. ಇತರ ಮಕ್ಕಳು ಇಸ್ಲಾಮಿನ ಶಿಕ್ಷಣ ಪಡೆಯುವವರ ಜೊತೆಯಲ್ಲಿ ಅಹ್ಮದಿ ಮಕ್ಕಳೂ ಇಸ್ಲಾಮಿ ಶಿಕ್ಷಣ ಪಡೆಯುತ್ತಾರೆ. ಅಹ್ಮದಿಯಾ ಜಮಾಅತ್ ತಮ್ಮ ವಿವಿಧ ಕಾರ್ಯಕ್ರಮಗಳಲ್ಲಿ ಮತ್ತು ಜನಹಿತ ಕಾರ್ಯಗಳ ಮೂಲಕ ಪ್ರಗತಿ ಸಾಧಿಸುತ್ತಿದೆ ಮತ್ತು ಸೇವೆಯು ಸಲ್ಲಿಸುತ್ತಿದೆ. ಕೊನೆಯಲ್ಲಿ ನನ್ನ ಅಭಿಲಾಷೆ ಏನೆಂದರೆ ಈ ಮಸೀದಿ ನಾವೆಲ್ಲರೂ ಒಟ್ಟುಗೂಡುವ ಸ್ಥಾನವಾಗಲಿ ಅದರಿಂದ ಒಬ್ಬರು ಇನ್ನೊಬ್ಬರನ್ನು ತಿಳಿದುಕೊಳ್ಳಲು ಸಹಾಯಕವಾಗುವುದು.

ಅನಂತರ ನೆಫ್ನಲ್ ಜರ್ಮನ್ ಪಾರ್ಲಿಮೆಂಟಿನ ಸದಸ್ಯರು FRAUCHRISTINE BUCHHOLZ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಅಹ್ಮದಿಯಾ ಜಮಾಅತಿನ ಸದಸ್ಯರಿಗೆ ಇಂದಿನ ದಿನವು ತುಂಬ ಸಂತೋಷದ ದಿನವಾಗಿದೆ. ಏಕೆಂದರೆ ಈಗ ನೀವು ಒಂದು ಸಣ್ಣದಾದ ಕೋಣೆಯಲ್ಲಿ ಅಲ್ಲ. ಬದಲು ಒಂದು ಬೃಹತ್ ಮಸೀದಿಯಲ್ಲಿ ತಮ್ಮ ಧರ್ಮಾಚರಣೆ ಮಾಡಬಹುದಾಗಿದೆ.

ಈ ಮಸೀದಿಯ ನಿರ್ಮಾಣವು ಉಗ್ರವಾದಿಗಳಿಗು ಒಂದು ಒಳ್ಳೆಯ ಪಾಠವಾಗಿದೆ. ಅವರು ಮನುಷ್ಯರ ಮಧ್ಯ ದ್ವೇಷವನ್ನು ಬಿತ್ತುತ್ತಾರೆ.

**(ಮುಂದುವರಿಯುವುದು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.